
# ಅನುದಿನದ ಆಹಾರ

May 2018



Tree - 19
Fruit - 5
Pages - 44

Annual Subscription Rs. 100/-
Single Copy Rs. 10/-

# ನಮ್ಮ ರಾಜ್ಯಕ್ಕಾಗಿ ಪ್ರಾರ್ಥಿಸೋಣ



ಕರ್ನಾಟಕದ ಉಜ್ಜೀವನಕ್ಕಾಗಿ, ರಕ್ಷಣೆಗಾಗಿ, ಮತ್ತು ಪ್ರತಿಯೊಂದು ಸೇವಕರುಗಳಿಗಾಗಿ, ಸೇವೆಗಳಿಗಾಗಿ ಪ್ರಾರ್ಥಿಸುವದು ಕರ್ತನು ನಮಗೆ ಕೊಟ್ಟಿರುವ ಬಹಳ ಮುಖ್ಯವಾದ ಒಂದು ಜವಾಬ್ದಾರಿ.

ಪ್ರತಿ ನಿತ್ಯವೂ ನಮ್ಮ ರಾಜ್ಯದ 30 ಜಿಲ್ಲೆಗಳ ಹೆಸರನ್ನು ಹೇಳಿ ಆತ್ಮಭಾರದೊಂದಿಗೆ ಪ್ರಾರ್ಥಿಸೋಣ. ಕರ್ನಾಟಕದ ಮೇಲೆ ಕರ್ತನ ಆಶೀರ್ವಾದವನ್ನು ಕೇಳಿಕೊಳ್ಳೋಣ.

## ಚುನಾವಣೆಗಾಗಿ ಪ್ರಾರ್ಥಿಸೋಣ

**ಕರ್ನಾಟಕದ ಚುನಾವಣೆಗಾಗಿ ನಾವು ಪ್ರಾರ್ಥಿಸಬೇಕಾದ ಸಮಯ ಇದಾಗಿದೆ.**

ಸತ್ಯವೇದದಲ್ಲಿ 1 ತಿಮೊ 2:1–4 ರಲ್ಲಿ ಕರ್ತನು ತಿಳಿಸಿರುವಂತೆ

**ಅರಸರುಗಳಿಗಾಗಿ ಮತ್ತು ಅಧಿಕಾರಿಗಳಿಗಾಗಿ ನಾವು ಭಾರದಿಂದ, ಕಣ್ಣೀರಿನಿಂದ ಪ್ರಾರ್ಥಿಸಬೇಕಾಗಿದೆ. ಇದು ನಮಗೆ ಕೊಟ್ಟಿರುವ ಆಜ್ಞೆಯಾಗಿದೆ.**

* ಕರ್ತನ ಚಿತ್ತವನ್ನು ನೆರವೇರಿಸುವ ನಾಯಕರು ನಮ್ಮ ರಾಜ್ಯದಲ್ಲಿ ಆಳ್ವಿಕೆಗೆ ಬರುವಂತೆ ಪ್ರಾರ್ಥಿಸೋಣ.
* ಚುನಾವಣೆಯಲ್ಲಿ ಕರ್ತನ ಒಡೆತನವನ್ನು, ಹತೋಟಿಯನ್ನು ಕೇಳಿಕೊಳ್ಳೋಣ ಚುನಾವಣೆಯ ಸಮಯದಲ್ಲಿ ಮೋಸ, ವಂಚನೆಗಳಿರದಂತೆ ಶಾಂತಿ, ಸಮಾಧಾನ ನೆಲೆಗೊಳ್ಳಲು ಪ್ರಾರ್ಥಿಸೋಣ.
* ಚುನಾವಣಾ ಆಯೋಗದ ಅಧಿಕಾರಿಗಳು ಮತ್ತು ಪೋಲಿಸ್ ಇಲಾಖೆಯು ಉತ್ತಮವಾಗಿ ಕಾರ್ಯ ನಿರ್ವಹಿಸಲು ಕರ್ತನ ಸುಭದ್ರತೆಗಾಗಿ ಪ್ರಾರ್ಥಿಸೋಣ.

# ಅನುದಿನದ ಆಹಾರ
## Anudhinada Ahara

ಮೇ | 2018 | MAY

ಮರ 19 ಹಣ್ಣು 05 | Tree 19 Fruit 05


## ಭಕ್ತಿಯುಳ್ಳವನೇ, ಕಳವಳಗೊಳ್ಳದಿರು!

**"ಯೆಹೋವನು ತನ್ನ ಭಕ್ತರನ್ನು ತನಗೋಸ್ಕರ ಪ್ರತ್ಯೇಕಿಸಿಕೊಂಡಿದ್ದಾನೆಂದು ತಿಳಿದುಕೊಳ್ಳಿರಿ ನಾನು ಆತನಿಗೆ ಮೊರೆಯಿಡುವಾಗೆಲ್ಲಾ ಆತನು ಕೇಳುತ್ತಾನೆ" (ಕೀರ್ತ 4:3).**

ಭಕ್ತಿಯುಳ್ಳವರನ್ನು ಎರಡು ಭಾಗವಾಗಿ ವಿಂಗಡಿಸಬಹುದು. ಅನ್ಯಧರ್ಮದವರಾಗಿದ್ದರೂ, ಅವರಿಗೆ ದೊರೆತ ಬೆಳಕಿನಲ್ಲಿ ತಮ್ಮ ಮನಸ್ಸಾಕ್ಷಿಯಂತೆ ನಡೆದು, ತಾವು ನಂಬಿದ ದೇವರಲ್ಲಿ ಭಯಭಕ್ತಿಯುಳ್ಳವರು. ಹಾಗೆಯೇ ಕ್ರೈಸ್ತರಾಗಿರುವವರು, ಪ್ರಾರ್ಥನೆ, ಸತ್ಯವೇದ ಪಠಣ, ಸಭೆಕೂಡುವಿಕೆ ಎಂದು ಭಕ್ತಿಯುಳ್ಳವರಾಗಿದ್ದು ಕರ್ತನನ್ನು ಪ್ರೀತಿಸುವರು.

ಇಂದು ಪ್ರಪಂಚವು ಅಂತ್ಯಕ್ಕೆ ಬರಬರುತ್ತಾ ದುರ್ಮಾರ್ಗತನ, ಅಕ್ರಮ, ಅನೀತಿ ಅತಿಯಾಗಿ ತಲೆಎತ್ತಿ ನಿಂತಿರುವದು ಸ್ವಾರ್ಥ ಹೆಚ್ಚಿರುವದರಿಂದ, ಕೊಲೆ, ಕೊಳ್ಳೆ, ಕಳ್ಳತನ ಹೆಚ್ಚಾಗಿ ಬಿಟ್ಟಿರುವದು. ಜನರು ಮನಸ್ಸಾಕ್ಷಿ ಇಲ್ಲದವರಾಗಿ ನಡೆಯುತ್ತಿರುವರು. ಇಂಥಹ ಪರಿಸ್ಥಿತಿಯಲ್ಲಿ ಅಂದು ದಾವೀದನ ಪ್ರಾರ್ಥನೆ ಏನಾಗಿತ್ತು? "ಯೆಹೋವನೇ ರಕ್ಷಿಸು; ಭಕ್ತರು ಮುಗಿದು ಹೋಗಿದ್ದಾರೆ; ಜನರೊಳಗೆ ನಂಬಿಕೆಯುಳ್ಳವರು ಕಾಣಿಸುವದೇ ಇಲ್ಲ" (ಕೀರ್ತ 12:1) ಎಂಬುದು.

ನೀವು ದೇವಭಕ್ತಿಯುಳ್ಳವರಾಗಿರುವಾಗ, ಹಲವು ವೇಳೆಗಳಲ್ಲಿ ಸೈತಾನನಿಂದ ಶೋಧಿಸಲ್ಪಡುವಿರಿ. ಪ್ರಪಂಚ, ಶರೀರ, ಸೈತಾನ ನಿಮ್ಮನ್ನು ಎದುರಿಸಿ ನಿಲ್ಲುವದು. ನಿಮಗೆ ಎಷ್ಟು ಕೇಡುಮಾಡಲು ಸಾಧ್ಯವೋ ಅಷ್ಟನ್ನೂ ಮಾಡಲು ಸೈತಾನನು ಪ್ರಯತ್ನಿಸುವನು. ಆದರೆ ಅದನ್ನು ಕುರಿತು ಭಯಪಡಬೇಡಿರಿ. ಕರ್ತನು ನಿಮ್ಮನ್ನು ತನಗಾಗಿ ಆರಿಸಿಕೊಂಡಿರುವನು. ಜನರ ಮಧ್ಯದಲ್ಲೂ, ಜನಾಂಗಗಳ ಮಧ್ಯದಲ್ಲೂ, ಬಂಧುಗಳ ಮಧ್ಯದಲ್ಲೂ ನಿಮ್ಮನ್ನು ಬೇರ್ಪಡಿಸಿರುವನು. ಸೈತಾನನನ್ನು ಎದುರಿಸಲು ನಿಮಗೆ ಉನ್ನತ ಬಲವನ್ನು ನೀಡಿರುವನು. ನೀವು ಕರ್ತನಿಗೆ ಮೆಚ್ಚಿಗೆಯಾದದ್ದನ್ನು ಮಾಡುವದರಿಂದ ಕರ್ತನು ನಿಮ್ಮನ್ನು ಬಿಟ್ಟು ಹೋಗುವದಿಲ್ಲ. ನಿಮ್ಮ ಸಹಾಯಕ್ಕಾಗಿ ಸಾವಿರ, ಹತ್ತು ಸಾವಿರ ದೇವದೂತರನ್ನು ನೀಡಿರುವನು.

ಇಂದು ಭಯಂಕರವಾದ ಸ್ಥಿತಿಗತಿಗಳ ನಡುವೆ ದೇವಜನರು ಇರುವರು. ರಕ್ಷಿಸಲ್ಪಡದ ಗಂಡನಿಂದ ಹೆಂಡತಿಗೆ, ರಕ್ಷಿಸಲ್ಪಡದ ಹೆಂಡತಿಯಿಂದ ಗಂಡನಿಗೆ

**"ಯೆಹೋವನು ತನ್ನ ಭಕ್ತರನ್ನು ತನಗೋಸ್ಕರ ಪ್ರತ್ಯೇಕಿಸಿಕೊಂಡಿದ್ದಾನೆಂದು ತಿಳಿದು ಕೊಳ್ಳಿರಿ ನಾನು ಆತನಿಗೆ ಮೊರೆಯಿಡುವಾಗೆಲ್ಲಾ ಆತನು ಕೇಳುತ್ತಾನೆ" (ಕೀರ್ತ 4:3).**

ಭಕ್ತಿಯುಳ್ಳವರನ್ನು ಎರಡು ಭಾಗವಾಗಿ ವಿಂಗಡಿಸಬಹುದು. ಅನ್ಯಧರ್ಮದವರಾಗಿದ್ದರೂ, ಅವರಿಗೆ ದೊರೆತ ಬೆಳಕಿನಲ್ಲಿ ತಮ್ಮ ಮನಸ್ಸಾಕ್ಷಿಯಂತೆ ನಡೆದು, ತಾವು ನಂಬಿದ ದೇವರಲ್ಲಿ ಭಯಭಕ್ತಿಯುಳ್ಳವರು. ಹಾಗೆಯೇ ಕ್ರೈಸ್ತರಾಗಿರುವವರು, ಪ್ರಾರ್ಥನೆ, ಸತ್ಯವೇದ ಪಠಣ, ಸಭೆಕೂಡುವಿಕೆ ಎಂದು ಭಕ್ತಿಯುಳ್ಳವರಾಗಿದ್ದು ಕರ್ತನನ್ನು ಪ್ರೀತಿಸುವರು.

ಇಂದು ಪ್ರಪಂಚವು ಅಂತ್ಯಕ್ಕೆ ಬರಬರುತ್ತಾ ದುರ್ಮಾರ್ಗತನ, ಅಕ್ರಮ, ಅನೀತಿ ಅತಿಯಾಗಿ ತಲೆಎತ್ತಿ ನಿಂತಿರುವದು ಸ್ವಾರ್ಥ ಹೆಚ್ಚಿರುವದರಿಂದ, ಕೊಲೆ, ಕೊಳ್ಳೆ, ಕಳ್ಳತನ ಹೆಚ್ಚಾಗಿ ಬಿಟ್ಟಿರುವದು. ಜನರು ಮನಸ್ಸಾಕ್ಷಿ ಇಲ್ಲದವರಾಗಿ ನಡೆಯುತ್ತಿರುವರು. ಇಂಥಹ ಪರಿಸ್ಥಿತಿಯಲ್ಲಿ ಅಂದು ದಾವೀದನ ಪ್ರಾರ್ಥನೆ ಏನಾಗಿತ್ತು? "ಯೆಹೋವನೇ ರಕ್ಷಿಸು; ಭಕ್ತರು ಮುಗಿದು ಹೋಗಿದ್ದಾರೆ; ಜನರೊಳಗೆ ನಂಬಿಕೆಯುಳ್ಳವರು ಕಾಣಿಸುವದೇ ಇಲ್ಲ" (ಕೀರ್ತ 12:1) ಎಂಬುದು.

ನೀವು ದೇವಭಕ್ತಿಯುಳ್ಳವರಾಗಿರುವಾಗ, ಹಲವು ವೇಳೆಗಳಲ್ಲಿ ಸೈತಾನನಿಂದ ಶೋಧಿಸಲ್ಪಡುವಿರಿ. ಪ್ರಪಂಚ, ಶರೀರ, ಸೈತಾನ ನಿಮ್ಮನ್ನು ಎದುರಿಸಿ ನಿಲ್ಲುವದು. ನಿಮಗೆ ಎಷ್ಟು ಕೇಡುಮಾಡಲು ಸಾಧ್ಯವೋ ಅಷ್ಟನ್ನೂ ಮಾಡಲು ಸೈತಾನನು ಪ್ರಯತ್ನಿಸುವನು. ಆದರೆ ಅದನ್ನು ಕುರಿತು ಭಯಪಡಬೇಡಿರಿ. ಕರ್ತನು ನಿಮ್ಮನ್ನು ತನಗಾಗಿ ಆರಿಸಿಕೊಂಡಿರುವನು. ಜನರ ಮಧ್ಯದಲ್ಲೂ, ಜನಾಂಗಗಳ ಮಧ್ಯದಲ್ಲೂ, ಬಂಧುಗಳ ಮಧ್ಯದಲ್ಲೂ ನಿಮ್ಮನ್ನು ಬೇರ್ಪಡಿಸಿರುವನು. ಸೈತಾನನನ್ನು ಎದುರಿಸಲು ನಿಮಗೆ ಉನ್ನತ ಬಲವನ್ನು ನೀಡಿರುವನು. ನೀವು ಕರ್ತನಿಗೆ ಮೆಚ್ಚಿಗೆಯಾದದ್ದನ್ನು ಮಾಡುವದರಿಂದ ಕರ್ತನು ನಿಮ್ಮನ್ನು ಬಿಟ್ಟು ಹೋಗುವದಿಲ್ಲ. ನಿಮ್ಮ ಸಹಾಯಕ್ಕಾಗಿ ಸಾವಿರ, ಹತ್ತು ಸಾವಿರ ದೇವದೂತರನ್ನು ನೀಡಿರುವನು.

ಇಂದು ಭಯಂಕರವಾದ ಸ್ಥಿತಿಗತಿಗಳ ನಡುವೆ ದೇವಜನರು ಇರುವರು. ರಕ್ಷಿಸಲ್ಪಡದ ಗಂಡನಿಂದ ಹೆಂಡತಿಗೆ, ರಕ್ಷಿಸಲ್ಪಡದ ಹೆಂಡತಿಯಿಂದ ಗಂಡನಿಗೆ ಕಷ್ಟಗಳು. ವ್ಯಾಪಾರದಲ್ಲಿ ದುಷ್ಟರಿಂದ ತೊಂದರೆ, ಕೆಲಸದಲ್ಲಿ ಇತರರಿಂದ ತೊಂದರೆ. ಭಾಷೆ ಬೇಧಗಳಿಂದ ತೊಂದರೆ .ಆಚಾರ ವಿಚಾರಗಳ ವ್ಯತ್ಯಾಸದಿಂದ ನೀವು ದುಃಖದಿಂದಿರಬಹುದು ಕಳವಳಗೊಳ್ಳದಿರಿ! ಸೋತು ಹೋಗದಿರಿ.

**1.ಸಿಂಹಗಳ ನಡುವೆ :-**

ಇಂದು ನೀವು ದಾನಿಯೇಲನು ಸಿಂಹಗಳ ನಡುವೆ ಇದ್ದಂತೆ ಇರುವಿರಾ? ನಿಮ್ಮ ವೈರಿಯಾದ ಸೈತಾನನು, ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ತಿರುಗಾಡುತ್ತಿರುವನು...!

ದೇವಭಕ್ತಿಯುಳ್ಳ ದಾನಿಯೇಲನು ಸಿಂಹಗಳ ಗವಿಯಲ್ಲಿ ಹಾಕಲ್ಪಟ್ಟಾಗ,

ಅರಸನಾದ ದಾರ್ಯಾವೆಷನು ಮಾರಣೆಯ ದಿನ ಸೂರ್ಯೋದಯದ ಮೊದಲೇ ಗವಿಯ ಬಾಗಿಲಲ್ಲಿ ನಿಂತು "ದಾನಿಯೇಲನೇ, ಜೀವಸ್ವರೂಪನಾದ ದೇವರ ಸೇವಕನೇ ನೀನು ನಿತ್ಯವೂ ಭಜಿಸುವ ನಿನ್ನ ದೇವರು ನಿನ್ನನ್ನು ಸಿಂಹಗಳಿಂದ ಉದ್ಧರಿಸಶಕ್ತನಾದನೋ ಎಂದು ಕೇಳಿದನು. ಅದಕ್ಕೆ ದಾನಿಯೇಲನು "ಅರಸೇ ನನ್ನ ದೇವರು, ತನ್ನ ದೂತರನ್ನು ಕಳುಹಿಸಿ ಸಿಂಹಗಳ ಬಾಯಿಗಳನ್ನು ಬಂಧಿಸಿದನು. ಅವುಗಳಿಂದ ನನಗೆ ಯಾವ ಹಾನಿಯೂ ಆಗಲಿಲ್ಲ ಏಕೆಂದರೆ ಆತನ ದೃಷ್ಟಿಗೆ ನಾನು ನಿರ್ಮಲನಾಗಿ ಕಂಡುಬಂದೆನು" ಎಂದು ಹೇಳಿದನು (ದಾನಿ 6:20–22).

ಅದೇ ದೇವರು, ಇಂದಿಗೂ ಜೀವಿಸುತ್ತಿರುವನು ಸಿಂಹಗಳಂತಿರುವ ನಿಮ್ಮ ವೈರಿಗಳು ನಿಮ್ಮ ಸುತ್ತಲೂ ನಿಂತರೂ, ಯೂದಕುಲದ ಸಿಂಹನಾದ ಕರ್ತನು ನಿಮ್ಮ ಪಕ್ಷದಲ್ಲಿ ನಿಂತು ವೈರಿಗಳನ್ನು ಸದೆ ಬಡಿಯುವನು, ಕಳವಳಗೊಳ್ಳದಿರಿ. ಪರ್ವತಗಳು ಯೆರೂಸಲೇಮಿನ ಸುತ್ತಲೂ ಹೇಗೋ ಹಾಗೆಯೇ ಯೆಹೋವನು, ಇಂದಿನಿಂದ ಸದಾಕಾಲವೂ ತನ್ನ ಜನರ ಸುತ್ತಲೂ ಇರುವನು" (ಕೀರ್ತ 125:2). ನೀವಾದರೋ, ನಿಮ್ಮ ದೇವಭಕ್ತಿಯನ್ನು ದೃಢವಾಗಿ ಕಾಪಾಡಿಕೊಳ್ಳಿರಿ ಆತನ ದೃಷ್ಟಿಗೆ ಮೆಚ್ಚಿಕೆಯಾಗಿ ನಡೆದುಕೊಳ್ಳಿರಿ.

## 2.ಮುಳ್ಳುಗಳ ಮಧ್ಯದಲ್ಲಿ :–

**"ನನ್ನ ಪ್ರಿಯಳು ಮುಳ್ಳುಗಳ ಮಧ್ಯದಲ್ಲಿನ ತಾವರೆಯಂತೆ ಸ್ತ್ರೀಯರಲ್ಲಿ ಶ್ರೇಷ್ಠಳು" (ಪ.ಗೀ 2:2).**

ಇಂದು ನೀವು ಮುಳ್ಳಿನೋಪಾದಿಯಲ್ಲಿರುವ ಮನುಷ್ಯರಿಂದ ಚುಚ್ಚಲ್ಪಡುತ್ತಿರುವಿರಾ? ಅವರು ನಿಮ್ಮ ಕಣ್ಣಿಗೆ ಮುಳ್ಳುಗಳಾಗಿಯೂ, ನಿಮ್ಮ ಪಕ್ಕೆಗಳಿಗೆ ಹೊಡೆಯುವ ಕೊರಡೆಗಳಂತೆಯೂ ಇರುವರಾ? (ಯೆಹೋ 23:13). ಕಳವಳಗೊಳ್ಳದಿರಿ ಒಂದು ದಿನ ಆ ಮುಳ್ಳುಗಳು ಮುರಿದು ಬೆಂಕಿಗೆ ಹಾಕಲ್ಪಡುವದು. ಕರ್ತನ ನಾಮದಲ್ಲಿ ಜಯಶಾಲಿಗಳಾಗಿ ನಿಲ್ಲುವಿರಿ.

ಯೇಸುಕ್ರಿಸ್ತನ ತಲೆಯಲ್ಲಿ ಮುಳ್ಳುಗಳಿಂದ ಹೆಣೆದ ಕಿರೀಟವನ್ನು ಇಟ್ಟು ತಲೆಯ ಮೇಲೆ ದೊಣ್ಣೆ ಕೋಲಿನಿಂದ ಹೊಡೆದರು. ರಕ್ತ ತಲೆಯಿಂದ ಸುರಿಯಿತು, ಆ ಮುಳ್ಳುಗಳ ನಡುವೆ ಕ್ರಿಸ್ತನು ತಾವರೆಯಂತಿದ್ದನು. ಆತನಿಂದ ಪ್ರೀತಿಯ ಕ್ಷಮಾಪಣೆಯ ಸುವಾಸನೆ ಪರಿಮಳಿಸಿತು. ಆ ಸುವಾಸನೇ ಪ್ರಪಂಚದೆಲ್ಲೆಡೆಯಲ್ಲೂ ಇಂದಿಗೂ ಪರಿಮಳಿಸುತ್ತಿರುವದು.

ಪ್ರಿಯರೇ, ಮುಳ್ಳುಗಳ ಮಧ್ಯದಲ್ಲಿ, ನೀವು ಕರ್ತನವರೆಂಬುದನ್ನು ನಿರೂಪಿಸುವಿರಿ. ಯಾವದೇ ಪರಿಸ್ಥಿತಿಯಲ್ಲೂ ಕರ್ತನಿಗಾಗಿ ನೀವು ಸುವಾಸನೆ ಬೀರುವವರಾಗಿರಬೇಕು.

## 3.ಚೇಳುಗಳ ನಡುವೆ :–

**"ಚೇಳುಗಳ ನಡುವೆ ವಾಸಿಸುವಂತೆ ಅವರ ಮಧ್ಯದಲ್ಲಿದ್ದರೂ ಅವರಿಗೆ**

**ಭಯಪಡಬೇಡ" (ಯೆಹೆ 2:6).**

ಮುಳ್ಳಿಗಿಂತ ಭಯಂಕರವಾದದ್ದು ಚೇಳು. ಚೇಳಿಗೆ ಬಾಲದಲ್ಲಿ ವಿಷದ ಕೊಂಡಿ ಇರುವದು. ಆದರೆ ಕೆಲವರಿಗೆ ಬಾಯಿಯಲ್ಲಿ ಸಾವಿರ ವಿಷದ ಕೊಂಡಿಗಳಿರುತ್ತವೆ. ಅವರ ಬಾಯಿಯ ಮಾತುಗಳೆಲ್ಲಾ ಚೇಳಿನ ಕೊಂಡಿಗಿಂತಲೂ ಅಧಿಕವಾದ ವೇದನೆಯನ್ನು ಆತ್ಮದಲ್ಲಿ ಉಂಟು ಮಾಡುವದು. ಕರ್ತನು ಇಂದಿಗೂ ಪ್ರೀತಿಯಿಂದ ನಿಮ್ಮನ್ನು ನೋಡಿ "ಇಗೋ ಹಾವುಗಳನ್ನೂ ಚೇಳುಗಳನ್ನೂ ಶತ್ರುವಿನ ಸಮಸ್ತಬಲವನ್ನೂ ತುಳಿಯುವ ಅಧಿಕಾರ ಕೊಟ್ಟಿದ್ದೇನೆ ಯಾವದೂ ನಿನಗೆ ಕೇಡು ಮಾಡುವದೇ ಇಲ್ಲ" ಎಂದು ಹೇಳುತ್ತಾನೆ (ಲೂಕ 10:19).

ಶಿಲುಬೆಯಲ್ಲಿ ಸರ್ಪದ ತಲೆಯನ್ನು ಜಜ್ಜಿದಾತನು ಚೇಳಿನ ಕೊಂಡಿಯನ್ನೂ ಮುರಿದು ಹಾಕುವನು. ಆತನು ತನ್ನ ರಕ್ತದ ಮೂಲಕ ಸರ್ಪಗಳ ಚೇಳುಗಳ ಮೇಲೆ ನಿಮಗೆ ಅಧಿಕಾರವನ್ನೂ ಜಯವನ್ನೂ ನೀಡಿರುವನು. ಆದ್ದರಿಂದ ನಿಮ್ಮ ಸುತ್ತಲೂ ಇರುವ ಚೇಳುಗಳನ್ನು ನೋಡದೆ, ನಿಮ್ಮ ಸುತ್ತಲೂ ಇರುವ ದೇವದೂತರನ್ನು ನೋಡಿರಿ. "ಯೆಹೋವನ ಭಯಭಕ್ತಿಯುಳ್ಳವರ ಸುತ್ತಲೂ ಆತನ ದೂತನು ದಂಡಿಳಿಸಿ ಕಾವಲಾಗಿದ್ದು ಕಾಪಾಡುತ್ತಾನೆ" (ಕೀರ್ತ 34:7).

**4.ತೋಳಗಳ ನಡುವೆ :–**

**"ಹೋಗಿರಿ, ತೋಳಗಳ ನಡುವೆ ಕುರಿಮರಿಗಳನ್ನು ಹೊಗಿಸಿದಂತೆ, ನಾನು ನಿಮ್ಮನ್ನು ಕಳುಹಿಸುವೆನು" (ಲೂಕ 10:3).**

ಇಂದು ತೋಳಗಳ ನಡುವೆ, ನೀವು ನಿಂತಿರುವಂತೆ ಇರಬಹುದು. ಆದರೆ ಕರ್ತನು "ಈ ರೀತಿಯಾಗಿ ನಿಮ್ಮನ್ನು ಕಳುಹಿಸುವೆನು" ಎಂದು ಹೇಳಿ ನಿಮ್ಮನ್ನು ಕಳುಹಿಸಿರುವನು. ತೋಳಗಳಂತೆ ಕ್ರೈಸ್ತರಿಗೆ ವಿರೋಧವಾಗಿ, ಎಷ್ಟೋ ಆಧಿಪತ್ಯಗಳು ಕಾರ್ಯ ನಡೆಸುತ್ತಿರುವವು. ಅಂಥವುಗಳ ಮಧ್ಯದಲ್ಲಿ ನೀವು ವಾಸಿಸುತ್ತಿರುವಿರಿ. ಆದರೆ ಕರ್ತನು ಅಂಥಹ ಸ್ಥಿತಿಗತಿಗಳ ನಡುವೆಯೂ, ನಿಮ್ಮನ್ನು ಕಾಯುತ್ತಿರುವನೆಂಬುದನ್ನು ಮರೆಯದಿರಿ. ಅರಸನಾದ ದಾವೀದನು ಹೇಳುತ್ತಾನೆ "ವೈರಿಗಳ ಮುಂದೆ ನನಗೆ ಔತಣ ಸಿದ್ಧಪಡಿಸುವನು; [redacted] ಪಾತ್ರೆಯು ತುಂಬಿ

**ವಾಗ್ದಾನ ವಚನ : ಯೆರೆ 33:6**

**ನಾನು ಈ ಪಟ್ಟಣವನ್ನು ಜೀರ್ಣೋದ್ಧಾರ ಮಾಡಿ ಅದಕ್ಕೆ ಸೌಖ್ಯವನ್ನು ಕೊಟ್ಟು ನಿವಾಸಿಗಳನ್ನು ಗುಣಪಡಿಸುವೆನು. ಸ್ಥೈರ್ಯ ಸಮಾಧಾನಗಳನ್ನು ಸಮೃದ್ಧಿಯಾಗಿ ಅವರ ಅನುಭವಕ್ಕೆ ತರುವೆನು.**

## ಬೈಬಲ್ ಅಭ್ಯಾಸದಲ್ಲಿ ಯೋಚಿಸತಕ್ಕ ಪ್ರಶ್ನೆಗಳು

- ✍ ಈ ಅಭ್ಯಾಸದ ಮುಖ್ಯ ಸಂದೇಶವೇನು?
- ✍ ಈ ಅಭ್ಯಾಸದಲ್ಲಿ ಮುಖ್ಯ ವ್ಯಕ್ತಿ ಯಾರು?
- ✍ ಈ ಅಭ್ಯಾಸದಿಂದ ನಾನು ಕೈ ಗೊಳ್ಳಬೇಕಾಗಿರುವದು ಏನು?
- ✍ ಈ ಅಭ್ಯಾಸದ ಮೂಲಕ ನನಗೆ ಸಿಕ್ಕಿದ ಪ್ರಕಟನೆ ಏನು?
- ✍ ತಂದೆ, ಮಗ, ಪವಿತ್ರಾತ್ಮ ಇವರ ವಿಷಯವಾಗಿ ಏನು ಉಪದೇಶಿಸಲ್ಪಡುತ್ತದೆ?
- ✍ ಈ ಅಭ್ಯಾಸದಿಂದ ನಾನು ಇತರರ ಪ್ರಯೋಜನಕ್ಕಾಗಿ ಹಂಚಿಕೊಡಬೇಕಾದ ಅಂಶ ಯಾವದು?
- ✍ ಈ ಅಭ್ಯಾಸದಿಂದ ನನಗೆ ಇನ್ನೂ ಅರ್ಥವಾಗದ ಸಂಗತಿಯನ್ನು ಬಗೆಹರಿಸುವದು ಹೇಗೆ?

## ನಂಬಿಕೆಯ ಆಶೀರ್ವಾದಗಳು

1. **ನೀತಿವಂತರೆಂಬ ನಿರ್ಣಯ :** "ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸು,,," (ರೋಮಾ3:26).
2. **ಪೂರ್ಣ ಕ್ಷೇಮ :** "ನಂಬಿಕೆಯೇ....ಪೂರ್ಣ ಕ್ಷೇಮವನ್ನು ಕೊಟ್ಟಿತು" (ಅ.ಕೃ 3:16).
3. **ಪವಿತ್ರಾತ್ಮನ ದಾನ :** "ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ..." (ಗಲಾ 3:14).
4. **ರಕ್ಷಣೆ :** "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ" (ಎಫೆ 2:8).
5. **ಶುದ್ಧೀಕರಣ :** "ನಂಬಿಕೆಯ ಮೂಲಕವಾಗಿ ಶುದ್ಧೀಕರಿಸಿದನು" (ಅ.ಕೃ 15:9).
6. **ದೈವಿಕ ಪ್ರೀತಿ :** "ನಿಷ್ಕಪಟವಾದ ನಂಬಿಕೆ ಎಂಬಿವುಗಳಿಂದ ಹುಟ್ಟಿದ ಪ್ರೀತಿ" (1ತಿಮೊ 1:5).
7. **ನಮ್ಮ ಪ್ರಾರ್ಥನೆ :** "ನಮ್ಮ ನಂಬಿಕೆಯನ್ನು ಹೆಚ್ಚಿಸು... ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯ ಮಾಡು..." (ಲೂಕ 17:5).

# ಮಕ್ಕಳಂತೆ ಆಗದಿದ್ದರೆ!

**"ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾ 18:3).**

"ಪರಲೋಕ ರಾಜ್ಯ" ಎನ್ನುವ ಮಾತು ಮತ್ತಾಯನು ಬರೆದ ಸುವಾರ್ತೆಯಲ್ಲಿ ಮಾತ್ರ 32 ಸಾರಿ ತಿರುಗಿ ತಿರುಗಿ ಬರುತ್ತದೆ ಎಂದರೆ ಯೇಸುಕ್ರಿಸ್ತನು ಪರಲೋಕ ರಾಜ್ಯವನ್ನು ಎಷ್ಟು ಮುಖ್ಯತ್ವ ಪಡಿಸಿದ್ದಾನೆಂದು ತಿಳಿಯಬಹುದು. ಆತನ ಯೋಚನೆಯೆಲ್ಲವೂ ಪರಲೋಕದ ಮೇಲೆಯೇ ಇದ್ದಿತು. ಪರಲೋಕದಲ್ಲಿರುವ ತಂದೆಯ ಚಿತ್ತವು ಭೂಲೋಕದಲ್ಲಿ ನೆರವೇರಬೇಕೆನ್ನುವುದು ಯೇಸುಕ್ರಿಸ್ತನ ಆಶೆಯಾಗಿತ್ತು. ಪರಲೋಕ ರಾಜ್ಯಕ್ಕೆ ಒಂದು ಗುಂಪು ಜನರನ್ನು ಸಿದ್ಧಪಡಿಸಬೇಕೆಂದು ಎಡೆಬಿಡದೆ ಕೆಲಸ ಮಾಡುತ್ತಲೇ ಇದ್ದನು. ಪರಲೋಕ ರಾಜ್ಯದ ರಹಸ್ಯಗಳನ್ನು ದೃಢವಾಗಿ ತಿಳಿದುಕೊಳ್ಳಬೇಕೆನ್ನುವುದಾದರೆ ಪರಲೋಕದಲ್ಲಿ ಎಂದೆಂದಿಗೂ ನೆಲೆಯಾಗಿರಲು ಕರ್ತನು ಸಹಾಯ ಮಾಡುತ್ತಾನೆ. ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗಬೇಕು ಎಂಬುದೆ ಕರ್ತನ ಚಿತ್ತವಾಗಿದೆ. ಮಕ್ಕಳ ಸ್ವಭಾವವು ದೊಡ್ಡವರ ಸ್ವಭಾವಕ್ಕಿಂತ ಸಂಪೂರ್ಣವಾಗಿ ವ್ಯತ್ಯಾಸವಾಗಿರುತ್ತದೆ. ಮಕ್ಕಳು ಚಿಕ್ಕ ಪ್ರಾಯದಲ್ಲಿ ನಿಷ್ಕಪಟಿಗಳಾಗಿರುತ್ತಾರೆ. ಆದರೆ ಬೆಳೆಯುತ್ತಾ ಬೆಳೆಯುತ್ತಾ ಈ ಸಮುದಾಯವು ಅವರನ್ನು ಕೆಟ್ಟ ಮಾರ್ಗದಲ್ಲಿ ನಡೆಸುವುದರಿಂದ ಅವರು ಮಾರ್ಗ ತಪ್ಪಿ ಹೋಗುವ ಅವಕಾಶಗಳಿವೆ.

ಮಕ್ಕಳು "ತಾಳ್ಮೆಯುಳ್ಳವರಾಗಿರುವರು, ಎಲ್ಲಾವನ್ನು ನಂಬುತ್ತಾರೆ, ಕಲಿತು ಕೊಳ್ಳುವುದರಲ್ಲಿ ಆಸಕ್ತಿ ತೋರಿಸುತ್ತಾರೆ, ಕಷ್ಟ ದುಃಖಗಳು ಬರುವಾಗ ಓಡಿ ಹೋಗಿ ತಂದೆ ತಾಯಿಯರನ್ನು ಅಪ್ಪಿಕೊಳ್ಳುತ್ತಾರೆ, ಸತ್ಯವಂತರಾಗಿರಬೇಕೆಂದು ಬಯಸುತ್ತಾರೆ, ಕಹಿಯಾದ ಭಾವನೆಯಾಗಲಿ ವಂಚನೆಯು ಸ್ವಭಾವವಾಗಲಿ ದ್ವೇಷ ಸಾಧಿಸಬೇಕೆಂಬುದಾಗಲಿ ಅವರಲ್ಲಿರುವುದಿಲ್ಲ. ಮಕ್ಕಳಲ್ಲಿರುವಂಥ ಈ ಎಲ್ಲಾ ಗುಣಗಳು ನಮ್ಮಲ್ಲಿ ಇಲ್ಲದಿದ್ದರೆ ಪರಲೋಕ ರಾಜ್ಯವನ್ನು ಸೇರಲು ಸಾಧ್ಯವಿಲ್ಲ.

## ಪ್ರಾರ್ಥನೆಯ ವ್ಯಕ್ತಿ ಜಾಕ್‌ಸನ್!

ಒಂದು ಟ್ರೈನಿಂಗ್ ಕಾಲೇಜಿನಲ್ಲಿ ಸೆಕ್ರೇಟರಿಯಾಗಿ ಕೆಲಸ ಮಾಡುತ್ತಿದ್ದರು ಈ ಜಾಕ್‌ಸನ್‌ರವರು. ಇವರು ಪ್ರಾರ್ಥನೆಯ ವ್ಯಕ್ತಿ ಎಂದು ಹೆಸರುಗಳಿಸಿದ್ದರು. ದೇವರ ಆಶೀರ್ವಾದವನ್ನು ಕೇಳದೆ ಒಂದು ಗ್ಲಾಸ್ ನೀರನ್ನೂ ಸಹ ಅವರು ಕುಡಿಯುತ್ತಿರಲಿಲ್ಲವಂತೆ. ಇವರಿಗೆ ಬರುವ ಪತ್ರಗಳನ್ನು ತೆರೆದಾಗ ತೆರೆಯುವುದಕ್ಕೆ ಮೊದಲು ಪ್ರಾರ್ಥಿಸಿ ತೆಗೆಯುತ್ತಿದ್ದರಂತೆ. ಯಾರಿಗಾದರೂ ಪತ್ರ ಬರೆಯುವುದಕ್ಕೆ ಮೊದಲು ಪ್ರಾರ್ಥಿಸಿ ನಂತರ ಪತ್ರ ಬರೆಯುತ್ತಿದ್ದರಂತೆ, ತರಗತಿಯ ಒಬ್ಬೊಬ್ಬ ವಿದ್ಯಾರ್ಥಿಗಳಿಗಾಗಿ ಪ್ರಾರ್ಥಿಸುತ್ತಿದ್ದರಂತೆ.

ಎಷ್ಟು ವಿಶ್ವಾಸವುಳ್ಳ ಜೀವಿತ. ಅವರ ಹಾಗೆಯೇ ಎಲ್ಲಾ ಕಾರ್ಯಗಳಿಗೋಸ್ಕರ ಎಲ್ಲರಿಗೋಸ್ಕರ ಎಲ್ಲಾ ಸ್ಥಳಗಳಲ್ಲಿಯೂ ಪ್ರಾರ್ಥಿಸಿರಿ!


# ಸೈತಾನನನ್ನು ಓಡಿಸಿರಿ

"ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು" (ಮಾರ್ಕ 16:17) ಕ್ರಿಸ್ತನು ನಮ್ಮೊಂದಿಗಿರುವುದರಿಂದ ನಾವು ಸೈತಾನನಿಗಾಗಲಿ ಅಂಧಕಾರ ಶಕ್ತಿಗಳಿಗಾಗಲಿ ಆಕಾಶ ಮಂಡಲದಲ್ಲಿರುವ ದುರಾತ್ಮ ಸೇನೆಗಳಿಗಾಗಲಿ ಭಯಪಡಬೇಕಾಗಿರುವುದಿಲ್ಲ ಅವೇ ನಮಗೆ ಭಯಪಡುತ್ತವೆ, ಕರ್ತನು ನಮಗೆ ವಾಗ್ದಾನ ಮಾಡಿ ಹೇಳಿದ್ದಾನೆ ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು ಈ ವಾಗ್ದಾನವು ಕರ್ತನನ್ನು ನಂಬುವ ಎಲ್ಲಾ ವಿಶ್ವಾಸಿಗಳಿಗೂ ಕೊಡಲ್ಪಟ್ಟಿದೆ ಆತನು ತನ್ನ ಮಕ್ಕಳಿಗೆ ಕೊಟ್ಟಿರುವ ಒಂದು ವಿಶ್ವಾಸದ ಅಧಿಕಾರ ಆತನ ಹೆಸರು ಶಕ್ತಿಯುಳ್ಳದ್ದು ಆತನ ಹೆಸರಿನಲ್ಲಿ ದೆವ್ವಗಳು ಓಡಿ ಹೋಗುತ್ತವೆ, ಆತನ ಹೆಸರಿನಲ್ಲಿ ನಮಗೆ ಜಯ ಉಂಟು.

"ನೋಡಿರಿ ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನು ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ ಯಾವುದು ನಿಮಗೆ ಕೇಡು ಮಾಡುವುದೇ ಇಲ್ಲ"(ಲೂಕ 10:19) ಹೌದು ಶತೃವಿನ ಸಕಲ ಶಕ್ತಿಯ ಮೇಲೂ ಆತನು ನಮಗೆ ಅಧಿಕಾರ ಕೊಟ್ಟಿದ್ದಾನೆ ಯೇಸುಕ್ರಿಸ್ತನ ನಾಮದಲ್ಲಿ ಅವುಗಳ ಶಕ್ತಿಯು ಸಂಪೂರ್ಣವಾಗಿ ನಾಶವಾಗುತ್ತವೆ ಕಾರಣ ಕ್ರಿಸ್ತನ ಹೆಸರಿನಲ್ಲಿ ನೀವು ಬಾಧ್ಯಸ್ಥರು, ಸತ್ಯವೇದವು ಹೀಗೆ ಹೇಳುತ್ತದೆ ಯೇಸುಕ್ರಿಸ್ತನ ನಾಮದಲ್ಲಿ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಅಡ್ಡ ಬೀಳುವರು ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡುವರು ನಾವು ಕ್ರಿಸ್ತನ ಹೆಸರನ್ನು ಹೇಳುವಾಗ ದೆವ್ವಗಳು ಹೆದರಿ ನಡುಗುತ್ತವೆ ಆಕಾಶದಲ್ಲಿಯೂ ಭೂಮಿಯಲ್ಲಿಯೂ ಸಕಲ ಅಧಿಕಾರವನ್ನು ಕ್ರಿಸ್ತನು ಹೊಂದಿದ್ದಾನೆ ಮಾತ್ರವಲ್ಲ ಶತೃವಿನ ತಲೆಯನ್ನು ಶಿಲುಬೆಯಲ್ಲಿ ಜಜ್ಜಿದ್ದಾನೆ, ಆತನು ನಮಗೆ ಜಯವನ್ನು ಕೊಡುವವನಾಗಿದ್ದಾನೆ ಆತನು ನಮ್ಮೊಂದಿಗಿದ್ದಾನೆ ಕ್ರಿಸ್ತನ ನಾಮವನ್ನು ಸ್ವತಂತ್ರಿಸಿಕೊಂಡು ಶತೃವಿನ ಶಕ್ತಿಯನ್ನು ಮುರಿಯುವ ಅಧಿಕಾರವನ್ನು

# ಕರ್ತನ ಸ್ವಂತ ಹಸ್ತದಿಂದ ಬರೆದ 5 ಸಂದರ್ಭಗಳು

1. ಕರ್ತನು ಶಿಲಾಶಾಸನಗಳ ಮೇಲೆ ಬರೆದನು, ಅವುಗಳಲ್ಲಿ ಬರೆದದ್ದು ದೇವರು ಕೆತ್ತಿದ ಅಕ್ಷರಗಳೇ (ವಿಮೋ 32:15–16).
2. ದೇವಾಲಯದ ನಕ್ಷೆಯನ್ನು ಕರ್ತನು ಅರಸನಾದ ದಾವೀದನಿಗೆ ಬರೆದು ಕೊಟ್ಟದ್ದು (1ಪೂರ್ವ 28:19).
3. ನ್ಯಾಯ ತೀರ್ಪಿನ ವಾರ್ತೆಗಳನ್ನು ಗೋಡೆ ಮೇಲೆ ಬರೆದನು (ದಾನಿ 5:24–25).
4. ವ್ಯಭಿಚಾರಿಣಿಯನ್ನು ಹಿಡಿದು ತಂದಾಗ ನೆಲದ ಮೇಲೆ ಬರೆದನು (ಯೋಹಾ 8:6).
5. ಜೀವಭಾದ್ಯರ ಪಟ್ಟಿಯಲ್ಲಿ ನಮ್ಮ ಹೆಸರು ಬರೆದನು (ಪ್ರಕ 21:27



# ನಮ್ಮ ದೇಶದ ಸುದ್ದಿಗಳು
# (INDIA NEWS)


**1. ಅತಿ ಉದ್ದದ ಮೇಲ್ಸೇತುವೆ ಉದ್ಘಾಟನೆ :** 10.3 ಕಿಲೋ ಮೀಟರ್ ಉದ್ದದ ಎತ್ತರಿಸಿದ ಮೇಲ್ಸೇತುವೆಯನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಉದ್ಘಾಟಿಸಿದರು. 227 ಕಂಬಗಳನ್ನು ಒಳಗೊಂಡ ಆರು ಪಥದ ಎತ್ತರಿಸಿದ ಮೇಲ್ಸೇತುವೆ ನಿರ್ಮಾಣಕ್ಕೆ ರೂ.1,147 ಕೋಟಿ ವೆಚ್ಚವಾಗಿದೆ. ದೇಶದಲ್ಲಿಯೇ ಇದು ಅತೀ ಉದ್ದದ ಎತ್ತರಿಸಿದ ಮೇಲ್ಸೇತುವೆ ಎಂಬ ಖ್ಯಾತಿಗೆ ಪಾತ್ರವಾಗಿದೆ ಎಂದು ತಿಳಿದು ಬಂದಿದೆ.

**2.ಕೆಎಸ್‌ಟಿಡಿಸಿ : ರೂ.4.57 ಕೋಟಿ ಲಾಭ :** ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು (ಕೆಎಸ್‌ಟಿಡಿಸಿ) 2016–17ನೇ ಸಾಲಿನಲ್ಲಿ ರೂ.4.57 ಕೋಟಿ ಲಾಭಗಳಿಸಿದೆ. ನಿಗಮ ಪ್ರಾರಂಭವಾಗಿ 47 ವರ್ಷಗಳಾಯಿತು. ಇದೇ ಮೊದಲ ಬಾರಿಗೆ ಈ ಪ್ರಮಾಣದ ಲಾಭ ಗಳಿಸಿದೆ. ಪ್ರವಾಸ ಪ್ಯಾಕೇಜ್ ಜೊತೆಗೆ ಸುಸಜ್ಜಿತ ಹೋಟೆಲುಗಳನ್ನು ನಿರ್ವಹಿಸುತ್ತಿದ್ದು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಈ ಸೌಲಭ್ಯವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**3. ಗೀತಂ ವಿಶ್ವವಿದ್ಯಾಲಯಕ್ಕೆ ಮಾನ್ಯತೆ :** ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್‌ಗೆ (ಗೀತಂ) ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಸ್ವಾಯತ್ತತೆಯ ಮಾನ್ಯತೆ ನೀಡಿದೆ. ಗೀತಂ ವಿಶ್ವವಿದ್ಯಾಲಯ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ತು (ನ್ಯಾಕ್) ನೀಡುವ 'ಎ ಪ್ಲಸ್ ಶ್ರೇಣಿ' ಪಡೆದಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ವರ್ಗವಾರು ಸ್ವಾಯತ್ತೆಯ ಮಾನ್ಯತೆ ಪ್ರಕಟಿಸಿದ್ದು. ಇದರಲ್ಲಿ ಗೀತಂಗೂ ಸ್ಥಾನ ಸಿಕ್ಕಿದೆ ಎಂದು ಕುಲಪತಿಯವರು ತಿಳಿಸಿದ್ದಾರೆ.

**4. ಕೃಷಿ ನವೋದ್ಯಮ ನಿಧಿ ಸ್ಥಾಪನೆ? :** ಕೃಷಿ ನವೋದ್ಯಮ ನಿಧಿ (ಸ್ಟಾರ್ಟ್‌ಅಪ್) ಸ್ಥಾಪನೆ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ. ನಿಧಿ ಸ್ಥಾಪನೆಯಿಂದ ನವೋದ್ಯಮಿಗಳು ಕೃಷಿ ವಲಯದತ್ತ ಆಕರ್ಷಿತರಾಗಲಿದ್ದು, ರಫ್ತು ವಹಿವಾಟು ಹೆಚ್ಚಾಗಲಿದೆ. ಹೊಸ ಉದ್ಯಮ ಸ್ಥಾಪಿಸಲು ನವೋದ್ಯಮಿಗಳಿಗೆ ಬೆಂಬಲ ನೀಡುವ ಅಗತ್ಯವಿದೆ ಎಂದು ವಾಣಿಜ್ಯ ಸಚಿವಾಲಯ ಸಿದ್ಧಪಡಿಸಿರುವ ಕೃಷಿ ಕರಡು ರಫ್ತು ನೀತಿಯಲ್ಲಿ ಹೇಳಲಾಗಿದೆ. ದೇಶದಲ್ಲಿ ನವೋದ್ಯಮಕ್ಕೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ತಿಳಿದು ಬಂದಿದೆ.

**5. ಯಶಸ್ವಿಯಾಗಿ ಕಕ್ಷೆ ಸೇರಿದ ಜಿಸ್ಯಾಟ್–6ಎ :** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತನ್ನ ಜಿಸ್ಯಾಟ್ ಸರಣಿಯ 'ಜಿಸ್ಯಾಟ್–6ಎ' ಸಂಪರ್ಕ ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. ಈ ಉಪಗ್ರಹವು ದೇಶದಲ್ಲಿ ಮೊಬೈಲ್ ಸಂಪರ್ಕವನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲಿದೆ. ಪೂರ್ವನಿಗದಿಯಂತೆ ಮುಂದಿನ 18 ನಿಮಿಷಗಳಲ್ಲಿ ಉಪಗ್ರಹವನ್ನು ಕಕ್ಷೆಗೆ ಸೇರಿಸಿತು. ರಾಕೆಟ್ ತಂತ್ರಜ್ಞಾನ ಮತ್ತು ಉಪಗ್ರಹದಲ್ಲಿ ಬಳಸಿದ್ದ ಹೊಸ ತಂತ್ರಜ್ಞಾನಗಳ ದೃಷ್ಟಿಯಿಂದ ಈ ಕಾರ್ಯಾಚರಣೆ ಹೆಚ್ಚು ಮಹತ್ವ ಪಡೆದುಕೊಂಡಿತ್ತು



# ಹೊರ ದೇಶದ ಸುದ್ದಿಗಳು
# (FOREIGN NEWS)

**1.ತಾಪಮಾನ ಏರಿಕೆಯಿಂದ ಪೆಂಗ್ವಿನ್‌ಗಳಿಗೆ ಅಪಾಯ :** ಹವಾಮಾನ ವೈಪರೀತ್ಯ ಮತ್ತು ಜಾಗತಿಕ ತಾಪಮಾನ ಏರಿಕೆ ಇದೇ ರೀತಿ ಮುಂದುವರಿದರೆ ಕಿಂಗ್ ಪೆಂಗ್ವಿನ್‌ಗಳಿಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಪೆಂಗ್ವಿನ್‌ಗಳು ಆಹಾರವಿಲ್ಲದೆ ಹೆಚ್ಚು ಸಮಯ ಕಾಯಬೇಕು. ಹಸಿವಿನಿಂದ ಬಳಲಿ ಅವು ಸಾಯುಬಹುದು. ಕ್ರಮೇಣ ಕಿಂಗ್ ಪೆಂಗ್ವಿನ್ ಸಂತತಿಯ ಅವನತಿಗೂ ಕಾರಣವಾಗಬಹುದು ಎಂದು ಅವರು ವಿವರಿಸಿದ್ದಾರೆ.

**2.ಮಂಗಳನಲ್ಲಿಗೆ 'ಇನ್‌ಸೈಟ್' :** ಮಂಗಳ ಗ್ರಹವನ್ನು ಆಳವಾಗಿ ಅಧ್ಯಯನ ಮಾಡುವ ಸಲುವಾಗಿ ಅಮೆರಿಕ ಬಾಹ್ಯಾಕಾಶ ಸಂಸ್ಥೆ ನಾಸಾ ಮೊದಲ ಬಾರಿಗೆ 'ಇನ್‌ಸೈಟ್' ಯೋಜನೆ ರೂಪಿಸಿದೆ. ಈ ಗಗನನೌಕೆಯ ಉಡಾವಣೆಯಾಗಲಿದೆ. ಮಂಗಳನ ಅಂಗಳವು ಸುಮಾರು 45ಕೋಟಿ ವರ್ಷಗಳ ಹಿಂದೆ ಯಾವ ರೀತಿ ಇತ್ತು ಎಂಬುದನ್ನು 'ಇನ್‌ಸೈಟ್' ಅಧ್ಯಯನ ಮಾಡಬಲ್ಲದು. ಸೌರವ್ಯೂಹದಲ್ಲಿ ಭೂಮಿ, ಚಂದ್ರ, ಗ್ರಹ ಸೇರಿದಂತೆ ಬಂಡೆಗಲ್ಲುಗಳು ಹೇಗೆ ನಿರ್ಮಾಣವಾಗುತ್ತದೆ ಎಂಬುದನ್ನು ಅರಿಯಲು ಈ ಅಧ್ಯಯನ ನೆರವಾಗಲಿದೆ ಎಂದು ತಿಳಿದು ಬಂದಿದೆ.

**3. ವೀಸಾ ಅರ್ಜಿದಾರರಿಗೆ ಅಮೆರಿಕ ಹೊಸ ನಿಯಮ :** ಅಮೆರಿಕದ ವೀಸಾ ಬಯಸುವ ಅರ್ಜಿದಾರರು ಇನ್ನು ಮುಂದೆ ತಮ್ಮ ಫೋನ್, ಇ–ಮೇಲ್ ವಿಳಾಸ ಹಾಗೂ ಸಾಮಾಜಿಕ ತಾಣದ ವಿವರಗಳನ್ನು ನೀಡಬೇಕೆಂಬ ಹೊಸ ನಿಯಮವನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆ. ತಪಾಸಣೆ ಪ್ರಕ್ರಿಯೆಯ ಭಾಗವಾಗಿ ಮತ್ತು ದೇಶಕ್ಕೆ ಬೆದರಿಕೆ ಉಂಟು ಮಾಡುವ ವ್ಯಕ್ತಿಗಳನ್ನು ತಡೆಯುವುದಕ್ಕಾಗಿ ಭದ್ರತೆಯ ದೃಷ್ಟಿಯಿಂದ ಈ ನಿಯಮ ಜಾರಿ ಮಾಡಲಾಗುತ್ತಿದೆ ಎಂದು ತಿಳಿದು ಬಂದಿದೆ.

**4. ಅನ್ಯಗ್ರಹ ಶೋಧನೌಕೆ ಉಡಾವಣೆ :** ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ. ಅನ್ಯಗ್ರಹ ಪತ್ತೆಹಚ್ಚಲು ಟ್ರಾನ್ಸಿಟಿಂಗ್ ಎಕ್ಸೊಪ್ಲಾನೆಟ್ ಸರ್ವೆ ಸ್ಯಾಟಲೈಟ್ (ಟಿಇಎಸ್‌ಎಸ್) ಎಂಬ ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಲಿದೆ. ಫ್ಲಾರಿಡಾದಲ್ಲಿ ನೌಕೆಯ ಅಂತಿಮ ಪರೀಕ್ಷೆಗಳು ನಡೆಯುತ್ತಿವೆ. ಇದು ಅನ್ಯಗ್ರಹಗಳು, ಅವುಗಳ ವಾತಾವರಣ ಹಾಗೂ ಜೀವಿಗಳ ಕುರುಹುಗಳನ್ನು ಪತ್ತೆಹಚ್ಚಲಿದೆ ಎಂದು ಕಾರ್ಯಕ್ರಮದ ಮುಖ್ಯಾಧಿಕಾರಿ ತಿಳಿಸಿದ್ದಾರೆ.

**5. ವಿಶ್ವಸಂಸ್ಥೆಗೆ ರೋಸ್‌ಮೇರಿ :** ವಿಶ್ವಸಂಸ್ಥೆಯ ರಾಜಕೀಯ ವ್ಯವಹಾರಗಳ ಮುಖ್ಯಸ್ಥ ಸ್ಥಾನಕ್ಕೆ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರನ್ನು ನೇಮಿಸಲಾಗಿದೆ. ಮೂರು ದಶಕಗಳಿಗೂ ಹೆಚ್ಚು ಸಮಯ ಅಮೆರಿಕದ ರಾಯಭಾರಿಯಾಗಿ ಸೇವೆಸಲ್ಲಿರುವ ರೋಸ್‌ಮೇರಿ ಡಿಕಾರ್ಲೊ ಈ ಹುದ್ದೆಗೆ ನೇಮಕಗೊಂಡಿದ್ದಾರೆ. ಈ ಮೂಲಕ, ವಿಶ್ವಸಂಸ್ಥೆಯ ಅತ್ಯುನ್ನತ ಹುದ್ದೆ ಮಹಿಳೆಯೊಬ್ಬರಿಗೆ ಒಲಿದಿದೆ ಎಂದು ತಿಳಿದು ಬಂದಿದೆ.

# ಪೂರ್ಣತೆಯೆಡೆಗೆ!

ಬೆಳಗ್ಗೆ : 1ಅರಸು 10,11
ಸಂಜೆ : ಲೂಕ 21:20-38

**"ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ" (ಇಬ್ರಿ 6:2).**

ಭೂಮಿಯಲ್ಲಿ ಕರ್ತನು ಯಾರನ್ನು ಪೂರ್ಣತೆಯಿಂದ ಕೂಡಿದವರನ್ನಾಗಿ ಸೃಷ್ಟಿಸಿಲ್ಲ. ಶಿಶುವಾಗಿ ಹುಟ್ಟಿದ ಕಂದನನ್ನು ಅದರ ತಾಯಿ ಲಾಲನೆ ಪಾಲನೆ ಮಾಡಿ ಬೆಳೆಸುವಳು. ತಂದೆ ತನ್ನ ಸಂಪಾದನೆಯಿಂದ ಮಗುವಿನ ಎಲ್ಲಾ ಅಗತ್ಯತೆಗಳನ್ನು ಪೂರೈಸುವನು ಶಾಲೆಯಲ್ಲಿ ಉಪಾಧ್ಯಾಯರು ಮಕ್ಕಳಿಗೆ ಜ್ಞಾನವನ್ನು ಉಪದೇಶಿಸುವರು. ಹಾಗೆ ಮನುಷ್ಯನು ಬೆಳೆದು ದೊಡ್ಡವನಾದಂತೆಲ್ಲಾ ಪೂರ್ಣತೆಯೆಡೆಗೆ ಸಾಗುವನು.

ಒಬ್ಬ ಮನುಷ್ಯನ ಬೆಳವಣಿಗೆ ಯಾವಾಗ ಪೂರ್ಣವಾಗುವದು? ಎಂಬುದನ್ನು ನಿರ್ಧಿಷ್ಟವಾಗಿ ಹೇಳಲಾಗುವದಿಲ್ಲ. ಭಾರತ ಸರ್ಕಾರ ಗಂಡು ಮಕ್ಕಳಿಗೆ 21 ವರುಷ ಹೆಣ್ಣು ಮಕ್ಕಳಿಗೆ 18 ವರುಷ ಆದಾಗ ಅವರು ಪ್ರೌಢಾವಸ್ಥೆಗೆ ತಲುಪುವರು ಎಂದು ನಿರ್ಧರಿಸಿ, ಅವರಿಗೆ ಮತಚಲಾಯಿಸುವ ಹಕ್ಕನ್ನು ನೀಡಿರುವದು. ಇಸ್ರಾಯೇಲ್ ದೇಶದಲ್ಲಿ ಪೂರ್ಣಬೆಳವಣಿಗೆ ಅಥವಾ ಪ್ರೌಢಾವಸ್ಥೆ ಎಂಬುದು 30 ವರುಷ ವಯಸ್ಸೆಂದು ಪರಿಗಣಿಸಿರುವದು. ಮೂವತ್ತನೇ ವಯಸ್ಸಿನಲ್ಲಿ ತನ್ನ ಮಗನು ಇನ್ನು ತಂದೆಯ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಸಾಮರ್ಥ್ಯ ಹೊಂದಿದನೆಂದು ಒಂದು ಔತಣವನ್ನೇ ಏರ್ಪಡಿಸುವರು.

ಯೇಸುಕ್ರಿಸ್ತನು ಮೂವತ್ತು ವರುಷದವನಾದಾಗ, ದೀಕ್ಷಾಸ್ನಾನ ಹೊಂದಿ, ನದಿಯ ದಡವನ್ನು ಹತ್ತಿದಾಗ, ಪರಲೋಕವು ಆತನನ್ನು ಘನಪಡಿಸಿತು. ತಂದೆ ದೇವರು ಆತನನ್ನು ಕುರಿತು ಸಾಕ್ಷಿ ಕೊಡುತ್ತಾ– "ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ" (ಮತ್ತಾ 3:17) ಅಂದನು. ಅಂದು ಪವಿತ್ರಾತ್ಮನು ಪಾರಿವಾಳದಂತೆ ಆತನ ಮೇಲೆ ಇಳಿದು ಬಂದನು. ಯೋಸೇಫನೂ ಸಹಾ ಮೂವತ್ತನೇ ವಯಸ್ಸಿನಲ್ಲಿ ಪೂರ್ಣ ಪುರುಷನಾಗಿ ಫರೋಹನನ ಮುಂದೆ ನಿಂತನು. ಬಾಲ್ಯದಲ್ಲಿ ಕಂಡ ಕನಸುಗಳೆಲ್ಲಾ ನೆರವೇರಲು ಪ್ರಾರಂಭವಾಯಿತು ಇಡೀ ಐಗುಪ್ತ ದೇಶವನ್ನು ನಡೆಸುವ ಜವಾಬ್ದಾರಿಯು ಅವನ ಮೇಲೆ ಹೊರಿಸಲ್ಪಟ್ಟಿತು.

ದೇವಮಕ್ಕಳೇ, ನೀವು ಲೌಕೀಕ ಜೀವಿತದಲ್ಲಿ ಮಾತ್ರವಲ್ಲ ಆತ್ಮೀಕ ಜೀವಿತದಲ್ಲಿಯೂ ಪೂರ್ಣತೆಯ ಕಡೆಗೆ ಸಾಗಬೇಕಾಗಿರುವದು. ದೇವಭಕ್ತಿಯಲ್ಲಿ, ಪರಿಶುದ್ಧತೆಯಲ್ಲಿ, ದೈವೀಕ ಪ್ರೀತಿಯಲ್ಲಿ, ಕ್ರಿಸ್ತನ ಪೂರ್ಣತೆಯೆಡೆಗೆ ಸಾಗಬೇಕಾದದ್ದು ಅಗತ್ಯವಾದದ್ದು. ಅಪೊ.ಪೌಲನು ಈ ಕುರಿತು "ನಾನು ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದೆನು ಬಾಲಕನ ಸುಖ ದುಃಖಗಳನ್ನು ಅನುಭವಿಸಿದೆನು. ಬಾಲಕನ ಆಲೋಚನೆಗಳನ್ನು ಮಾಡಿಕೊಂಡೆನು. ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟುಬಿಟ್ಟೆನು" (1ಕೊರಿ 13:11). ನೀವು ಆತ್ಮೀಕ ಜೀವಿತದಲ್ಲಿ ಪೂರ್ಣತೆಯ ಕಡೆಗೆ ಸಾಗ ಬೇಕೆಂದರೆ ಸತ್ಯವೇದವನ್ನು ಓದಿ, ಧ್ಯಾನಿಸಿ ಅದರಂತೆ ನಡೆಯಬೇಕು.

**ನೆನಪಿಗೆ : "ಆದಕಾರಣ ಎಲ್ಲಾ ಕೆಟ್ಟತನವನ್ನೂ.....ಹಸುಮಕ್ಕಳಂತೆ ಪರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ ಅದರಿಂದ ಬೆಳೆಯುತ್ತುತ್ತ ರಕ್ಷಣೆಯನ್ನು ಹೊಂದುವಿರಿ" (1ಪೇತ್ರ 2:3).**

ಮೇ 02

## ಪ್ರವೀಣರನ್ನಾಗಿ!

ಬೆಳಗ್ಗೆ : 1ಅರಸು 12,13
ಸಂಜೆ : ಲೂಕ 22:1-23

**"ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತಾ ದೇವರ ಮುಂದೆ ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ" (ಕೊಲೊ 1:28).**

ಅಪೊ.ಪೌಲನು, ದೇವರು ತನ್ನನ್ನು ಸೇವೆಗೆ ಕರೆದ, ಉದ್ದೇಶವನ್ನು ಇಲ್ಲಿ ತಿಳಿಸುತ್ತಾನೆ. ಎಲ್ಲರೂ ಕ್ರಿಸ್ತನಲ್ಲಿ ಪೂರ್ಣತೆಯಲ್ಲಿ ನಿಲ್ಲುವಂತೆ, ಎಲ್ಲರಿಗೂ ಕ್ರಿಸ್ತನ ಸುವಾರ್ತೆಯನ್ನು ಸಾರಿ ಪೂರ್ಣಜ್ಞಾನವನ್ನು ಉಪದೇಶಿಸುವದೇ ದೇವರ ಉದ್ದೇಶವಾಗಿತ್ತು. ಇಂದು ಎಲ್ಲಾ ದೇವ ಸೇವಕರಿಗೆ ಕರ್ತನು ನೀಡಿರುವ ಆಜ್ಞೆ ಅದುವೇ. ರಕ್ಷಣೆಯೊಳಗೆ ನಡೆಸಿದರೆ ಮಾತ್ರ ಸಾಲದು, ಕ್ರಿಸ್ತನ ಪೂರ್ಣತೆಯೆಡೆಗೆ, ಅವರನ್ನು ಕರೆತರ ಬೇಕು ಸಭೆಯನ್ನು ಅದಕ್ಕಾಗಿ ಸಿದ್ಧಪಡಿಸಬೇಕು. ನೀವು ಸಹ ಪರಿಪೂರ್ಣರಾಗಿ ಇತರರನ್ನು ಪರಿಪೂರ್ಣತೆಗೆ ನಡೆಸಿರಿ.

ಕ್ರಿಸ್ತನಲ್ಲಿ ಸಾವಿರಾರು ದೈವೀಕ ಸ್ವಭಾವಗಳಿರುವವು, ಗುಣಾತಿಶಯಗಳಿರುವವು ಕ್ರಿಸ್ತನ ಪ್ರೀತಿ, ಪರಿಶುದ್ಧತೆ, ತಾಳ್ಮೆ, ದಯೆ, ಪ್ರಾರ್ಥನಾ ಜೀವಿತ, ಕೃಪೆ ಎಂದು ಹೇರಳವಾದ ಗುಣಾತಿಶಯಗಳಿರುವವು. ಅವುಗಳಲ್ಲಿ ಪ್ರತಿಯೊಂದರಲ್ಲಿಯೂ, ಪೂರ್ಣತೆ ಪಡೆಯುವದು ಹೇಗೆ? ಅದು ಸಾಧ್ಯವಾ? ಮನುಷ್ಯನು ದೈವತ್ವದ ಪರಿಪೂರ್ಣತೆಯೊಳಗೆ ಬರಲು ಸಾಧ್ಯವಾ? ಈ ಕುರಿತು ಒಬ್ಬ ದೇವ ಸೇವಕರು ಹೀಗೆ ಹೇಳಿರುವರು– "ನಾವು ಕ್ರಿಸ್ತನ ಪ್ರತಿಯೊಂದು ಗುಣಗಳಲ್ಲೂ ಪೂರ್ಣತೆ ಪಡೆಯಲು ಪ್ರಯತ್ನಿಸುವದು ಆಗದ ಕಾರ್ಯ, ಅದಕ್ಕಾಗಿ ಪ್ರಯತ್ನಿಸುವದನ್ನು ಬಿಟ್ಟು, ಕ್ರಿಸ್ತನನ್ನು ಪೂರ್ಣವಾಗಿ ಬಾಧ್ಯತೆಯಾಗಿಸಿಕೊಳ್ಳುವದರಲ್ಲಿ, ಪ್ರಯತ್ನ ಮಾಡಬೇಕು. ಯೇಸುಕ್ರಿಸ್ತನೇ ಪೂರ್ಣನಾದಾತನು. ಆತನು ನನ್ನೊಳಗೆ ಪೂರ್ಣವಾಗಿ ವಾಸಮಾಡುವನು. ಆತನು ನನ್ನೊಳಗೆ ವಾಸಮಾಡುವದರಿಂದ ಆತನ ದೈವೀಕ ಪರಿಪೂರ್ಣತೆಗಳೆಲ್ಲಾ ನನ್ನಲ್ಲಿ ಬಂದು ವಾಸಿಸುವದು ಮಾತ್ರವಲ್ಲ, ನನ್ನೊಳಗೆ ಪವಿತ್ರಾತ್ಮ ವಾಸಿಸುವದರಿಂದ, ಸಕಲಸತ್ಯದೊಳಗೆ, ನನ್ನನ್ನು ಪೂರ್ಣವಾಗಿ ನಡೆಸುವನು ಎಂಬ ನಂಬಿಕೆಯಿಂದ ಮುಂದೆ ಸಾಗಿರಿ ಎಂದು.

ದೇವಮಕ್ಕಳೇ, ಕ್ರಿಸ್ತನನ್ನೂ ಪೂರ್ಣವಾಗಿ ಬಾಧ್ಯತೆಯಾಗಿಸಿಕೊಳ್ಳಿರಿ. ಆತನು ಸಂಪೂರ್ಣವಾದ ಕೃಪೆಯಿಂದ ನಿಮ್ಮೊಳಗೆ ವಾಸಿಸುವನು. ನೀವು ಕ್ರಿಸ್ತನಿಗೆ ಮೆಚ್ಚಿಕೆಯಾಗುವಂತೆ ಆತನೊಂದಿಗೆ ನಡೆಯುವಾಗ, ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆ ಪಡದೆ ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿರುವಿರಿ. ನಿಮಗೆ ತಿಳಿಯದಂತೆಯೇ, ಕ್ರಿಸ್ತನ ಸಾರೂಪ್ಯದಲ್ಲಿ ನೀವು ಮಾರ್ಪಡುತ್ತಾ ಹೋಗುವಿರಿ. ಕರ್ತನು ತಾನೇ ರೆಪ್ಪೆ ಬಡಿಯುವಷ್ಟರೊಳಗೆ ನಿಮ್ಮನ್ನು ಪೂರ್ಣಗೊಳಿಸಿ ಮಹಿಮೆಯ ಮೇಲೆ ಮಹಿಮೆ ಹೊಂದುವಂತೆ ಮಾಡುವನು.

**ನೆನಪಿಗೆ : "ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ....ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ, ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1ಯೋಹಾ 3:2).**

| ಮೇ 03 | **ಪೂರ್ಣ ಸದ್ಗುಣರು!** | ಬೆಳಗ್ಗೆ : 1ಅರಸು 14,15<br>ಸಂಜೆ : ಲೂಕ 22:24-46 |
|---|---|---|

**"ಪರಲೋಕದಲ್ಲಿರುವ ನಿಮ್ಮ ತಂದೆಯು.....ನೀವೂ ದೋಷವಿಲ್ಲದವರಾಗಿರ್ರಿ" (ಮತ್ತಾ 5:48).**

ಜೀವಿತದಲ್ಲಿ ಗುರಿ ಇಲ್ಲದೆ ಬಾಳುವದು ಆಪತ್ತು ತರುವಂಥದ್ದು. ತಪ್ಪಾದ ಗುರಿ ಇಟ್ಟುಕೊಂಡು ಜೀವಿಸುವದು ವೇದನೆಯನ್ನು ಉಂಟು ಮಾಡುವಂಥದ್ದು ಅನೇಕರ ಜೀವಿತದ ಗುರಿ ಹಣ ಸಂಪಾದನೆಯೇ ಆಗಿರುವದು. ಇಂದು ಅನೇಕರ ಜೀವಿತ ಹೊಟ್ಟೆಗೂ ಬಾಯಿಗೂ ಇರುವ ಹೋರಾಟವಾಗಿದೆ. ನಿತ್ಯತ್ವದ ಕುರಿತೋ ಪರಲೋಕ ರಾಜ್ಯದ ಕುರಿತೋ ಚಿಂತಿಸಿ ನೋಡುವದೇ ಇಲ್ಲ.

ಒಂದು ಬಣ್ಣದ ಚಿಟ್ಟೆ, ಒಂದು ಎಲೆಯಲ್ಲಿ ಮೊಟ್ಟೆಯಿಡುವದೆಂದು ಇಟ್ಟುಕೊಳ್ಳೋಣ. ನಂತರ ಆ ಮೊಟ್ಟೆಯೊಳಗಿಂದ ಒಂದು ಸಣ್ಣ ಹುಳು ಹೊರಗೆ ಬರುವದು. ನಂತರ ಅದು ಬೆಳೆದು, ದೊಡ್ಡ ಹುಳುವಾಗಿ, ನಂತರ ಗೂಡಿನ ಹುಳುವಾಗಿ ಮಾರ್ಪಟ್ಟು, ತೂಗಾಡುವದು. ಆ ಹುಳುವಿನ ಕುರಿತು ದೇವರ ಗುರಿ ಏನು? ಚಿಕ್ಕ ಹುಳುವಾದ್ದದ್ದು ದೊಡ್ಡದಾಗಬೇಕು. ಗೂಡುಹುಳುವಾಗಿ ಮಾರ್ಪಟ್ಟು, ಕಡೆಯಲ್ಲಿ ಅದು ಪೂರ್ಣವಾಗಿ ಬೆಳೆದು ಸುಂದರವಾದ ಬಣ್ಣದ ಚಿಟ್ಟೆಯಾಗಿ ರೆಕ್ಕೆ ಬಡಿಯುತ್ತಾ ಹಾರಾಡಬೇಕೆಂಬುದೇ ಆಗಿದೆ. ಅದು ತಾಯಿಯ ಸಾರೂಪ್ಯವನ್ನು ಪಡೆಯುವವರೆಗೆ ಹಲವು ಅವಸ್ಥೆಗಳನ್ನು ದಾಟಿಹೋಗಬೇಕಾಗಿರುವದು.

ಅದರಂತೆಯೇ ನಾವು ಸಹಾ, ಹಲವು ಆತ್ಮೀಕ ಅನುಭವಗಳನ್ನು ದಾಟಿ ಹೋಗಬೇಕು. ಭೂಮಿಯಲ್ಲಿ ನಾವು ಊಟ ಮಾಡುತ್ತಾ ಜೀವಿಸುತ್ತಿದ್ದರೂ. ನಮ್ಮ ಜೀವಿತದ ಗುರಿ, ಕ್ರಿಸ್ತನ ಪೂರ್ಣತೆಯನ್ನು ಪಡೆಯುವದಾಗಿ ಇರಲಿ, ತುತೂರಿ ಧ್ವನಿ ಕೇಳಿಸುವಾಗ, ನಮ್ಮಲ್ಲಿ ಎಷ್ಟು ಮಹಿಮೆಯಾದ ಮಾರ್ಪಾಟು ಉಂಟಾಗುವದು ಎಂಬುದನ್ನು, ನಾವು ಪೂರ್ಣವಾಗಿ ಅರಿತುಕೊಳ್ಳಲು ಸಾಧ್ಯ. ಕ್ರಿಸ್ತನ ಸಾರೂಪ್ಯದಲ್ಲಿ ರೂಪಾಂತರ ಹೊಂದುವಾಗ ನಮ್ಮನ್ನು ಸೃಷ್ಟಿಸಿದಾತನ ಸಾರೂಪ್ಯವೂ ರೂಪವೂ ನಮ್ಮಲ್ಲಿ ಪೂರ್ಣವಾಗಿ ಕಾಣಲ್ಪಡುವದು. ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನೂ ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ (1ಯೋಹಾ 3:3) ಎಂದು ಸತ್ಯವೇದ ಹೇಳುತ್ತದೆ. ಹೀಗೆ ದೇವ ಜನರನ್ನು ಪೂರ್ಣತೆಗೆ ನಡೆಸುವದಕ್ಕಾಗಿಯೇ, ಸಭೆಯಲ್ಲಿ ಅಪೊಸ್ತಲರು, ಬೋಧಕರು, ಪ್ರವಾದಿಗಳು, ಸೌವಾರ್ತಿಕರನ್ನು ಕರ್ತನು ನೇಮಿಸಿರುವನು

ದೇವಮಕ್ಕಳೇ, ನಿಮ್ಮ ಜೀವಿತದ ಗುರಿಯೆಲ್ಲಾ ಕ್ರಿಸ್ತನಲ್ಲಿ ಪೂರ್ಣತೆಯ ಕಡೆಗೆ ನಡೆಯುವದಾಗಿ ಇರಲಿ. ಆದ್ದರಿಂದ ನೀವು ಎಲ್ಲಾ ವಿಷಯಗಳಲ್ಲಿ ಪರಿಪೂರ್ಣರಾಗಲು ಅದೇ ವೇಳೆಯಲ್ಲಿ ದೇವ ಸೇವಕರು ದೇವರ ವಾಕ್ಯಗಳನ್ನು ನಿಮಗೆ ಬೋಧಿಸಿ ಕರ್ತನ ಬಳಿಗೆ ಬರಲು ಸಹಾಯ ಮಾಡುವರು. ಹಾಗೂ ಪವಿತ್ರಾತ್ಮನೊಂದಿಗೂ ದೇವಸೇವಕರೊಂದಿಗೂ ಅನ್ಯೋನ್ಯತೆ ಉಳ್ಳವರಾಗಿರ್ರಿ.

**ನೆನಪಿಗೆ : "ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವದಕ್ಕೆ ಎದೆ ಬೊಗ್ಗಿದವನಾಗಿ....ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿ ಮಾಡಿಕೊಂಡು ಓಡುತ್ತಾ ಇದ್ದೇನೆ" (ಫಿಲಿ 3:13,14).**

| | | |
|---|---|---|
| ಮೇ 04 | **ಸಿದ್ಧಿಗೆ ಬಂದ ಕ್ರಿಸ್ತನು!** | ಬೆಳಗ್ಗೆ : 1ಅರಸು 16,17,18<br>ಸಂಜೆ : ಲೂಕ 22:47-71 |

**"ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿ 5:10).**

ಯೇಸುಕ್ರಿಸ್ತನು ಭೂಮಿಯಲ್ಲಿ ಜನಿಸಿದಾಗ, ತಂದೆ ದೇವರು ಆತನು ಪೂರ್ಣತೆಉಳ್ಳವನಾಗಿ ಜನಿಸುವಂತೆ ಮಾಡಲಿಲ್ಲ, ಪೂರ್ಣತೆಯನ್ನು ಪಡೆದುಕೊಳ್ಳಲು, ಆತನು ಹಲವು ಅವಸ್ಥೆಗಳನ್ನು ದಾಟಿಹೋಗಬೇಕಾಗಿತ್ತು. ಹೆತ್ತವರಿಗೆ ಆತನು ವಿಧೇಯನಾಗಬೇಕಿತ್ತು. ನಮಗೆ ಮಾದರಿಯಾಗಿರುವಂತೆ ದೀಕ್ಷಾಸ್ನಾನ ಪಡೆಯಬೇಕಾಗಿತ್ತು. ಹಾಗೂ ಹಲವಾರು ಹಿಂಸೆ ಸಂಕಷ್ಟಗಳ ಮಧ್ಯದಲ್ಲಿ ಹಾದು ಹೋಗಬೇಕಾಗಿತ್ತು.

ಇಬ್ರಿ 2:10 ರಲ್ಲಿ ಆತನು ಸಿದ್ಧಿಗೆ ಬಂದು ಎಂದು ಓದುತ್ತೇವೆ. ಆತನು ಪೂರ್ಣತೆ ಹೊಂದಿದ ಮೇಲೆಯೇ, ಬೇರೆಯವರನ್ನು ಪೂರ್ಣತೆಯೊಳಗೆ ನಡೆಸಲು ಆತನು ಶಕ್ತನಾಗಿದ್ದನು. ಕ್ರಿಸ್ತನನ್ನು ಪೂರ್ಣಪಡಿಸುವಂತೆ ಅಥವಾ ಸಿದ್ಧಿಗೆಬರುವಂತೆ ತಂದೆ ದೇವರು ಆತನನ್ನು ಶ್ರಮೆಗೆ ಒಳಪಡಿಸಿದನು. ಆತನು ಅನೇಕ ಉಪದ್ರವಗಳ ಹಾದಿಯಲ್ಲಿ ನಡೆದು ಹೋದನು. ಶಿಲುಬೆಯ ಮರಣವೆಂಬ ಕಹಿಯಾದ ರಸವನ್ನು ಕುಡಿದನು. ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾ ಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿತ್ತು ಎಂದು (ಇಬ್ರಿ 2:10).

ಬಂಗಾರವನ್ನು ಪುಟಕ್ಕೆ ಹಾಕುವಾಗ ಅದು ಅಪ್ಪಟ ಬಂಗಾರವಾಗುವದು. ವಜ್ರದ ಕಲ್ಲನ್ನು ಸಾಣೆ ಹಿಡಿಯುವಾಗ ಅದರ ಹೊಳಪು ಹೆಚ್ಚುವದು. ಹಾಗೆಯೇ ಉಪದ್ರವಗಳೂ, ಶ್ರಮೆಯೂ, ಕ್ರಿಸ್ತನನ್ನು ಸಿದ್ಧಿಗೆ ತಂದಿತು. ನಿಮ್ಮ ಜೀವಿತದಲ್ಲಿ ಬೀಸುವ ಬಿರುಗಾಳಿಗಳು, ಹಾಗೆಯೇ ನಿಮ್ಮನ್ನು ಕ್ರಿಸ್ತನ ಪೂರ್ಣತೆಗೆ ನಡೆಸುವದು, ಬೀಸುವ ಬಿರುಗಾಳಿ ಮರಗಳ ಬೇರನ್ನು ಭೂಮಿಯೊಳಗೆ ಆಳವಾಗಿ ನೆಲೆಗೊಳಿಸುವದು. ಆದ್ದರಿಂದ ಶೋಧನೆಗಳಲ್ಲಿ ಸೋತು ಹೋಗಬೇಡಿ ಕಷ್ಟಗಳು ಎದುರಾಗುವಾಗ ಹೆದರಬೇಡಿರಿ. ಅವು ನಿಮ್ಮನ್ನು ಪೂರ್ಣತೆಯೆಡೆಗೆ ಹೆಜ್ಜೆಹಾಕುವಂತೆ ಮಾಡುವದು.

ದೇವಮಕ್ಕಳೇ, ಈಗಿನ ಕಷ್ಟಗಳು ಮುಂದೆ ನಿಮ್ಮಲ್ಲಿ ಪ್ರಕಟಗೊಳ್ಳುವ ಮಹಿಮೆಗೆ ಸಾಟಿಯಾಗದು. ಈ ಲೋಕದ ಕಷ್ಟಗಳೆಲ್ಲಾ ಸ್ವಲ್ಪ ಸಮಯದಲ್ಲಿ ಇಲ್ಲದಾಗಿ ಹೋಗುವದು, ನಿತ್ಯ ಮಹಿಮೆಯನ್ನು ತರುವದು. ಕರ್ತನ ಬರುವಿಕೆಯಲ್ಲಿ ನೀವು ಮಹಿಮೆಯ ಮೇಲೆ ಮಹಿಮೆ ಹೊಂದುವಿರಿ. ಆತನ ರಾಜ್ಯದಲ್ಲಿ ಕ್ರಿಸ್ತನಲ್ಲಿ ಮರಣ ಹೊಂದಿದ ಬಂಧುಗಳನ್ನು ಕಂಡು ಸಂತೋಷಿಸುವಿರಿ. ಆ ದಿನದ ಸಂತೋಷ ನಿಮ್ಮೊಳಗೆ ಪರಿಪೂರ್ಣವಾಗಿರುವದು.

**ನೆನಪಿಗೆ : "ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ" (ಕೀರ್ತ 16:11).**

| ಮೇ 05 | **ಜೀವವು ಸಮೃದ್ಧಿಯಾಗಲು!** | ಬೆಳಿಗ್ಗೆ : 1ಅರಸು 19,20<br>ಸಂಜೆ : ಲೂಕ 23:1-25 |
|---|---|---|

**"ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾ 10:10).**

ಯೇಸುಕ್ರಿಸ್ತನು ಈ ಭೂಮಿಗೆ ಬಂದ ಕಾರಣವನ್ನು, ಮೇಲಿನ ವಾಕ್ಯ ಸ್ಪಷ್ಟವಾಗಿ ತಿಳಿಸುವದು. ಮೊದಲನೆಯದಾಗಿ, ತನ್ನ ಮಕ್ಕಳಿಗೆ ಜೀವವು ಇರಬೇಕು. ಎರಡನೆಯದಾಗಿ, ಆ ಜೀವ ಸಮೃದ್ಧಿಯಾಗಿ ಇರಬೇಕು. ಆತನು ತನ್ನ ಜೀವವನ್ನು ಕಲ್ವಾರಿಯಲ್ಲಿ ಅರ್ಪಿಸಿ ನಮಗೆ ಜೀವ ನೀಡಿದನು. ಪಾಪಿಗಳಾಗಿದ್ದಾಗಲೂ ದೇವರು ನಮ್ಮನ್ನು ಪ್ರೀತಿಸಿ ತನ್ನ ಪ್ರಿಯ ಕುಮಾರನನ್ನು ಕಳುಹಿಸಿದನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲಾರೂ ನಿತ್ಯಜೀವವನ್ನು ಪಡೆಯಬೇಕು ಎಂಬುದೇ ಆತನ ಚಿತ್ತವಾಗಿದೆ.

ಆದಿಯಲ್ಲಿ, ಮನುಷ್ಯನ ಮೂಗಿನಲ್ಲಿ ಕರ್ತನು ಶ್ವಾಸವನ್ನು ಊದಿದಾಗ, ಅವನು ಜೀವಾತ್ಮನಾದನು. ನಂತರ ಅವನ ಜೀವ ಸಮೃದ್ಧಿಗೊಳ್ಳುವದಕ್ಕಾಗಿ, ಏದೆನ್ ತೋಟದಲ್ಲಿ ಕರ್ತನು ಜೀವವೃಕ್ಷವನ್ನಿಟ್ಟನು. ಮನುಷ್ಯನು ಪ್ರತಿದಿನವೂ ಆ ಜೀವವೃಕ್ಷದ ಹಣ್ಣನ್ನು ತಿಂದು, ಸಮೃದ್ಧಿಗೊಳ್ಳಬೇಕೆಂಬುದು ಕರ್ತನ ಉದ್ದೇಶವಾಗಿತ್ತು. ಆದರೆ ಅವರು ಜೀವವೃಕ್ಷದ ಹಣ್ಣನ್ನು ತಿನ್ನದೆ, ಕರ್ತನು ನಿಷೇಧಿಸಿದ್ದ ಒಳ್ಳೆಯದರ ಕೆಟ್ಟದ್ದರ ಅರಿವನ್ನು ಮೂಡಿಸುವ ವೃಕ್ಷದ ಹಣ್ಣನ್ನು ತಿಂದನು. ಅವನ ಆತ್ಮ ಅವನೊಳಗೆ ಸತ್ತು ಹೋಯಿತು. ಇಂದೂ ಅನೇಕರು ಜೀವಿಸುವವರಾಗಿದ್ದಾಗ್ಯೂ, ತಮ್ಮ ಪಾಪದ ದೆಸೆಯಿಂದ ಆತ್ಮದಲ್ಲಿ ಸತ್ತವರಾಗಿ ಕಾಣಲ್ಪಡುವರು. ಪಾಪ ಮಾಡುವ ಆತ್ಮವೇ ಸಾಯುವದು (ಯೆಹೆ 18:20). "ಪಾಪದ ಸಂಬಳ ಮರಣ" (ರೋಮಾ 6:23) ಎಂದು ದೇವರ ವಾಕ್ಯ ಹೇಳುತ್ತದೆ.

ಮರಣದೊಂದಿಗೆ ಹೋರಾಡುವವನನ್ನು, ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ, ಮೊದಲು ಪ್ರಾಣಾಪಾಯದಿಂದ ತಪ್ಪಿಸಲು ವೈದ್ಯರು ತುರ್ತುಚಿಕಿತ್ಸೆ ನೀಡುವರು. ನಂತರ ಅವನಿಗೆ ಹಲವು ರೀತಿಯ ಚಿಕಿತ್ಸೆ ನೀಡಿ ಅವನನ್ನು ಬಲಪಡಿಸುವರು. ಇದನ್ನೇ ಯೇಸುಕ್ರಿಸ್ತನೂ, ಇಂದು ಮಾಡುವನು ಮೊದಲನೆಯದಾಗಿ ಅಕ್ರಮಗಳಿಂದಲೂ, ಪಾಪಗಳಿಂದಲೂ ಆತ್ಮದಲ್ಲಿ ಸತ್ತ ಮನುಷ್ಯರ ಮೇಲೆ ತನ್ನ ರಕ್ತವನ್ನು ಚೆಲ್ಲಿ ಬದುಕಿಸುವನು. ನಂತರ ಕೃಪೆಯ ವಾಕ್ಯಗಳಿಂದಲೂ ಪವಿತ್ರಾತ್ಮನ ಬಲದಿಂದಲೂ ಅವನನ್ನು ಪೂರ್ಣತೆಯ ಕಡೆಗೆ ನಡೆಸುವನು. ಒಬ್ಬನು ಒಂದೇ ದಿನದಲ್ಲಿ ರಕ್ಷಿಸಲ್ಪಡುವನು. ಆದರೆ ಪೂರ್ಣತೆಯೊಳಗೆ ಬರಲು, ಅವನು ಆಯುಷ್ಕಾಲವೆಲ್ಲಾ ಶ್ರಮಿಸಬೇಕಾಗಿರುವದು. ಅದಕ್ಕಾಗಿಯೇ ಕರ್ತನು ಕೃಪೆಯ ಮೇಲೆ ಕೃಪೆ ನೀಡುವನು. ಪರಿಶುದ್ಧತೆಯ ಮೇಲೆ ಪರಿಶುದ್ಧತೆಗೆ ನಡೆಸುವನು ಮಹಿಮೆಯ ಮೇಲೆ ಮಹಿಮೆ ಹೊಂದುವಂತೆ ಮಾಡುವನು.

ದೇವಮಕ್ಕಳೇ, ಕರ್ತನ ಅಂತರಾಳದಲ್ಲಿ ಇರುವ ಬಯಕೆ ನೀವು ಪೂರ್ಣಗೊಂಡವರಾಗಿ, ಗುಣಾಶಾಲಿಗಳಾಗಿ ಕೃಪಾ ಭರಿತರಾಗಿ ಕಾಣಬೇಕೆಂಬುದೇ.

**ನೆನಪಿಗೆ : "ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆ 1:23).**

| ಮೇ 06 | ಪೂರ್ಣ ಪ್ರೀತಿ! | ಬೆಳಗ್ಗೆ : 1ಅರಸು 21,22<br>ಸಂಜೆ : ಲೂಕ 23:26-56 |
|---|---|---|

**"ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಬರುವದು; ಪೂರ್ಣಪ್ರೀತಿಯು....ಸಿದ್ಧಿಗೆ ಬಂದವನಲ್ಲ" (1ಯೋಹಾ 4:18).**

ಸತ್ಯವೇದ ಹೇಳುತ್ತದೆ "ದೇವರೇ ಪ್ರೀತಿಯಾಗಿರುವನು" ಎಂದು. ಪ್ರೀತಿಯೇ ಪ್ರಧಾನವಾದದ್ದು, ಸಹೋದರ ಪ್ರೀತಿಯೇ ಪ್ರಧಾನವಾದದ್ದೆಂದು ನಾವೂ ಹಾಡುತ್ತೇವೆ ಸತ್ಯವೇದವು ಹೇಳುತ್ತದೆ ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು ಎಷ್ಟೋ ರಮ್ಯವಾದದ್ದು ಎಂದು (ಕೀರ್ತ 133:1). ಆದರೆ, ದೈವೀಕ ಪ್ರೀತಿಯಲ್ಲಿ ನಾವು ಸಿದ್ದಿಗೆ ಬಂದಿರುವೆವೊ? ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ.

ಹಳೆಯ ಒಡಂಬಡಿಕೆಯಲ್ಲಿನ ಹತ್ತು ಆಜ್ಞೆಗಳನ್ನು, ಹೊಸ ಒಡಂಬಡಿಕೆಯಲ್ಲಿ ಎರಡು ಆಜ್ಞೆಗಳನ್ನಾಗಿ ದೇವರು ನಮಗೆ ಕೊಟ್ಟಿರುವನು. ಎರಡೂ ಪ್ರೀತಿಯ ಆಜ್ಞೆಗಳೇ. ಒಂದು ದೇವರನ್ನು ಪೂರ್ಣವಾಗಿ ಪ್ರೀತಿಸಬೇಕು. ಎರಡನೆಯದು, ನಮ್ಮನ್ನು ನಾವು ಪ್ರೀತಿಸಿದಂತೆ, ಇತರರನ್ನು ಪ್ರೀತಿಸಬೇಕು. ಈ ಎರಡು ಆಜ್ಞೆಗಳಲ್ಲಿ ಧರ್ಮಶಾಸ್ತ್ರವೂ ಪ್ರವಾದನೆಗಳೂ ಅಡಗಿರುವವು.

ಪ್ರೀತಿಯಲ್ಲಿ ನಾವು ಸಿದ್ಧಿಗೆ ಬರುವಂತೆ, ಯೇಸುಕ್ರಿಸ್ತನು ತಾನೇ, ದೈವೀಕ ಪ್ರೀತಿಯನ್ನು ಮನುಕುಲಕ್ಕೆ ಪ್ರಕಟಿಸಿರುವನು. ಆ ಪ್ರೀತಿ "ಅಗಾಫೆ" ಪ್ರೀತಿ. ಯಾವದೇ ರೀತಿಯ ಪ್ರತಿಫಲವನ್ನು ಅಪೇಕ್ಷಿಸದೆ, ತನ್ನನ್ನೇ ಒಪ್ಪಿಸಿಕೊಟ್ಟ ಪ್ರೀತಿ. ಆ ಪ್ರೀತಿಯ ಶ್ರೇಷ್ಠತೆಯನ್ನು ಕಲ್ವಾರಿ ಶಿಲುಬೆಯಲ್ಲಿ ಕಾಣುತ್ತೇವೆ. ಕರ್ತನು ಅಷ್ಟಕ್ಕೇ ನಿಂತು ಬಿಡಲಿಲ್ಲ, ಪರಲೋಕದ ಪ್ರೀತಿಯನ್ನು ಪವಿತ್ರಾತ್ಮನ ಮೂಲಕವಾಗಿ ನಿಮ್ಮೊಳಗೆ ಸುರಿಸಲು ನಿರ್ಧರಿಸಿದನು (ರೋಮಾ 5:5). ಅಪೊ. ಯೋಹಾನನು ಬರೆಯುತ್ತಾನೆ –"ದೇವರನ್ನು ಯಾರೂ ಎಂದೂ ನೋಡಿಲ್ಲ, ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ, ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ, ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ" ಎಂದು (1ಯೋಹಾ 4:12). ಕ್ರೈಸ್ತ ಮಾರ್ಗ ಪ್ರೀತಿಯ ಮಾರ್ಗ. ತಂದೆಯೂ ಪ್ರೀತಿಯನ್ನು ಪ್ರಕಟಿಸುವನು. ಕುಮಾರನೂ ಪ್ರೀತಿಯನ್ನು ಪ್ರಕಟಿಸುವನು, ಪವಿತ್ರಾತ್ಮನೂ ಪ್ರೀತಿಯನ್ನು ಪ್ರಕಟಿಸುವನು, ಕ್ರೈಸ್ತಸಭೆಯೂ ಪ್ರೀತಿಯನ್ನು ಪ್ರಕಟಿಸುವಂತೆ ಕರೆಯಲ್ಪಟ್ಟಿರುವದು.

ಅಪೊ.ಪೌಲನು ಪ್ರೀತಿಯ ಕುರಿತು 1ಕೊರಿ 13ನೇ ಅಧ್ಯಾಯ ಪೂರ್ತಿಯಾಗಿ ಬರೆದಿರುವನು. ಕೊನೆಯಲ್ಲಿ ನಂಬಿಕೆ, ನಿರೀಕ್ಷೆ, ಪ್ರೀತಿ, ಈ ಮೂರರಲ್ಲಿ "ಪ್ರೀತಿಯೇ ದೊಡ್ಡದು" ಎಂದು ಬರೆಯುತ್ತಾನೆ (1ಕೊರಿ 13:13). ಪ್ರಿಯರೇ, ದೇವರ ಮೇಲಿನ ಪ್ರೀತಿ ಮನುಷ್ಯನ ಮೇಲಿನ ಪ್ರೀತಿ, ಎರಡೂ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಆದಾಗ್ಯೂ ನಿಮ್ಮ ಮೊದಲ ಪ್ರೀತಿ ಕರ್ತನಿಗೆ ಕೊಡಲು ಬದ್ದರಾಗಿದ್ದೀರಿ ಎಂಬುದನ್ನು ಮರೆಯದಿರಿ.

**ನೆನಪಿಗೆ : "ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕರುಣೆಯನ್ನು ಎದುರುನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ" (ಯೂದ 1:21).**

| ಮೇ 07 | **ನಂಬಿಕೆಯಲ್ಲಿ ಸಿದ್ಧಿ!** | ಬೆಳಗ್ಗೆ : 2ಅರಸು 1,2,3<br>ಸಂಜೆ : ಲೂಕ 24:1-35 |
|---|---|---|

**"ಅವನ ನಂಬಿಕೆಯು ಕ್ರಿಯೆಗಳೊಂದಿಗೆ ಪ್ರವರ್ತಿಸಿ ಆ ಕ್ರಿಯೆಗಳಿಂದಲೇ ಸಿದ್ಧಿಗೆ ಬಂತೆಂಬದು ಕಾಣಬರುತ್ತದಲ್ಲಾ" (ಯಾಕೋ 2:22).**

ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟ ಪ್ರತಿಯೊಬ್ಬ ವಿಶ್ವಾಸಿಯೂ, ಮೊದಲನೆಯದಾಗಿ ಪ್ರೀತಿಯಲ್ಲಿ ಸಿದ್ಧಿಗೆ ಬರಬೇಕಾದದ್ದು ಬಹಳ ಅಗತ್ಯವಾದದ್ದು ನಂತರ ನಂಬಿಕೆಯಲ್ಲಿ ಸಿದ್ಧಿಗೆ ಬರಬೇಕು. ಕ್ರೈಸ್ತಮಾರ್ಗಕ್ಕೆ ಬೆನ್ನೆಲುಬು ನಂಬಿಕೆಯೇ ಆಗಿರುವದು. ಒಬ್ಬ ಮನುಷ್ಯನು ನೆಟ್ಟಗೆ ನಡೆಯಲು ಕೆಲಸ ಮಾಡಲು ಬೆನ್ನೆಲುಬು ಎಷ್ಟು ಮುಖ್ಯವೋ, ಅದರಂತೆ ಆತ್ಮೀಕ ಜೀವಿತದಲ್ಲಿ ಜಯಭರಿತ ಓಟಕ್ಕೆ ನಂಬಿಕೆ ಬಹಳ ಅಗತ್ಯವಾದದ್ದು. ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ.

ಕರ್ತನು ಅದ್ಭುತಗಳನ್ನು ಮಾಡುವಾಗೆಲ್ಲಾ ನಿನ್ನ ನಂಬಿಕೆಯಂತೆ ನಿನಗಾಗಲಿ ಎಂದು ಹೇಳಿ, ನಂಬಿಕೆಯ ಆಧಾರದ ಮೇಲೆಯೇ, ರೋಗಿಗಳನ್ನು ಗುಣಪಡಿಸಿದನು. ಅಶುದ್ಧಾತ್ಮಗಳನ್ನು ಓಡಿಸಿದನು, ಸತ್ತವರನ್ನು ಜೀವದಿಂದ ಎಬ್ಬಿಸಿದನು. ಹೇರಳವಾದ ಅದ್ಭುತಗಳನ್ನು ಮಾಡಿದನು. ಮಾರ್ಕ 2ನೇ ಅಧ್ಯಾಯದಲ್ಲಿ, ಪಾರ್ಶ್ವವಾಯು ರೋಗಿಯೊಬ್ಬನನ್ನು ನಾಲ್ಕು ಜನರು ಹೊತ್ತುಕೊಂಡು ಯೇಸುಕ್ರಿಸ್ತನು ಇದ್ದ ಮನೆಗೆ ಬಂದು, ಜನಸಂದಣಿ ಹೆಚ್ಚಾಗಿದ್ದದರಿಂದ, ಮನೆಯ ಚಾವಣಿಯನ್ನು ತೆಗೆದು, ಒಳಗೆ ಇಳಿಸಿದರು. ಆ ಪಾರ್ಶ್ವವಾಯು ರೋಗಿಗೆ, ಒಂದು ವೇಳೆ ನಂಬಿಕೆ ಇಲ್ಲದೇ ಹೋಗಿದ್ದಿರ ಬಹುದು ಆದರೆ ಕರ್ತನು, ಅವನನ್ನು ಹೊತ್ತುಕೊಂಡು ಬಂದವರಲ್ಲಿ ಬಲವಾದ ನಂಬಿಕೆ ಇರುವದನ್ನು ಕಂಡು ಪಾರ್ಶ್ವವಾಯು ರೋಗಿಯನ್ನು ಗುಣಪಡಿಸಿದನು. ಅನೇಕ ವೇಳೆಗಳಲ್ಲಿ ನೀವು ನಂಬಿಕೆಯಲ್ಲಿ ಸೋತು ಹೋಗುವಾಗ, ನಿಮಗಾಗಿ ಪ್ರಾರ್ಥಿಸುವ ದೇವಮಕ್ಕಳ ನಂಬಿಕೆಯನ್ನು ಕಂಡು, ಕರ್ತನು ಅದ್ಭುತವನ್ನು ಮಾಡುವನು.

ದೇವಮಕ್ಕಳೇ, ನಂಬಿಕೆಯಲ್ಲಿ, ನೀವು ಬಲಉಳ್ಳವರಾಗಿ ಇರಿ. ಎಷ್ಟೆಷ್ಟಾಗಿ, ಸತ್ಯವೇದ ವಾಕ್ಯಗಳನ್ನು ಓದಿ ಧ್ಯಾನಿಸುವಿರೋ, ಅಷ್ಟಾಗಿ ನಂಬಿಕೆ ನಿಮ್ಮಲ್ಲಿ ಉಕ್ಕಿ ಬರುವದು. "ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" (ರೋಮಾ 10:17). ಹಾಗೆಯೇ, ಬಲವಾದ ಸಾಕ್ಷಿಗಳನ್ನು ಕೇಳುವಾಗ, ಇವರಿಗೆ ಅದ್ಭುತ ಮಾಡಿದ ಕರ್ತನು ನನಗೂ ಅದ್ಭುತ ಮಾಡುವನು ಎಂಬ ನಂಬಿಕೆ ಬರುವದು. ಪ್ರಿಯರೇ, ಕರ್ತನ ಮಾತುಗಳನ್ನು ನಂಬಿಕೆಯಿಂದ ಅರಿಕೆ ಮಾಡುತ್ತಾ ಮಾಡುತ್ತಾ, ನಿಮ್ಮೊಳಗೆ ನಂಬಿಕೆ ಹೆಚ್ಚುತ್ತಾ ಹೋಗುವದು, ನೀವು ಕರ್ತನಿಗಾಗಿ ಮಹತ್ಕಾರ್ಯಗಳನ್ನು ಮಾಡುವಿರಿ. ಯೋಬನಂತೆ ನೀವು ಸಹ ನಾನು ನಂಬಿರುವಾತನನ್ನು ಬಲ್ಲೆನು, ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ ಎಂದು (2ತಿಮೊ 1:12) ಅರಿಕೆ ಮಾಡಿರಿ.

**ನೆನಪಿಗೆ : "ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ" (1ಯೋಹಾ 5:4).**

## ಮೇ 08 — ಪರಿಶುದ್ಧತೆಯಲ್ಲಿ ಸಿದ್ಧಿ!

ಬೆಳಗ್ಗೆ : 2ಅರಸು 4,5,6
ಸಂಜೆ : ಲೂಕ 24:36-53

**"ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯವುಳ್ಳವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2ಕೊರಿ 7:1).**

ಎಲ್ಲದಕ್ಕೂ ಒಂದು ಎಲ್ಲೆ ಉಂಟು. ಆದರೆ ಪವಿತ್ರತೆಗೆ ಒಂದು ಎಲ್ಲೆ ಇಲ್ಲ. ಸತ್ಯವೇದವು ಹೀಗೆ ಹೇಳುತ್ತದೆ ನೀತಿವಂತನು ಇನ್ನೂ ನೀತಿಯನ್ನು ಅನುಸರಿಸಲಿ. ಪವಿತ್ರನು ತನ್ನನ್ನು ಇನ್ನೂ ಪವಿತ್ರ ಮಾಡಿಕೊಳ್ಳಲಿ (ಪ್ರಕಟನೆ 22:11) ಎಂದು. ಇನ್ನೂ ಪರಿಶುದ್ಧ ಪಡಿಸಿಕೊಳ್ಳಬೇಕು ಎಂಬ ದಾಹ, ನಿಮ್ಮನ್ನು ಪರಿಶುದ್ಧತೆಯ ಮೇಲೆ ಪರಿಶುದ್ಧತೆಗೆ ನಡೆಸುವದು.

ಪರಿಶುದ್ಧತೆಯಲ್ಲಿ ನೀವು ಹೇಗೆ ಸಿದ್ಧಿಗೆ ಬರಲು ಸಾಧ್ಯ? ಮೇಲಿನ ವಾಕ್ಯದಲ್ಲಿ "ದೇವರ ಭಯವುಳ್ಳವರಾಗಿ" ಎಂಬ ಪದವನ್ನು ಕಾಣಬಹುದು. ಹೌದು, ದೇವರಿಗೆ ಭಯಪಡುವ ಭಯವೇ, ಆತನ ಸಾರೂಪ್ಯದಂತೆ ಪರಿಶುದ್ಧ ಹೊಂದಲು ನಿಮ್ಮನ್ನು ಪ್ರೇರೇಪಿಸುವದು. ಆದರೆ, ದೇವ ಭಯ ಇಲ್ಲದವನು. ಅಪವಿತ್ರವಾದದ್ದನ್ನೇ ಮಾಡುವನು. "ಪಾಪವು ದುಷ್ಟನ ಮನಸ್ಸಿನೊಳಗೆ ನುಡಿಯುತ್ತಿರುವದರಿಂದ ಅವನ ಕಣ್ಣೇದುರಿಗೆ ದೇವರ ಭಯವೇ ಇಲ್ಲ" (ಕೀರ್ತ 36:1) ಎಂದು ದಾವೀದನು ಹೇಳುತ್ತಾನೆ.

ಯೋಸೇಫನ ಜೀವಿತವನ್ನು ಗಮನಿಸಿರಿ. ಅವನು ತನ್ನನ್ನು ಕಾಪಾಡಿಕೊಂಡದ್ದರ ರಹಸ್ಯ, ಅವನಲ್ಲಿದ್ದ ದೇವ ಭಯ. ಪಾಪ ಶೋಧನೆ ಬಂದಾಗ, ಮನುಷ್ಯನ ಮುಂದೆ ಪಾಪವೆಂದು ಭಾವಿಸದೆ, ತನ್ನನ್ನು ಕಾಣುವ ದೇವರ ಮುಂದೆ ಭಯಂಕರವಾದ ಪಾಪವೆಂದು ಎಣಿಸಿದನು. "ನಾನು ಇಂಥಾ ಮಹಾದುಷ್ಕೃತ್ಯವನ್ನು ನಡೆಸಿ, ದೇವರಿಗೆ ವಿರುದ್ಧವಾಗಿ ಹೇಗೆ ಪಾಪಮಾಡಲಿ ಎಂದು ತನ್ನ ದಣಿಯ ಹೆಂಡತಿಗೆ ಉತ್ತರ ಕೊಟ್ಟನು" (ಆದಿ 39:9). ದಾನಿಯೇಲನು "ಸಕಲ ದುಷ್ಕೃತ್ಯಗಳಿಗೆ ತವರು ಎಂದು ಕರೆಯಲ್ಪಟ್ಟ ಬ್ಯಾಬಿಲೋನ್ ದೇಶಕ್ಕೆ ಹೋಗುವ ಮುನ್ನ, ಪರಿಶುದ್ಧತೆಯಲ್ಲಿ ಸಿದ್ಧಿಗೆ ಬರುವಂತೆ ತೀರ್ಮಾನಿಸಿದನು. ಆದ್ದರಿಂದಲೇ, ರಾಜಭೋಜನದಿಂದಲೂ, ದ್ರಾಕ್ಷಾ ರಸದಿಂದಲೂ ತನ್ನನ್ನು ಅಶುದ್ಧ ಪಡಿಸಿಕೊಳ್ಳಬಾರದೆಂದು ತೀರ್ಮಾನಿಸಿದನು. ಕರ್ತನು ಅವನ ತೀರ್ಮಾನವನ್ನು ಗೌರವಿಸಿದನು. ಆದರಿಂದ ಬೇರೆ ಎಲ್ಲಾ ಜ್ಞಾನಿಗಳಿಗಿಂತಲೂ ದಾನಿಯೇಲನ ಮುಖ ಕಳೆಗೊಳ್ಳುವಂತೆ ಕರ್ತನು ಮಾಡಿದನು.

ದೇವಮಕ್ಕಳೇ, ನೀವು ದೇವಭಯದಿಂದ, ಪರಿಶುದ್ಧತೆಯನ್ನು ಕಾಪಾಡಿಕೊಳ್ಳಲು ತೀರ್ಮಾನಿಸುವಾಗ, ಕರ್ತನು ನಿಶ್ಚಯವಾಗಿ ನಿಮಗೆ ಸಹಾಯ ಮಾಡುವನು ಪಾಪಶೋಧನೆಗಳಿಂದ ತಪ್ಪಿಸಿ ಕಾಪಾಡುವನು. ಇಂದು ನೀವು, ನಿಮ್ಮನ್ನು ಪರಿಶುದ್ಧತೆಗೆ ಒಪ್ಪಿಸಿಕೊಡುವಿರಾದರೆ, ಕರ್ತನ ಬರುವಿಕೆಯಲ್ಲಿ ನಿಶ್ಚಯವಾಗಿ ನೀವು ಬಹಳ ಸಂತೋಷವಾಗಿಯೂ ಉತ್ಸಾಹ ಉಳ್ಳವರಾಗಿಯೂ ಇರುವಿರಿ. ಆದ್ದರಿಂದ ಆತ್ಮದಲ್ಲಿ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಿರಿ ನೀವು ಪರಿಶುದ್ಧತೆಯಲ್ಲಿ ನಡೆಯುವುದರಿಂದ ನಿಮ್ಮ ಮಕ್ಕಳನ್ನು ಸಹ ಬಾಲ್ಯದಿಂದಲೇ ದೇವರ ಭಯಭಕ್ತಿಯಲ್ಲಿ ಬೆಳೆಸಿರಿ.

**ನೆನಪಿಗೆ : "ನೀವು ಸಹ ಸಿದ್ಧವಾಗಿರ್ರಿ, ನೀವು ನೆನಸದ ಗಳಿಗೆಯಲ್ಲಿ ಮನುಷ್ಯ ಕುಮಾರನು ಬರುತ್ತಾನೆ" (ಮತ್ತಾ 24:44).**

ಮೇ 09

## ಸಮಾಧಾನದಲ್ಲಿ ಪೂರ್ಣತೆ!

ಬೆಳಿಗ್ಗೆ : 2ಅರಸು 7,8,9
ಸಂಜೆ : ಯೋಹಾನ 1:1-34

**"ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ ಅವನಿಗೆ ನಿನ್ನಲ್ಲಿ ಭರವಸವಿದೆ" (ಯೆಶಾ 26:3).**

ಪಾಪವು ಕ್ಷಮಿಸಲ್ಪಡುವಾಗ, ನಿಮ್ಮ ಆಂತರ್ಯದಲ್ಲಿ ಸಮಾಧಾನ ಉಂಟಾಗುವದು. ಪ್ರಾರ್ಥನೆಯ ಸಮಯದಲ್ಲಿ ನಿಮ್ಮ ಭಾರವನ್ನು ಆತನ ಸಮ್ಮುಖದಲ್ಲಿ ಇಳಿಸಿ ಬಿಡುವಾಗ, ನಿಮಗೆ ಸಮಾಧಾನ ಉಂಟಾಗುವದು. ನಿಮ್ಮ ಪ್ರಿಯರು ನಿಮ್ಮ ಪಕ್ಕದಲ್ಲಿರುವಾಗ ನಿಮಗೆ ಸಮಾಧಾನ ಸಿಗುವದು. ಆದರೆ ಪೂರ್ಣಸಮಾಧಾನವನ್ನು ಪಡೆದುಕೊಳ್ಳುವ ಮಾರ್ಗ ಯಾವದು? ಕರ್ತನನ್ನು ಪೂರ್ಣವಾಗಿ ಆಶ್ರಯಿಸುವಾಗ ಪೂರ್ಣ ಸಮಾಧಾನವನ್ನು ನೀವು ಪಡೆದುಕೊಳ್ಳುವಿರಿ.

ಒಮ್ಮೆ, ಒಂದು ವಿಮಾನವನ್ನು ಇಬ್ಬರು ಭಯೋತ್ಪಾದಕರು ಬಂದೂಕು ತೋರಿಸಿ, ಅದರ ಮಾರ್ಗವನ್ನು ಬದಲಾಯಿಸಿದರು. ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದವರೆಲ್ಲರ ಮುಖ ಭಯದಿಂದ ತುಂಬಿತು. ಭಯೋತ್ಪಾದಕರು ಪ್ರಯಾಣಿಕರು ಆ ಕಡೆ ಈ ಕಡೆ ಕದಲದಂತೆ ಇರಬೇಕೆಂದೂ ತಪ್ಪಿದಲ್ಲಿ ಗುಂಡು ಹಾರಿಸಿ ವಿಮಾನವನ್ನು ಸುಟ್ಟು ಹಾಕುವದಾಗಿ ಹೆದರಿಸಿದರು. ಕೊನೆಯಲ್ಲಿ ವಿಮಾನ ಒಂದು ಕಾಡಿನಲ್ಲಿ ಇಳಿಯಿತು. ಆ ಭಯೋತ್ಪಾದಕರು ವಿಮಾನ ಚಾಲಕನನ್ನು ಸುಟ್ಟು ಕೊಂದು ಹಾಕಿದರು. ಇನ್ನು ಯಾರ ಮೇಲೆ ಗುಂಡು ಹಾರುವದೋ ಎಂದು ಇತರ ಪ್ರಯಾಣಿಕರು ನಡುಗಲಾರಂಭಿಸಿದರು. ಆದರೆ ಒಂದು ಮುಖದಲ್ಲಿ ಮಾತ್ರ, ಪೂರ್ಣ ಸಮಾಧಾನ ನೆಲೆಸಿತ್ತು. ಅದು ಯಾರು ಗೊತ್ತೇ? ಒಂದು ಹಸುಗೂಸು, ತನ್ನ ತಾಯಿಯ ಮಡಿಲಲ್ಲಿ ನಿಶ್ಚಿಂತೆಯಿಂದ ಮಲಗಿತ್ತು ಅದುವೇ ಪೂರ್ಣಸಮಾಧಾನ.

ಮನುಷ್ಯರು, ಕಳವಳಗೊಳ್ಳುವ ಕಾರಣ ಏನು? ಅವರು ಕರ್ತನನ್ನು ದೃಢವಾಗಿ ಹಿಡಿದುಕೊಳ್ಳದೇ, ಆತನ ಮೇಲೆ ನಂಬಿಕೆ ಇಡದೇ ಇರುವದೇ. ಪ್ರವಾದಿಯಾದ ಯೆಶಾಯನು "ಈಗ ನಿನ್ನ ಹೆಸರೆತ್ತಿ ಪ್ರಾರ್ಥಿಸಿ ನಿನ್ನನ್ನು ಆಶ್ರಯಿಸಲು ತ್ರಾಣ ತಂದುಕೊಳ್ಳುವವನು ಎಲ್ಲಿಯೂ ಇಲ್ಲ" ಎಂದು ಹೇಳುತ್ತಾನೆ (ಯೆಶಾ 64:7). ಸಹೋದರ ಸ್ಪರ್ಜನ್‌ರವರು ಒಮ್ಮೆ ಹೀಗೆ ಹೇಳಿದರು "ನಾನು ಸಮಾಧಾನವನ್ನು ಹುಡುಕಿ ಅಲೆದೆನು. ಅದು ನನ್ನನ್ನು ಬಿಟ್ಟುದೂರ ಹೋಯಿತು. ಕ್ರಿಸ್ತನನ್ನು ಹುಡುಕಿದೆ, ದೇವಸಮಾಧಾನ, ಪಾರಿವಾಳದಂತೆ ಬಂದು ನನ್ನ ಆಂತರ್ಯವನ್ನು ತುಂಬಿತು" ಎಂದು.

ದೇವಮಕ್ಕಳೇ, ಕ್ರಿಸ್ತನನ್ನು ದೃಢವಾಗಿ ಹಿಡಿದುಕೊಂಡು ಪೂರ್ಣ ಸಮಾಧಾನದೆಡೆಗೆ ಸಾಗಿರಿ. ನಮ್ಮ ಕರ್ತನು ಸಮಾಧಾನದಪ್ರಭು ಸಮಾಧಾನ ಕಾರಣನು ಪ್ರಪಂಚವು ಕೊಡಲಾಗದ ನಿಮ್ಮಿಂದ ತೆಗೆಯಲಾಗದ ಸಮಾಧಾನದಿಂದ ನಿಮ್ಮ ಆಂತರ್ಯವನ್ನು ತುಂಬುವನು.

**ನೆನಪಿಗೆ : "ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ.... ಹೆದರದಿರಲಿ" (ಯೋಹಾನ 14:27).**

| ಮೇ 10 | **ತಾಳ್ಮೆಯಲ್ಲಿ ಪೂರ್ಣತೆ!** | ಬೆಳಿಗ್ಗೆ : 2ಅರಸು 10,11,12<br>ಸಂಜೆ : ಯೋಹಾನ 1:35-51 |
| --- | --- | --- |

**"ಆ ತಾಳ್ಮೆಯು ಸಿದ್ಧಿಗೆ ಬರಲಿ; ಆಗ ನೀವು ಶಿಕ್ಷಿತರೂ ಸರ್ವಸುಗುಣವುಳ್ಳವರೂ ಏನೂ ಕಡಿಮೆಯಿಲ್ಲದವರೂ ಆಗಿರುವಿರಿ" (ಯಾಕೋಬ 1:4).**

ನೀವು ತಾಳ್ಮೆಯಲ್ಲಿ ಪೂರ್ಣರಾಗುವಾಗ, ಏನು ಕೊರತೆಯಿಲ್ಲದವ ರಾಗಿರುವಿರಿ. ಸರ್ವಸುಗುಣವುಳ್ಳವರೂ ಶಿಕ್ಷಿತರೂ ಆಗಿರುವಿರಿ. ಇದು ಕರ್ತನ ವಾಗ್ದಾನ.

ತಾಳ್ಮೆಯು ನಿಮ್ಮಲ್ಲಿ ಪೂರ್ಣವಾಗಿ ಕಾರ್ಯನಡೆಸಬೇಕು. ಅದು ಕ್ರಿಸ್ತನೊಂದಿಗೆ ಸಂಚರಿಸಲು ಸಹಾಯ ಮಾಡುವದು. ಆತ್ಮೀಕ ಜೀವಿತದಲ್ಲಿ ಮೇಲೆ ಮೇಲೆ ಸಾಗಲು ತಾಳ್ಮೆ ಬಹು ಅವಶ್ಯವಾದದ್ದು, ಆತ್ಮನ ಫಲಗಳಲ್ಲಿ ದೀರ್ಘಶಾಂತಿಯೂ ಒಂದಾಗಿದೆ (ಗಲಾ 5:22).

ಬೇಥಾನ್ಯ ಗ್ರಾಮದಲ್ಲಿದ್ದ ಲಾಜರನು ವ್ಯಾಧಿಗೆ ಒಳಗಾದನು. ಅವನ ಸಹೋದರಿಯರಾದ ಮಾರ್ಥ, ಮರಿಯಳು "ನಿನ್ನ ಸ್ನೇಹಿತನಾದ ಲಾಜರನು ವ್ಯಾಧಿಪೀಡಿತನಾಗಿರುವನು" ಎಂದು ಯೇಸುವಿಗೆ ಹೇಳಿ ಕಳುಹಿಸಿದರು. ಮಾತ್ರವಲ್ಲ ಆತನು ಕೂಡಲೆ ಬರುವನು ವ್ಯಾಧಿಯನ್ನು ಗುಣಪಡಿಸುವನು ಎಂದು ಕಾತರದಿಂದ ಕಾದಿದ್ದರು. ಯೇಸುವೋ ಬರಲಿಲ್ಲ. ವ್ಯಾಧಿ ಅಧಿಕವಾಗಿ ಲಾಜರನು ಮರಣ ಹೊಂದಿದನು. ನಾಲ್ಕು ದಿನಗಳ ನಂತರ ಯೇಸುಕ್ರಿಸ್ತನು ಬಂದನು. ಪ್ರಯೋಜನವೇನು? "ಅವನು ಸತ್ತು ನಾಲ್ಕು ದಿನಗಳಾಯಿತು, ನಾರುವದೇ ನೀನು ಇಲ್ಲಿ ಇದ್ದಿದ್ದರೆ, ನನ್ನ ಸಹೋದರನು ಸಾಯುತ್ತಿರಲಿಲ್ಲ" ಎಂದು ಲಾಜರನ ಸಹೋದರಿ ಹೇಳಿದಳು (ಯೋಹಾ 11:21–32). ಆದರೆ ಯೇಸುಕ್ರಿಸ್ತನು ಸತ್ತ ಲಾಜರನನ್ನು ಜೀವದಿಂದ ಎಬ್ಬಿಸಿ ಅದ್ಭುತ ಮಾಡಿದನು. ಆ ತಾಳ್ಮೆ, ದೀರ್ಘಶಾಂತಿ ದೇವರ ಮಹಿಮೆಯನ್ನು ಪ್ರಕಟಪಡಿಸಲು ಕಾರಣವಾಯಿತು ಕ್ರಿಸ್ತನೂ ಮಹಿಮೆ ಹೊಂದಿದನು!

ದೇವಮಕ್ಕಳೇ, ಕಷ್ಟಗಳಾ? ಉಪದ್ರವಗಳಾ? ತಾಳ್ಮೆಯಿಂದ ಇರಿ. ನಿಮ್ಮ ದೇವರು ಸತ್ತವರನ್ನು ಬದುಕಿಸುವ ಅದ್ಭುತನಾದ ದೇವರೆಂದು ನಂಬಿ, ಆತನನ್ನೇ ಆಶ್ರಯಿಸಿಕೊಳ್ಳಿರಿ. ತಡವಾದರೂ ತಾಳ್ಮೆಯುಳ್ಳವರಾಗಿರ್ರಿ. ಕರ್ತನು ನಿಶ್ಚಯವಾಗಿ ಅದ್ಭುತವನ್ನು ಮಾಡುವನು. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ. ಸಮಾಧಾನ ಪ್ರಭುವಾದ ಯೇಸುಕ್ರಿಸ್ತನನ್ನು ಕೂಗಿಕರೆಯಿರಿ. ಆತನೇ ನಿಮಗೆ ಸಮಾಧಾನದ ಆತ್ಮವನ್ನು ನೀಡುವನು. ಆದ್ದರಿಂದ ಕರ್ತನ ಆಶೀರ್ವಾದವನ್ನು ಪಡೆಯಲು ತಾಮಸದಿಂದಲೂ ತಾಳ್ಮೆಯಿಂದಲೂ ಕಾದಿರಿ ವಾಗ್ದಾನ ಮಾಡಿದಾತನು ನಂಬಿಗಸ್ಥನು. ಆತನು ನಿಮಗೆ ಕೊಟ್ಟ ವಾಗ್ದಾನವನ್ನು ನಿಶ್ಚಯವಾಗಿ ನೆರವೇರಿಸುವನು.

**ನೆನಪಿಗೆ : "ನೀವು ಪೂರ್ಣ ವಿನಯಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ" (ಎಫೆ 4:2).**

| ಮೇ 11 | **ಶ್ರಮೆಯ ಮೂಲಕ ಸಿದ್ಧಿ!** | ಬೆಳಗ್ಗೆ : 2ಅರಸು 13,14<br>ಸಂಜೆ : ಯೋಹಾನ 2 |
|---|---|---|

**"ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರು ರಕ್ಷಣಾ ಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿತ್ತು" (ಇಬ್ರಿ 2:10).**

ಬಾಧೆಗಳು, ಯೇಸುಕ್ರಿಸ್ತನನ್ನು ಪೂರ್ಣಪುರುಷನನ್ನಾಗಿಸಿತು, ಅನೇಕ ಉಪದ್ರವಗಳ ಹಾದಿಯಲ್ಲಿ ಸಿದ್ಧಿಗೆ ಬಂದು ದೇವರ ರಾಜ್ಯದಲ್ಲಿ ಪ್ರವೇಶಿಸಲು ಸಾಧ್ಯವಾಯಿತು.

ಮನುಷ್ಯನು ಸುಖಭೋಗವನ್ನು ಚಿಂತಿಸುವನು. ಆದರೆ ಕರ್ತನು, ಬಾಧೆಗಳಿಂದ ಸಿದ್ಧಿಗೆ ಬರುವ ಜೀವಿತವನ್ನೇ ಚಿಂತಿಸುವನು. ಕ್ರಿಸ್ತನು ತನ್ನ ಮರಣವನ್ನು ತನ್ನ ಶಿಷ್ಯರಿಗೆ ಮುಂತಿಳಿಸಿದಾಗ, "ಅಪೊ.ಪೇತ್ರನು ಆತನ ಕೈ ಹಿಡಿದು ಸ್ವಾಮೀ, ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು ಎಂದು ಆತನನ್ನು ಗದರಿಸುವದಕ್ಕೆ ಪ್ರಾರಂಭಿಸಲು, ಆತನು ತಿರುಗಿಕೊಂಡು ಪೇತ್ರನಿಗೆ ಸೈತಾನನೇ, ನನ್ನ ಮುಂದೆ ನಿಲ್ಲಬೇಡ ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಹೇಳಿದನು" (ಮತ್ತಾ 16:21–23). ಮನುಷ್ಯನು, ಹೆಸರು ಹೊಗಳಿಕೆಯನ್ನು ಚಿಂತಿಸುವನು ಕರ್ತನೋ ಶಿಲುಬೆಯಲ್ಲಿ ಪ್ರಪಂಚವನ್ನು ಜಜ್ಜಲು ಚಿಂತಿಸುವನು. ಯೇಸುಕ್ರಿಸ್ತನಲ್ಲಿದ್ದ ಯೋಚನೆ ನಿಮ್ಮೊಳಗಿರಲಿ. "ಕ್ರಿಸ್ತೇಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವರೆಲ್ಲರೂ ಹಿಂಸೆಗೆ ಒಳಗಾಗುವರು" (2ತಿಮೊ 3:12). "ಕ್ರಿಸ್ತನ ಮೇಲೆ ನಂಬಿಕೆಯಿಡುವದೂ ಆತನಿಗೋಸ್ಕರ ಬಾಧೆಯನ್ನನುಭವಿಸುವದೂ ನಿಮಗೆ ಅನುಗ್ರಹವಾಗಿ ದೊರೆಯಿತು" (ಫಿಲಿ 1:29).

ಶಿಲುಬೆ ಇಲ್ಲದೆ ಸಿಂಹಾಸನವಿಲ್ಲ, ಬಾಧೆಗಳಿಲ್ಲದೆ ಸಿದ್ಧಿ ಇಲ್ಲ, ಉಪದ್ರವದ ಹಾದಿ ಅಲ್ಲದೆ ಪರಲೋಕಕ್ಕೆ ಬೇರೆ ಮಾರ್ಗಗಳೂಇಲ್ಲ, ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಉಲ್ಲಾಸ ಸುಖ ಭೋಗ ಮಾರ್ಗವನ್ನು ಬೋಧಿಸಲಿಲ್ಲ. ಪ್ರಾರಂಭದಿಂದಲೇ ಬಾಧೆಗಳನ್ನು ಸಹಿಸಲು ಅವರನ್ನು ಸಿದ್ಧಪಡಿಸಿದನು. ದುಃಖ ಪಡುವವರು ಧನ್ಯರು; ಅವರು ಸಮಾಧಾನ ಹೊಂದುವರು. ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು, ಪರಲೋಕರಾಜ್ಯವು ಅವರದು. ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಎಂಬುದು ಕರ್ತನ ಬೋಧನೆಯಾಗಿದೆ (ಮತ್ತಾ 5:4,10,11).

ದೇವಮಕ್ಕಳೇ, ಪ್ರಪಂಚವನ್ನು ಜಯಿಸಿದ ಕ್ರಿಸ್ತನು ನಿಮ್ಮ ಪ್ರತಿಯೊಂದು ಕಷ್ಟದ ಹಾದಿಯಲ್ಲೂ ನಿಮ್ಮ ಜೊತೆಯಲ್ಲೇ ಬರುವನು ಆತನ ಮಕ್ಕಳಾದ ನಿಮಗೆ ಏನು ಬೇಕು ಎಂಬುದನ್ನು ಆತನು ತಿಳಿದಿರುವನು. ಆದ್ದರಿಂದ ನೀವು ಏನೇ ಕಷ್ಟ ಬಂದರೂ ಹೆದರದೆ ಸಹಾಯ ಬರುವ ಪರ್ವತವಾಗಿರುವ ಕರ್ತನು ನನ್ನ ಸಂಗಡ ಇದ್ದು ನನ್ನ ಮುಂದೆ ಇರುವ ದಿಣ್ಣೆಗಳನ್ನು ಸಮ ಮಾಡುವನು ಎಂದು ಮುಂದೆ ಸಾಗಿರಿ. ಯಾವ ಕಷ್ಟಗಳಾದರೂ ಸರಿ, ಕ್ರಿಸ್ತಯೇಸುವಿನ ಪ್ರೀತಿಯಿಂದ ಎಂದಿಗೂ ನಿಮ್ಮನ್ನು ಅಗಲಿಸಲಾರದು ಪೂರ್ಣತೆಯೆಡೆಗೆ ಆನಂದದಿಂದ ಮುಂದೆ ಸಾಗಿರಿ.

**ನೆನಪಿಗೆ : "ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು ಸಹಿಸಿಕೊಳ್ಳು ವವರಾಗಿದ್ದರೆ ಆತನೊಡನೆ ಆಳುವೆವು" (2ತಿಮೊ 2:11,12).**

**"ನನ್ನ ಕೃಪೆಯೇ ನಿನಗೆ ಸಾಕು.....ಪೂರ್ಣಸಾಧಕವಾಗುತ್ತದೆ ಅಂದನು" (2ಕೊರಿ 12:9).**

ಕರ್ತನಲ್ಲಿ ಬಲಹೊಂದಿದವನು, ಕರ್ತನನ್ನೇ ಬಲವಾಗಿಸಿಕೊಂಡವನು ಭಾಗ್ಯವಂತನು; ಜೀವಿತದ ಪ್ರತಿಯೊಂದು ಹೆಜ್ಜೆಯಲ್ಲೂ ಬಲಹೊಂದಿ ಕರ್ತನನ್ನು ಸ್ತುತಿಸಿದ ದಾವೀದನು "ನನ್ನ ಬಲವೂ ಕೀರ್ತನೆಯೂ ಯಾಹುವೇ" ಎಂದು ಬರೆಯುತ್ತಾನೆ (ಕೀರ್ತ 118:14). ಆತನು ಸೋತವರಿಗೆ ತ್ರಾಣವನ್ನು ನಿರ್ಬಲರಿಗೆ ಬಹು ಬಲವನ್ನು ಕೊಡುವಾತನಾಗಿದ್ದಾನೆ.

ಕರ್ತನು, ಯಾವಾಗಲೂ, ನಿಮ್ಮನ್ನು ಬಲಗೊಳಿಸಲು ಕಾತರದಿಂದಿರುವನು. "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು ಹೇಳಿ ಬಲಹೊಂದಿರಿ (ಫಿಲಿ 4:13). ನಿಮ್ಮನ್ನು ಉನ್ನತ ಬಲದಿಂದ ತುಂಬುವ ಪವಿತ್ರಾತ್ಮನಿಂದ, ಬಲಹೊಂದಿಕೊಳ್ಳಿರಿ (ಅ.ಕೃ 1:8). ವಾಗ್ದಾನಗಳನ್ನು ಹಿಡಿದುಕೊಂಡು, ದೇವರ ಸಮ್ಮುಖದಲ್ಲಿ ಕಾದಿದ್ದು ಬಲಹೊಂದಿರಿ (ಯೆಶಾ 40:31).

ನಿಮ್ಮನ್ನು ನೀವು ಬಲಹೀನನೆಂದೋ, ಅನಾಥನೆಂದೋ, ಅವಿದ್ಯಾವಂತನೆಂದೋ ಭಾವಿಸಿ ಎಂದಿಗೂ ಸೋತು ಹೋಗಬೇಡಿರಿ. "ದೇವರು ಜ್ಞಾನಿಗಳನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ" (1ಕೊರಿ 1:27) ಎಂದು ದೇವರ ವಾಕ್ಯ ಹೇಳುತ್ತದೆ. ತನ್ನನ್ನು ಬಲಪಡಿಸಿದ ಕರ್ತನನ್ನು ನೋಡಿ, ದಾವೀದನು ಕೃತಜ್ಞತೆಯಿಂದ ಹೇಳುತ್ತಾನೆ. "ನೀನು ನನಗೆ ಯುದ್ಧಕ್ಕಾಗಿ ಶೌರ್ಯವೆಂಬ ನಡುಕಟ್ಟನ್ನು ಬಿಗಿದಿದ್ದೀ; ಎದುರಾಳಿಗಳನ್ನು ಕುಗ್ಗಿಸಿ ನನಗೆ ಅಧೀನ ಮಾಡಿದ್ದೀ, ನಿನ್ನ ಬಲದಿಂದ ದಂಡಿನ ಮೇಲೆ ಬೀಳುವೆನು ನನ್ನ ದೇವರ ಸಹಾಯದಿಂದ ಪ್ರಾಕಾರವನ್ನು ಲಂಘಿಸುವೆನು" ಎಂದು (2ಸಮು 22:40,30). ಅಂದು ಇಸ್ರಾಯೇಲ್ಯರಲ್ಲಿ ಬಲಹೀನನಾದವನು ಒಬ್ಬನೂ ಇರಲಿಲ್ಲ. ಮೋಶೆಗೆ 120 ವರುಷಗಳಾದರೂ ಅವನ ಕಣ್ಣುಗಳು ಮಂಕಾಗಲಿಲ್ಲ ಕಾಲುಗಳು ಎಡವಲಿಲ್ಲ ಕಾಲೇಬನಿಗೆ 85 ವರುಷಗಳಾದರೂ ಅವನ ಬಲಕುಂದಲಿಲ್ಲ. ನೀವು ಸಹ ಕರ್ತನನ್ನು ಆತುಕೊಂಡು ಬಲಹೊಂದಿರಿ.

ದೇವಮಕ್ಕಳೇ, ಇಂದು ನಿಮಗೆ 1.ರಕ್ಷಣೆಯಲ್ಲಿ ಬಲ ಉಂಟು ರಕ್ಷಿಸಲ್ಪಟ್ಟ ಕೂಡಲೆ ಕರ್ತನೂ, ಪರಲೋಕ ಸೈನ್ಯವೂ ನಿಮ್ಮೊಂದಿಗಿರುವದನ್ನು ಗ್ರಹಿಸುವಿರಿ. ನಮಗೆ ಬಲವಾದ ಪಟ್ಟಣವಿದೆ. ರಕ್ಷಣೆಯನ್ನು ಕೋಟೆಯನ್ನಾಗಿಯೂ, ಹೊರ ಪೌಳಿಯನ್ನಾಗಿಯೂ ಮಾಡಿದ್ದಾನೆ (ಯೆಶಾ 26:1). 2.ವಾಕ್ಯದಲ್ಲಿ ನಿಮಗೆ ಬಲವಿದೆ ಅದು ಕೋಟೆಗಳನ್ನು ಕೆಡವಿ ಹಾಕುವದಕ್ಕೆ ದೇವಬಲ ಉಳ್ಳದ್ದಾಗಿರುವದು (2ಕೊರಿ 10:4). 3.ಪವಿತ್ರಾತ್ಮನಲ್ಲಿ ನಿಮಗೆ ಬಲ ಉಂಟು ಪವಿತ್ರಾತ್ಮನು ನಿಮ್ಮೊಳಗೆ ಬರುವಾಗ ನೀವು ಬಲಗೊಳ್ಳುವಿರಿ (ಅ.ಕೃ 1:8). ನಿಮ್ಮಲ್ಲಿ ಪವಿತ್ರಾತ್ಮನು ಇರುವದಾದರೇ ನೀವು ಬಲಹೊಂದಿ ಯಾವ ಕಾರ್ಯವಾದರೂ ಮಾಡಬಲ್ಲಿರಿ.

**ನೆನಪಿಗೆ : "ಅವರು ಹೆಚ್ಚು ಹೆಚ್ಚಾಗಿ ಬಲಹೊಂದಿ ಚೀಯೋನ್ ಗಿರಿಯಲ್ಲಿ ದೇವರ ಸನ್ನಿಧಿಯನ್ನು ಸೇರುವರು" (ಕೀರ್ತ 84:7).**

| ಮೇ 13 | ವರಗಳಲ್ಲಿ ಸಿದ್ಧಿ! | ಬೆಳಗ್ಗೆ : 2ಅರಸು 17,18<br>ಸಂಜೆ : ಯೋಹಾನ 3:22-36 |
|---|---|---|

**"ಎಲ್ಲಾ ಒಳ್ಳೇದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲ ವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದು ಬರುತ್ತವೆ" (ಯಾಕೋ 1:17).**

ನನಗೂ ಕರ್ತನು ವರಗಳನ್ನು ಕೊಡುವನಾ? ನಾನು ಅದಕ್ಕೆ ಯೋಗ್ಯನಾದವನಾ? ಎಂದು ಒಂದು ವೇಳೆ ನೀವು ಕೇಳಬಹುದು (ಎಫೆಸ 4:6-8) ಅನ್ನು ಓದಿ ನೋಡಿರಿ ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯನಡೆಸುವವನೂ ಎಲ್ಲರಲ್ಲಿಯೂ ವಾಸಿಸುವವನೂ ಆಗಿದ್ದಾನೆ. "ಆದರೆ ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವನವನಿಗೆ ಕೃಪಾವರವು ದೊರಕಿದೆ. ಆದದರಿಂದ ಆತನು ಉನ್ನತ ಸ್ಥಾನಕ್ಕೆ ಏರಿದಾಗ ತಾನು ಜಯಿಸಿದ್ದ ಬಹು ಜನರನ್ನು ಸೆರೆಹಿಡಿದುಕೊಂಡು ಹೋಗಿ ಮನುಷ್ಯರಿಗೆ ದಾನಗಳನ್ನು ಮಾಡಿದನು" ಎಂದು ಬರೆಯಲ್ಪಟ್ಟಿರುವದು.

ಹಳೆಯ ಒಡಂಬಡಿಕೆಯ ಭಕ್ತರಿಗೆ ವರಗಳು ಅಪರೂಪವಾಗಿತ್ತು. ಆದರೆ ಹೊಸ ಒಡಂಬಡಿಕೆಯಲ್ಲಿ ಪಂಚಾಶತ್ತಮ ದಿನದಿಂದ ಮೇಲ್ಮನೆಯಲ್ಲಿ ಕೂಡಿದ್ದ ಪ್ರತಿಯೊಬ್ಬರೂ ಆತ್ಮನ ವರಗಳನ್ನು ಪಡೆದುಕೊಂಡರು. ಸತ್ಯವೇದ ಹೇಳುತ್ತದೆ, "ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ, ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತನಾಡುವದಕ್ಕೆ ಪ್ರಾರಂಭಿಸಿದರು" (ಅ.ಕೃ 2:4). ಆತ್ಮನ ವರಗಳಿಂದ ಕರ್ತನು ಜೀವಸ್ವರೂಪನು ಎಂಬುದನ್ನು ನಿರೂಪಿಸುತ್ತೇವೆ. ಕ್ರೈಸ್ತೇತರನ್ನು ಮಾತಿನಿಂದಲೂ, ಬಲದಿಂದಲೂ ಕ್ರಿಸ್ತನ ಸುವಾರ್ತೆಗೆ ವಿಧೇಯರಾಗುವಂತೆ ಮಾಡುತ್ತೇವೆ. ಪ್ರವಾದನೆಗಳ ಮೂಲಕ ಭವಿಷ್ಯತ್ಕಾಲವನ್ನು ಕುರಿತು ತಿಳಿಯುವೆವು. ಇತರರ ರಕ್ಷಣೆಗೂ ನಮ್ಮ ಭಕ್ತಿವೃದ್ಧಿಗೂ ವರಗಳು ಸಹಾಯಕವಾಗಿರುವದು.

ಅಪೊ.ಪೌಲನು ಆತ್ಮನ ವರಗಳನ್ನು ಅಪೇಕ್ಷಿಸಿರಿ ಎಂದು ಬರೆಯುತ್ತಾನೆ. ಒಂಬತ್ತು ವಿಧವಾದ ಆತ್ಮನ ವರಗಳ ಕುರಿತು (1ಕೊರಿ 12:8-10) ರವರೆಗೆ ಬರೆಯಲ್ಪಟ್ಟಿರುವದು ಅವು ಯಾವವೆಂದರೆ ಜ್ಞಾನವಾಕ್ಯ, ವಿದ್ಯಾವಾಕ್ಯ, ನಂಬಿಕೆ, ರೋಗಗಳನ್ನು ವಾಸಿಮಾಡುವದು, ಮಹತ್ತುಗಳನ್ನು ಮಾಡುವದು, ಪ್ರವಾದನೆ ಹೇಳುವದು, ಸತ್ಯಾಸತ್ಯತೆಗಳನ್ನು ವಿವೇಚಿಸುವದು, ವಿವಿಧ ವಾಣಿಗಳನ್ನಾಡುವದು, ವಾಣಿಗಳ ಅರ್ಥವನ್ನು ಹೇಳುವದು. ಅದೇ ರೀತಿ ಒಂಬತ್ತು ಆತ್ಮನ ಫಲಗಳನ್ನಿಟ್ಟಿರುವನು. "ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೇ" (ಗಲಾ 5:22).

ದೇವಮಕ್ಕಳೇ, ಈ ಎಲ್ಲಾ ವರಗಳನ್ನು ಫಲಗಳನ್ನು ಕರ್ತನು ನಿಮಗಾಗಿಯೇ ಇಟ್ಟಿರುವನು. ಆತನ ವರಗಳೂ, ಫಲಗಳು ಸೇರಿಯೇ ನಿಮ್ಮಲ್ಲಿ ಕಾಣಲ್ಪಡಬೇಕು. ಅನೇಕರು ವರವಿದ್ದರೂ ಫಲವಿಲ್ಲದ್ದರಿಂದ ಕ್ರಿಸ್ತೀಯ ಓಟದಲ್ಲಿ ತಪ್ಪಿ ಹೋಗುವರು.

**ನೆನಪಿಗೆ : "ನನ್ನ ತೋಟದ ಸುಗಂಧಗಳು.....ಎನ್ನಿನಿಯನು ತನ್ನ ತೋಟದೊಳಗೆ ಸೇರಿ ತನ್ನ ಉತ್ತಮ ಫಲಗಳನ್ನು ತಾನೇ ಭುಜಿಸುವನು" (ಪ.ಗೀ 4:16).**

| ಮೇ 14 | **ಪೂರ್ಣವಾಗಿ ಸುವಾರ್ತೆ!** | ಬೆಳಗ್ಗೆ : 2ಅರಸು 19,20,21<br>ಸಂಜೆ : ಯೋಹಾನ 4:1-26 |
|---|---|---|

**"ನಾನು ಯೆರೂಸಲೇಮ್ ಮೊದಲುಗೊಂಡು ಇಲ್ಲುರಿಕ ಸೀಮೆಯ ಪರ್ಯಂತರಕ್ಕೂ ಸುತ್ತಿ ಕ್ರಿಸ್ತನ ಸುವಾರ್ತೆಯ ಸಾರೋಣವನ್ನು ನೆರವೇರಿಸಿದ್ದೇನೆ" (ರೋಮಾ 15:19).**

"ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" ಇದು ನಮ್ಮ ಕರ್ತನಾದ ಯೇಸುಕ್ರಿಸ್ತನ ಮಹಾದೊಡ್ಡ ಆಜ್ಞೆ. ಸುವಾರ್ತೆಯನ್ನು ಪೂರ್ಣವಾಗಿ ಸಾರಿದ್ದೇನೆ ಇದುವೇ ಅಪೊ.ಪೌಲನ ಸಾಕ್ಷಿ! ಯೆರೂಸಲೇಮ್ ಮೊದಲುಗೊಂಡು ಇಲ್ಲುರಿಕ ಸೀಮೆಯವರಿಗೂ ಎಂಬುದನ್ನು ಸ್ವಲ್ಪ ಚಿಂತಿಸಿ ನೋಡಿರಿ.

ಆ ಕಾಲದಲ್ಲಿ ಈಗಿನಂತೆ, ಯಾವ ರೀತಿಯ ಸೌಕರ್ಯಗಳೂ ಇರಲಿಲ್ಲ, ಪ್ರಯಾಣ ಮಾಡಲು ವಿಮಾನವಾಗಲಿ, ಬಸ್ಸಾಗಲಿ, ಇರಲಿಲ್ಲ, ಬಾನುಲಿ ದೂರದರ್ಶನಗಳಿರಲಿಲ್ಲ, ಜನರಿಗೆ ಸುವಾರ್ತೆಯನ್ನು ಸಾರುವ ಅವಕಾಶವಿಲ್ಲ. ಪತ್ರಿಕೆಗಳು, ಪುಸ್ತಕಗಳನ್ನು ಮುದ್ರಿಸಲು ಮುದ್ರಣಾಲಯವಿರಲಿಲ್ಲ. ಆದರೆ ಪೂರ್ಣತ್ಯಾಗ, ಪೂರ್ಣ ಅರ್ಪಣೆ ಇತ್ತು. ಯೇಸುಕ್ರಿಸ್ತನು ನಿಮ್ಮನ್ನು ನೋಡಿ ನೀವು ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ ಎಂದು ಹೇಳಿರುವನಲ್ಲವೇ? ನಿಮ್ಮ ಕರ್ತವ್ಯವನ್ನು ನೆರವೇರಿಸಿರುವಿರಾ? ಪೂರ್ಣವಾದ ಸುವಾರ್ತೆಯನ್ನು ಪೂರ್ಣವಾಗಿ ಸಾರಿ, ಪೂರ್ಣತೆಯೊಳಗೆ ಜನರನ್ನು ನಡೆಸಿರುವಿರಾ?

ಪೂರ್ಣವಾದ ಸುವಾರ್ತೆಯಿಂದ, ಜನರಿಗೆ ಪೂರ್ಣ ಆಶೀರ್ವಾದ ಉಂಟು ಅಪೂರ್ಣವಾದ ಸುವಾರ್ತೆಯನ್ನು ಸಾರಿ ಸತ್ಯವನ್ನು ಮರೆಮಾಡುವಾಗ ಜನರು ಆಶೀರ್ವಾದವನ್ನು ಕಳೆದುಕೊಳ್ಳುವರು. ಕರ್ತನಿಗೂ ಈ ಕುರಿತು ನೀವು ಲೆಕ್ಕ ಕೊಡಬೇಕಾಗುವದು. ಅಪೊ.ಪೌಲನು ಎಷ್ಟು ದೃಢವಾಗಿ, "ನಿಮ್ಮ ಬಳಿಗೆ ಬರುವಾಗ ಕ್ರಿಸ್ತನಿಂದಾಗುವ ವರಗಳನ್ನು ಹೇರಳವಾಗಿ ತರುವೆನೆಂದು ಬಲ್ಲೆನು" ಎಂದು ಬರೆಯುತ್ತಾನೆ (ರೋಮಾ 15:29). ಹೌದು, ಕ್ರಿಸ್ತನಲ್ಲಿ ಸಿದ್ಧಿಗೆ ಬಂದವರು ಅಂದರೆ ಆತನ ಪೂರ್ಣತೆಯನ್ನು ಅರಿತು ಅದರಂತೆ ನಡೆಯಲು ಪ್ರಯಾಸ ಪಡುವವರು, ಕರ್ತನ ಪೂರ್ಣತೆಯಿಂದ ತುಂಬಿರುವವರು ಸಂಪೂರ್ಣವಾದ ಆಶೀರ್ವಾದಗಳನ್ನು ತರುವರು. ಕ್ರಿಸ್ತನಲ್ಲಿರುವ ಪ್ರತಿಯೊಂದು ಆಶೀರ್ವಾದವು ಪವಿತ್ರಾತ್ಮನಿಂದ ಸಿಗುವದು. ಪ್ರತಿಯೊಂದು ಆತ್ಮನ ವರಗಳೂ, ಫಲಗಳೂ, ಕೃಪೆಯೂ ನಮಗೆ ಬಾಧ್ಯವಾದವುಗಳು ಪ್ರತಿಯೊಬ್ಬ ವಿಶ್ವಾಸಿಯೂ ಆತ್ಮನ ವರಗಳನ್ನು, ಫಲಗಳನ್ನು ಪಡೆದುಕೊಳ್ಳಲು ಸಾಧ್ಯ.

ದೇವಮಕ್ಕಳೇ, ಕ್ರಿಸ್ತನ ಪರಿಪೂರ್ಣ ಆಶೀರ್ವಾದಗಳಿಂದಲೂ ಪರಿಪೂರ್ಣವಾದ ಆತ್ಮನ ವರಗಳಿಂದಲೂ ತುಂಬಲ್ಪಡುವಿರಿ. ನೀವು ಆತನಲ್ಲಿ ನೆಲೆಗೊಂಡಿದ್ದು, ಆತನ ವಾಕ್ಯಗಳನ್ನು ಅನುಸರಿಸಿ ನಡೆದು ಫಲಕೊಡುವಿರಾದರೆ ನೀವು ಆತನ ಹೆಸರಿನಲ್ಲಿ ಆತನ ವಾಗ್ದಾನಗಳನ್ನು ಹಿಡಿದುಕೊಂಡು ಏನೂ ಬೇಡಿಕೊಂಡರೂ ನಿಮಗೆ ದೊರೆಯುವುದು

**ನೆನಪಿಗೆ : "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾ 10:10).**

| ಮೇ 15 | ನಂಬಿಕೆಯಲ್ಲಿ ಸಿದ್ಧಿ! | ಬೆಳಗ್ಗೆ : 2ಅರಸು 22,23<br>ಸಂಜೆ : ಯೋಹಾನ 4:27-54 |
|---|---|---|

**"ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು.....ಕೋರುತ್ತೇನೆ" (ಇಬ್ರಿ 6:12).**

ಅಪೊ.ಪೌಲನು ಇಬ್ರಿಯರಿಗೆ ಬರೆದಂಥ ಪತ್ರಿಕೆ ಅದ್ಭುತವಾದದ್ದು. ಈ ಪತ್ರಿಕೆ, ನಿಮ್ಮನ್ನು ಪೂರ್ಣತೆಯೆಡೆಗೆ ನಡೆಸುವಂಥದ್ದಾಗಿರುವದು. ನಿಮ್ಮನ್ನು ಕರೆದಾತನು ನಂಬಿಗಸ್ಥನಾದ ದೇವರು ನೀವು ಉಪಚಾರ ಮಾಡುವದರಲ್ಲಿ ಯಾವ ಆಸಕ್ತಿಯನ್ನು ತೋರಿಸಿದ್ದೀರೋ ನಿಮ್ಮ ನಿರೀಕ್ಷೆ ದೃಢಮಾಡಿಕೊಂಡು ಕಡೇ ತನಕ ಹಿಡಿಯುವದರಲ್ಲಿಯೂ ನಿಮ್ಮಲ್ಲಿ ಪ್ರತಿಯೊಬ್ಬರು ಅದೇ ಆಸಕ್ತಿಯನ್ನು ತೋರಿಸಬೇಕೆಂದು ಅಪೇಕ್ಷಿಸುತ್ತೇನೆ. ನಂಬಿಕೆಯಲ್ಲಿ ನೀವು ಪೂರ್ಣಸಿದ್ಧಿಗೆ ಬರಬೇಕು.

ನಂಬಿಕೆ ಎಂಬುದು ಹಂತ ಹಂತವಾಗಿ ಬರುವದಾಗಿದೆ. ಒಬ್ಬ ವೈದ್ಯರ ಬಳಿ ಎರಡು, ಮೂರು, ನಾಲ್ಕು ಸಾರಿ ಹೋಗಿ, ಅವರು ಕೊಡುವ ಚಿಕಿತ್ಸೆ ಫಲಕಾರಿಯಾದಲ್ಲಿ, ಅವರ ಮೇಲೆ ನಿಮಗೆ ನಂಬಿಕೆ ಬರುವದು. ಇತರ ರೋಗಿಗಳನ್ನೂ ಅವರಿಗೆ ಪರಿಚಯಿಸುವಿರಿ. ಜೀವನದ ಉದ್ದಕ್ಕೂ ಈ ರೀತಿಯ ನಂಬಿಕೆಗಳು ತುಂಬಿರುವವು. ಮದುವೆಯಾದಾಗ ಗಂಡ, ಹೆಂಡತಿಯನ್ನು ಹೆಂಡತಿ, ಗಂಡನನ್ನು ನಂಬುವರು. ಕೆಲವು ವೇಳೆ ತಾವು ಇಟ್ಟ ನಂಬಿಕೆ ದುಃಖದಲ್ಲಿ ಅಂತ್ಯಗೊಳ್ಳುವದೂ ಉಂಟು. ಆದರೆ ನೀವು ಕರ್ತನ ಮೇಲೆ ಇಡುವ ನಂಬಿಕೆ ಎಂದಿಗೂ ವ್ಯರ್ಥವಾಗಿ ಹೋಗುವದಿಲ್ಲ. ದಾವೀದನು, "ದೇವರೇ, ನಿನ್ನನ್ನು ನಾನು ಮೊರೆಹೊಕ್ಕಿದ್ದೇನೆ" ಎಂದು ಪುನಃ ಪುನಃ ದೇವರಲ್ಲಿ ಇಟ್ಟಿದ್ದ ನಂಬಿಕೆಯನ್ನು ವ್ಯಕ್ತಪಡಿಸುತ್ತಾನೆ (ಕೀರ್ತ 7:1, 11:1).

ಕರ್ತನ ಮೇಲೆ ನಂಬಿಕೆಯಿಡದೆ, ಪ್ರಪಂಚದ ಇತರ ಕಾರ್ಯಗಳ ಮೇಲೆ ನಂಬಿಕೆ ಇಡುವಾಗ, ಅದು ವೇದನೆಯಲ್ಲಿ ಅಂತ್ಯಗೊಳ್ಳುವದು. ಕೆಲವರು ಹಣದ ಮೇಲೆ ನಂಬಿಕೆ ಇಟ್ಟು ಕಷ್ಟಕ್ಕೆ ಒಳಗಾಗುವರು. ಕೆಲವರು ಅಧಿಕಾರದ ಮೇಲೆ ಸ್ವಂತ ಸಾಮರ್ಥ್ಯದ ಮೇಲೆ ನಂಬಿಕೆಯಿಟ್ಟು ದುಃಖಕ್ಕೆ ಒಳಗಾಗುವರು. ದಾವೀದನು ಹೇಳುತ್ತಾನೆ "ಮನುಷ್ಯರಲ್ಲಿ ಭರವಸವಿಡುವದಕ್ಕಿಂತ ಯೆಹೋವನನ್ನು ಆಶ್ರಯಿಸುವದು ಒಳ್ಳೇದು. ಪ್ರಭುಗಳಲ್ಲಿ ಭರವಸವಿಡುವದಕ್ಕಿಂತ ಯೆಹೋವನನ್ನು ಆಶ್ರಯಿಸುವದು ಒಳ್ಳೇದು" ಎಂದು (ಕೀರ್ತ 118:8,9). ನೀತಿವಂತನು ನಂಬಿಕೆಯಿಂದಲೇ ಬದುಕುವನು.

ದೇವಮಕ್ಕಳೇ, ನಂಬಿಕೆಯಲ್ಲಿ ನೀವು ಸಿದ್ಧಿಗೆ ಬರಬೇಕು. ಕರ್ತನನ್ನು ನಂಬುವಾಗ, ನಿಮ್ಮೊಳಗೆ ಧೈರ್ಯಬರುವದು. ಉತ್ಸಾಹ ಬರುವದು. ಸತ್ಯವೇದ ಹೇಳುತ್ತದೆ "ನಾವು ನಮ್ಮ ಧೈರ್ಯವನ್ನು ನಮ್ಮ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ದೃಢವಾಗಿ ಹಿಡಿದುಕೊಂಡವರಾದರೆ, ನಾವೇ ದೇವರ ಮನೆಯವರು (ಇಬ್ರಿ 3:6). ಮೊದಲಿಂದಿರುವ ಭರವಸವನ್ನು ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ ನೀವು ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೀರಿ.

**ನೆನಪಿಗೆ : "ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿದ್ದು ಯೇಸುಕ್ರಿಸ್ತನು ಪ್ರತ್ಯಕ್ಷನಾಗುವಾಗ......ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ" (1ಪೇತ್ರ 1:13).**

| ಮೇ 16 | **ಪೂರ್ಣ ಕೃಪೆ!** | ಬೆಳಿಗ್ಗೆ : 2ಅರಸು 24,25<br>ಸಂಜೆ : ಯೋಹಾನ 5:1-15 |
|---|---|---|

**"ಕರ್ತನಾದ ಯೇಸು ಜೀವಂತನಾಗಿ ಎದ್ದು ಬಂದನೆಂಬದಕ್ಕೆ ಅಪೊಸ್ತಲರು ಬಹು ಬಲವಾಗಿ ಸಾಕ್ಷಿಹೇಳುತ್ತಿದ್ದರು. ಬಹಳ ದಯವು ಅವರೆಲ್ಲರ ಮೇಲೆ ಇತ್ತು" (ಅ.ಕೃ 4:33).**

ನೀವು ಪೂರ್ಣಸಿದ್ಧಿಗೆ ಬರಲು ದೇವರ ಪೂರ್ಣಕೃಪೆಬೇಕು. ಸಾಮಾನ್ಯವಾದ ಕೃಪೆ ಸಾಲದು. ಪೂರ್ಣವಾದ ಕೃಪೆ ಅಗತ್ಯ. ನಾವು ಇಂದು ಉಸಿರಾಡುತ್ತಿರುವದು ಆತನ ಕೃಪೆ, ಸಾಕ್ಷಿ ಕೊಡುವದು ಆತನ ಕೃಪೆ, ಸೇವೆ ಮಾಡುವದು ಆತನ ಕೃಪೆ ಅಂದು ಅಪೊಸ್ತಲರು ಕರ್ತನನ್ನು ಕುರಿತು ಬಲವಾದ ಸಾಕ್ಷಿ ಕೊಟ್ಟು ಕೃಪೆಯ ಮೇಲೆ ಕೃಪೆ ಹೊಂದಿದರು ಕೃಪೆಯಲ್ಲಿ ಸಿದ್ಧಿಗೆ ಬಂದರು.

ಅಪೊ.ಪೌಲನಿಗೆ ಒಂದು ಬಲಹೀನತೆ ಇತ್ತು. ಆ ಬಲಹೀನತೆ ಅವನನ್ನು ಬಹಳವಾಗಿ ವೇದನೆಗೆ ಒಳಪಡಿಸಿತು. ಅದು ಒಂದು ಮುಳ್ಳಾಗಿ ಚುಚ್ಚುತ್ತಿತ್ತು. ಅದರ ಕುರಿತು ಪ್ರಾರ್ಥಿಸಿದಾಗ, ಕರ್ತನು ನೀಡಿದ ಉತ್ತರವೇನೆಂಬುದು ಗೊತ್ತೇ? "ನನ್ನ ಕೃಪೆಯೇ ನಿನಗೆ ಸಾಕು" ಎಂಬುದೇ. ಕೃಪೆ ಇರುವಾಗ ನಿಮ್ಮ ಬಲಹೀನತೆಯಲ್ಲೆಲ್ಲಾ, ದೇವರ ಬಲ ಪೂರ್ಣವಾಗಿ ಕಾಣಲ್ಪಡುವದು. ನೀವು ನಿಮ್ಮ ಬಲಹೀನತೆಯಲ್ಲಿ ಬಲಗೊಳ್ಳುವಿರಿ. ಭಾರತ ದೇಶದಲ್ಲಿ ಪೊನ್ನಮ್ಮ ಎಂಬ ಸನ್ಯಾಸಿನಿ ಇದ್ದರು. ಆಕೆ ತನ್ನ ಯೌವನ ಪ್ರಾಯದಲ್ಲಿಯೇ, ತನ್ನ ಜೀವಿತವನ್ನು ಕರ್ತನಿಗೆ ಒಪ್ಪಿಸಿ ಕೊಟ್ಟು ಸುಮಾರು ಎಪ್ಪತ್ತೈದು ವರುಷಗಳು ದೇವ ಸೇವೆ ಮಾಡಿ ಮಹಿಮೆಯೊಳಗೆ ಪ್ರವೇಶಿಸಿದರು, ಅಂದರೆ ಮರಣ ಹೊಂದಿದರು. ಅವರು ಪದೇ ಪದೇ ಹೇಳುತ್ತಿದ್ದ ಮಾತು ಕೃಪೆ, ಕೃಪೆ! ಎಂಬುದು ಆಕೆ ಕುಳಿತಿರುವಾಗಲು ಕೃಪೆ ನೀಡು ಎಂದು ಪ್ರಾರ್ಥಿಸುತ್ತಲೇ ಇದ್ದರು.

ಯಾರ್‍ಯಾರು, ದೇವರ ಕೃಪೆಯನ್ನು ಆಶ್ರಯಿಸದೆ, ತಮ್ಮ ಸ್ವಂತ ಬಲವನ್ನು ಆಶ್ರಯಿಸುವರೋ, ಅವರು ಸೋತು ಹೋಗುವರು. ಯಾರು ತಮ್ಮನ್ನು ತಗ್ಗಿಸಿಕೊಂಡು, ಕರ್ತನಿಗೆ ಅರ್ಪಿಸಿ ಕೊಳ್ಳುವರೋ, ಅವರು ಕರ್ತನ ಪೂರ್ಣ ಕೃಪೆಯನ್ನು ಪಡೆದು ಕೊಳ್ಳುವರು. ನೀವು ಯಾವಾಗಲೂ ದೇವಕೃಪೆಯನ್ನು ಆಶ್ರಯಿಸಬೇಕು. ದೇವರು ಕೃಪೆಯಲ್ಲಿ ಐಶ್ವರ್ಯವಂತನು ನೀವು ಕೃಪೆಯಲ್ಲಿ ಹೆಚ್ಚಿ ಪೂರ್ಣಸಿದ್ಧಿಗೆ ಬರಬೇಕೆಂದರೆ, ಅದಕ್ಕೆ ಮುಖ್ಯವಾದ ಮೂರು ಮಾರ್ಗಗಳುಂಟು. 1.ಹೊತ್ತಾರೆಯಲ್ಲಿ ಎದ್ದು ಪ್ರಾರ್ಥಿಸಿರಿ. ಯಾಕೆಂದರೆ ದಿನದಿನವೂ ಕರ್ತನ ಕೃಪೆ ಹೊಸದಾಗಿ ಒದಗುತ್ತದೆ (ಪ್ರಲಾಪ 3:23). 2.ನೀವು ಯಾವಾಗಲೂ ಮನುಷ್ಯರ ಮುಂದೆಯೂ ದೇವರ ಮುಂದೆಯೂ ದೀನತೆಯಿಂದ ನಡೆದುಕೊಳ್ಳಿರಿ ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುವನು (ಜ್ಞಾನೋ 3:34). 3.ನೀವು ಎಷ್ಟರ ಮಟ್ಟಿಗೆ ಕರ್ತನನ್ನು ಸ್ತುತಿಸಿ ಮಹಿಮೆ ಪಡಿಸುವಿರೋ ಅಷ್ಟರ ಮಟ್ಟಿಗೆ ಕೃಪೆ ಹೆಚ್ಚುವದು. ಕೃಪೆ ಅನೇಕರ ಸ್ತೋತ್ರಗಳಿಂದ ಹೆಚ್ಚುವದು (2ಕೊರಿ 4:15).

ದೇವಮಕ್ಕಳೇ ಕೃಪೆಯಲ್ಲಿ ಪೂರ್ಣತೆಯನ್ನು ಪಡೆಯಿರಿ.

**ನೆನಪಿಗೆ : "ಉದಯದಲ್ಲಿ ನಿನ್ನ ಕೃಪೆಯಿಂದ ನಮ್ಮನ್ನು ಸಂತೃಪ್ತಿಪಡಿಸು; ಆಗ ಜೀವಮಾನದಲ್ಲೆಲ್ಲಾ ಉಲ್ಲಾಸಿಸಿಹರ್ಷಿಸುವೆನು" (ಕೀರ್ತ 90:14).**

| ಮೇ 17 | **ನೀನು ಅಪೇಕ್ಷಿಸಿದರೆ!** | ಬೆಳಗ್ಗೆ : 1ಪೂ.ವೃ 1,2,3<br>ಸಂಜೆ : ಯೋಹಾನ 5:16-47 |
|---|---|---|

**"ನೀನು ಸಂಪೂರ್ಣನಾಗಬೇಕೆಂದಿದ್ದರೆ ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು ಪರಲೋಕದಲ್ಲಿ ನಿನಗೆ ಸಂಪತ್ತಿರುವದು" (ಮತ್ತಾ 19:21).**

ಯೇಸುಕ್ರಿಸ್ತನ ಬಳಿ ಒಬ್ಬ ಐಶ್ವರ್ಯವಂತನು ಬಂದು "ಬೋಧಕನೇ, ನಾನು ನಿತ್ಯಜೀವವನ್ನು ಪಡೆಯಬೇಕಾದರೆ ಯಾವ ಒಳ್ಳೆಯ ಕಾರ್ಯವನ್ನು ಮಾಡಬೇಕು? ಎಂದು ಕೇಳಿದನು ಅದಕ್ಕೆ ಯೇಸು, ಎರಡು ನಿಬಂಧನೆಗಳನ್ನು ಅವನ ಮುಂದೆ ಇಟ್ಟನು. ಮೊದಲನೆಯದು, "ನೀನು ನಿತ್ಯಜೀವದಲ್ಲಿ ಸೇರಬೇಕೆಂದು ಅಪೇಕ್ಷಿಸುವಿಯಾದರೆ ದೇವರಾಜ್ಞೆಗಳಿಗೆ ಸರಿಯಾಗಿ ನಡೆದುಕೋ ಅಂದನು. ಎರಡನೆಯದಾಗಿ ನೀನು ಸಂಪೂರ್ಣನಾಗಬೇಕೆಂದಿದ್ದರೆ, ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು ಪರಲೋಕದಲ್ಲಿ ನಿನಗೆ ಸಂಪತ್ತಿರುವದು ನೀನು ಬಂದು ನನ್ನನ್ನು ಹಿಂಬಾಲಿಸು.

ಸಂಪೂರ್ಣನಾಗಿರುವದಕ್ಕೆ ಕರ್ತನು ಹೇಳಿದ ನಿಬಂಧನೆಗಳು ಐಶ್ವರ್ಯವಂತನನ್ನು ದಿಗ್ಭ್ರಮೆಗೊಳಿಸಿತು. ಅವನ ಆಸ್ತಿ ಸಂಪತ್ತು, ಅದಕ್ಕೆ ತಡೆಯಾಗಿತ್ತು. ಇದರಿಂದ ಅವನು ದುಃಖದಿಂದ ಹೊರಟು ಹೋದನು. ಅದರಂತೆಯೇ ಪರಲೋಕ ರಾಜ್ಯದ ಕುರಿತಾಗಿ ಎರಡು ರಹಸ್ಯಗಳಿರುವವು. ಒಂದು ಪರಲೋಕ ರಾಜ್ಯವನ್ನು ಕಾಣುವದು ಮತ್ತೊಂದು, ಪರಲೋಕ ರಾಜ್ಯದೊಳಗೆ ಪ್ರವೇಶಿಸುವದು. ಕೆಲವರು ಕಾಣುವ ಅನುಭವ ಮಾತ್ರವೇ ಸಾಕು ಎಂದು. ರಕ್ಷಣೆಯ ಅನುಭವದೊಂದಿಗೆ ನಿಂತು ಬಿಡುವರು. ಆದರೆ ಕೆಲವರು ಪರಲೋಕ ರಾಜ್ಯವನ್ನು ಪ್ರವೇಶಿಸಿ ನೀರಿನಿಂದಲೂ, ಆತ್ಮನಿಂದಲೂ ಹುಟ್ಟುವರು (ಯೋಹಾ 3:5). ಪರಲೋಕದಲ್ಲಿರುವ ತಂದೆಯ ಚಿತ್ತದಂತೆ ನಡೆಯುವರು (ಮತ್ತಾ 7:21). ಫರಿಸಾಯರು, ಸದ್ದುಕಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕ ರಾಜ್ಯದಲ್ಲಿ ಸೇರಲಾರಿರಿ (ಮತ್ತಾ 5:20) ಎಂದು ಕರ್ತನು ಹೇಳಿರುವನು.

ಅನೇಕರು ಭೂಮಿಯಲ್ಲಿ ಐಶ್ವರ್ಯವಂತರಾಗಿ ಬಾಳಬೇಕು, ಸುಖ ಭೋಗಗಳನ್ನು ಅನುಭವಿಸಬೇಕೆಂದಲ್ಲಾ ಬಯಸುವರೇ ಹೊರತು ಪರಲೋಕ ರಾಜ್ಯಕ್ಕೆ ಬಾಧ್ಯರಾಗಿರಬೇಕೆಂದು ಅಪೇಕ್ಷಿಸುವದಿಲ್ಲ. ಅದಕ್ಕಾಗಿ ತ್ಯಾಗ ಮಾಡಬೇಕೆಂದಾಗ ಆ ಐಶ್ವರ್ಯನಂತೆ, ದುಃಖದಿಂದ ಹಿಂತಿರುಗುವರು ಆ ಐಶ್ವರ್ಯವಂತನಲ್ಲಿದ್ದ ಕೊರತೆ ಅಂದರೆ, ಆವನಲ್ಲಿದ್ದ ಅಧಿಕವಾದ ಹಣದಾಶೆ, ಅವನು ಪರಲೋಕದಲ್ಲಿ ಎಲ್ಲಿ ನಿಲ್ಲುವನು?

ದೇವಮಕ್ಕಳೇ, ನಿಮ್ಮ ಬಯಕೆ ಯಾರ ಮೇಲಿದೆ? ಕ್ರಿಸ್ತನ ಮೇಲಾ? ಅಥವಾ ಐಶ್ವರ್ಯದ ಮೇಲಾ? ನೀವು ಕರ್ತನ ಮೇಲೆ ಭರವಸವಿಡದೆ. ಪ್ರಪಂಚದ ಹಿಂದೆ ಹೋದರೆ ನಿಮ್ಮ ಆತ್ಮವನ್ನು ನೀವೇ ನಷ್ಟಪಡಿಸಿಕೊಳ್ಳುತ್ತೀರಿ. ನಿತ್ಯ ಜೀವವನ್ನು ಕೊಡುವಾತನನ್ನು ಹಿಂಬಾಲಿಸಿದರೆ ಈ ಲೋಕದ ಆಶೀರ್ವಾದಗಳಿಂದಲೂ ಪರಲೋಕದ ಆಶೀರ್ವಾದಗಳಿಂದಲೂ ನಿಮ್ಮನ್ನು ಆಶೀರ್ವದಿಸುವನು.

**ನೆನಪಿಗೆ : "ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ, ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ" (1ತಿಮೊ 6:10).**

## ಪೂರ್ಣ ಮಹಿಮೆ!

ಬೆಳಿಗ್ಗೆ : 1ಪೂ.ವೃ 4,5,6
ಸಂಜೆ : ಯೋಹಾನ 6:1-21

**"ಅಂತಃಪುರದಲ್ಲಿ ರಾಜಕುಮಾರಿಯು ಎಷ್ಟೋ ವೈಭವದಿಂದಿದ್ದಾಳೆ ಆಕೆಯು ಜರತಾರಿಯ ವಸ್ತ್ರವನ್ನು ಧರಿಸಿಕೊಂಡಿದ್ದಾಳೆ" (ಕೀರ್ತ 45:13).**

45 ನೇ ಕೀರ್ತನೆ, ಒಂದು ವಿಶೇಷವಾದ ಕೀರ್ತನೆ. ಅದು ಕ್ರಿಸ್ತನನ್ನು ಕುರಿತೂ, ಆತನ ಮದುವಣಗಿತ್ತಿ ಸಭೆಯ ಕುರಿತೂ ಹೇಳಿರುವ ಪ್ರವಾದನಾ ಕೀರ್ತನೆ. ಇದರಲ್ಲಿ ಕ್ರಿಸ್ತನನ್ನೂ, ಮದುವಣಗಿತ್ತಿಯನ್ನೂ ಪೂರ್ಣ ಮಹಿಮೆಯುಳ್ಳವರಾಗಿ ಕಾಣುತ್ತೇವೆ. ಆತನು ಬರುವಾಗ ಮಧುವಣಗಿತ್ತಿಯೆಂಬ ಸಭೆ ಯಾವ ರೀತಿ ಸಿದ್ಧವಾಗಿರಬೇಕು ಎಂಬುದನ್ನು ಈ ಕೀರ್ತನೆಯಲ್ಲಿ ಬರೆಯಲ್ಪಟ್ಟಿದೆ.

ಕ್ರಿಸ್ತನು ತನ್ನ ಆಂತರಿಕ ಜೀವಿತದಲ್ಲೂ, ಬಹಿರಂಗ ಜೀವಿತದಲ್ಲೂ ಮಹಿಮೆಯಿಂದ ಕೂಡಿದವನಾಗಿದ್ದನು. ರೂಪಾಂತರ ಬೆಟ್ಟದಲ್ಲಿ ಆತನು ಪ್ರಾರ್ಥಿಸಿದಾಗ, ಪರಲೋಕದ ಮಹಿಮೆ ಆತನ ಮೇಲೆ ಇಳಿಯಿತು. ಆತನ ಮುಖ ಸೂರ್ಯನಂತೆ ಪ್ರಕಾಶಿಸಿತು. ಆತನ ಎರಡನೇ ಬರೋಣದಲ್ಲಿ, ತಂದೆ ದೇವರ ಮಹಿಮೆಯನ್ನು ಹೊಂದಿದವನಾಗಿ ಬರುವನು. ದೇವದೂತರೊಂದಿಗೆ ಬರುವನು. ಆ ಮಹಿಮೆಯ ಪ್ರಕಾಶ ಎಷ್ಟೋ ದೊಡ್ಡದಾಗಿರುವದು.

ಕ್ರಿಸ್ತನನ್ನು ಮಹಿಮೆಯ ಅರಸನಾಗಿ ಸಂಧಿಸಲಿರುವ ಮದುವಣಗಿತ್ತಿಯಾದ ಸಭೆ, ಮಹಿಮೆಯಿಂದ ಕೂಡಿದ್ದಾಗಿರಬೇಕಲ್ಲವೇ! ರಾಜಕುಮಾರಿ ಆಂತರ್ಯದಲ್ಲಿ ಎಷ್ಟೋ ಮಹಿಮೆಯಿಂದ ಕೂಡಿದವಳು. ಅವಳ ವಸ್ತ್ರ ಜರತಾರಿಯದು (ಕೀರ್ತ 45:13). ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಪಡಿಸಿಕೊಂಡಿದ್ದಾಳೆ (ಪ್ರಕ 19:7) ಎಂದು ದೇವರ ವಾಕ್ಯ ಹೇಳುತ್ತದೆ. ಹೌದು, ಕರ್ತನು ತನ್ನ ಬರೋಣದಲ್ಲಿ ಮಹಿಮೆಯಿಂದ ಕೂಡಿದ ಸಭೆಯನ್ನು ಎದುರು ನೋಡುವನು. ನಿಮ್ಮ ಆತ್ಮದಲ್ಲಿ ಕೆಲವು ಅಶುದ್ಧತೆಗಳು ಸೇರಿಕೊಂಡಿರಬಹುದು. ಕೆಲವು ಕೊರತೆಗಳಿರಬಹುದು. ನಿಮ್ಮ ಆಂತರ್ಯ ಪೂರ್ಣ ಮಹಿಮೆಯನ್ನು ಅಪೇಕ್ಷಿಸಲಿ ದಾವೀದನು "ಯೆಹೋವನೇ, ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ ನಿನ್ನ ಪ್ರಭಾವ ಸ್ಥಾನವು ನನಗೆ ಇಷ್ಟ" ಎಂದು ಹೇಳುತ್ತಾನೆ (ಕೀರ್ತ 26:8).

ದೇವಮಕ್ಕಳೇ, ನೀವು ಪೂರ್ಣ ಮಹಿಮೆಯಿಂದ ಕೂಡಿದ ಮದುವಣಗಿತ್ತಿಯಾಗಿರಲು ಕರೆಯಲ್ಪಟ್ಟವರಾಗಿರುವಿರಿ. ನೀವು ಪೂರ್ಣಮಹಿಮೆಯನ್ನು ಅಪೇಕ್ಷಿಸಿ ಪರಿಶುದ್ಧತೆಯೊಂದಿಗೆ ಮುಂದೆ ಸಾಗಿರಿ. ದೇವ ಮಹಿಮೆಯಲ್ಲೂ ದೇವ ಸಾರೂಪ್ಯದಲ್ಲೂ ಅನುದಿನವೂ ಸಿದ್ಧಿಗೆ ಬರುವಂತೆ ದಾಹಗೊಂಡವರಾಗಿರ್ರಿ. ಹೊಸ ಯೆರೂಸಲೇಮನ್ನು ಕಾಣುವಂತೆ ನಿಮ್ಮ ಕಣ್ಣುಗಳು ಬಯಸಲಿ. ಯಾಕೆಂದರೆ ನಿಮ್ಮ ವಾಸಸ್ಥಳವೋ ಪರಲೋಕದಲ್ಲಿರುವದು.

**ನೆನಪಿಗೆ : "ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸಮಾಡುತ್ತಾ, ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನಮಾಡುವದಕ್ಕೂ ನನಗೆ ಅಪ್ಪಣೆ ಆಗಬೇಕೆಂದು ಎದುರುನೋಡುತ್ತೇನೆ" (ಕೀರ್ತ 27:4).**

## ಸುವಾರ್ತೆಯಲ್ಲಿ ಪೂರ್ಣತೆ!

ಬೆಳಿಗ್ಗೆ : 1ಪೂ.ವೃ 7,8,9
ಸಂಜೆ : ಯೋಹಾನ 6:22-40

**"ನಿಮ್ಮ ಬಳಿಗೆ ಬರುವಾಗ ಕ್ರಿಸ್ತನಿಂದಾಗುವ...ತರುವೆನೆಂದು ಬಲ್ಲೆನು" (ರೋಮಾ 15:29).**

ಸುವಾರ್ತೆಯ ಮೂಲಕ ನಾವು ದೊಡ್ಡ ಆಶೀರ್ವಾದಗಳನ್ನು ಅನುಭವಿಸುವೆವು. ಅವು ಸಂಪೂರ್ಣವಾದ ಆಶೀರ್ವಾದಗಳು ಅವು ನಿಮ್ಮನ್ನು ಕ್ರಿಸ್ತನಲ್ಲಿ ಸಿದ್ಧಿಗೆ ತರುವದು. ನೀವು ಪವಿತ್ರಾತ್ಮನೆಂಬ ಅಗ್ನಿಯಿಂದ ತುಂಬಿರ ಬೇಕಾದರೆ ಆದಷ್ಟು ದೇವರ ಸುವಾರ್ತೆಯನ್ನು ಸಾರಿರಿ. ಆತನು ಮಾಡಿದ ಉಪಕಾರಗಳನ್ನು ಸಾಕ್ಷಿಯಾಗಿ ಹೇಳಿರಿ. ನೀವು ಸಾರುವ ಸುವಾರ್ತೆ ಚಿಕ್ಕದಾದರೂ ದೊಡ್ಡದಾದರೂ ನಿಮ್ಮೊಳಗೆ ಆಶೀರ್ವಾದವನ್ನು ಹೆಚ್ಚಿಸುತ್ತದೆ.

ಯೇಸುಕ್ರಿಸ್ತನು ಹುಟ್ಟಿದಾಗ, ದೇವದೂತನು ಆ ಶುಭಸಮಾಚಾರವನ್ನು ಮೊಟ್ಟಮೊದಲು ಕುರುಬರಿಗೆ ತಿಳಿಸಿದನು ಆದರೂ ಅದು ಕುರುಬರಿಗೆ ಮಾತ್ರವಲ್ಲ, ಪ್ರಪಂಚದಲ್ಲಿ ಹುಟ್ಟಿದವರೆಲ್ಲರಿಗೂ ಸಂಬಂಧಿಸಿದ. ಶುಭಸಮಾಚಾರವಾಗಿದೆ. "ಕೇಳಿರಿ ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುವೆನು" ಎಂದು ಹೇಳಿದನು (ಲೂಕ 2:10). ಈ ಶುಭಸಮಾಚಾರವಾದ ಸುವಾರ್ತೆಯನ್ನು ಸಾರುವವರೂ, ಅದನ್ನು ಕೇಳಿ ಅದರಂತೆ ನಡೆಯುವವರು ಭಾಗ್ಯವಂತರು. "ಪರ್ವತಗಳ ಮೇಲೆ ತ್ವರೆಪಡುತ್ತಾ, ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ! ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ" ನಿನ್ನ ದೇವರು ರಾಜ್ಯ ಭಾರವನ್ನು ವಹಿಸಿದ್ದಾನೆ. ಎಂದು ಚೀಯೋನಿಗೆ ತಿಳಿಸುವವನಾಗಿದ್ದಾನೆ" (ಯೆಶಾ 52:7) ಎಂದು ಪ್ರವಾದಿಯಾದ ಯೆಶಾಯನು ಹೇಳುತ್ತಾನೆ. ಇಲ್ಲಿ ಸಂಪೂರ್ಣ ಸುವಾರ್ತೆಯಾಗಿ ನಾಲ್ಕುಕಾರ್ಯಗಳನ್ನು ಸೂಚಿಸಿರುವದು. 1.ಸಮಾಧಾನವನ್ನು ಸಾರುವದು 2.ಸತ್ಕ್ರಿಯೆಗಳನ್ನು ಸುವಾರ್ತೆಯಾಗಿ ತಿಳಿಸುವದು 3.ರಕ್ಷಣೆಯನ್ನು ಪ್ರಸಿದ್ಧಪಡಿಸುವದು 4.ದೇವರು ರಾಜ್ಯಭಾರ ಮಾಡುವನು ಎಂದು ಚೀಯೋನಿಗೆ ಹೇಳವದು ಈ ನಾಲ್ಕು ಪ್ರತಿಯೊಬ್ಬ ವಿಶ್ವಾಸಿಯ ಮೇಲೆ ಬಿದ್ದ ಭಾರವಾದ ಕರ್ತವ್ಯವಾಗಿದೆ.

ದೇವಮಕ್ಕಳೇ, ಸಂಪೂರ್ಣವಾದ ಸುವಾರ್ತೆಯು, ನೀವು ಎಲ್ಲದರಲ್ಲಿಯೂ ಬಾಳಿ ಸುಖವಾಗಿರುವಂತೆ, ನಿಮ್ಮನ್ನು ನಡಿಸುವದು. ಆ ಸುವಾರ್ತೆ ಯೇಸುಕ್ರಿಸ್ತನೇ ಆಗಿರುವನು. ಆತನಲ್ಲಿದ್ದ ಸಮಾಧಾನ ಸತ್ಕಾರ್ಯಗಳು, ರಕ್ಷಣೆ, ದೈವೀಕ ವಿಶ್ವಾಸ ಎಂಬವುಗಳು ನಿಮ್ಮೊಳಗೆ ಬರುವದು, ನಿಮ್ಮ ಆಂತರ್ಯದಲ್ಲೂ, ಜೀವಿತದಲ್ಲೂ ಕ್ರಿಸ್ತನಿಗೆ ಪೂರ್ಣವಾಗಿ ಸ್ಥಳಕೊಡುವಾಗ, ಆತನು ಸಕಲ ಸಂಪೂರ್ಣತೆಯೊಳಗೆ ನಿಮ್ಮನ್ನು ನಡೆಸುವನು, ಸಕಲ ಆಶೀರ್ವಾದಗಳನ್ನೂ ನಿಮಗೆ ಅನುಗ್ರಹಿಸುವನು ಆತನು ಜೀವದಾಯಕನೂ, ಮಹಾಮಹಿಮನೂ ಆಗಿರುವನು.

**ನೆನಪಿಗೆ : "ನಂಬಿಗಸ್ತನು ಆಶೀರ್ವಾದಪೂರ್ಣನಾಗುವನು; ಧನವಂತನಾಗಲು ಆತುರ ಪಡುವವನು ದಂಡನೆಯನ್ನು ಹೊಂದದಿರನು" (ಜ್ಞಾನೋ 28:20).**

## ಜ್ಞಾನದಲ್ಲಿ ಸಂಪೂರ್ಣತೆ!

ಬೆಳಿಗ್ಗೆ : 1ಪೂ.ವೃ 10,11,12
ಸಂಜೆ : ಯೋಹಾನ 6:41-71

**"ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ, ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರೆಯುವದು" (ಯಾಕೋ 1:5).**

ಪ್ರಾಪಂಚಿಕವಾದ ವಿದ್ಯೆ ಕಲಿಯಲು ನಮಗೆ ಬುದ್ಧಿ ಅಥವಾ ಅರಿವು ಬೇಕು. ಆ ಬುದ್ಧಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಜ್ಞಾನ ಬೇಕು. ಬುದ್ಧಿ ಎಂಬದು ನಾವು ಶೇಖರಿಸುವದು, ಜ್ಞಾನ ಎಂಬದು ಶೇಖರಿಸಿದವುಗಳನ್ನು ತಕ್ಕ ಸಮಯದಲ್ಲಿ ಉತ್ತಮವಾದ ರೀತಿಯಲ್ಲಿ ಉಪಯೋಗಪಡಿಸುವದಾಗಿದೆ.

ಈ ಜ್ಞಾನವನ್ನು ನೀಡುವವನು ಯೇಸುಕ್ರಿಸ್ತನು "ಆತನಲ್ಲಿಯೇ, ಜ್ಞಾನವಿದ್ಯಾ ಸಂಬಂಧವಾದ ನಿಕ್ಷೇಪಗಳೆಲ್ಲಾ ಅಡಗಿರುವದು" (ಕೊಲೊ 2:3). ಈ ಜ್ಞಾನವನ್ನು ಆತನು ತನ್ನ ಮಕ್ಕಳಿಗೆ, ಪ್ರೀತಿಯಿಂದ ಕೊಡುವನು. ಸೊಲೊಮೋನನು ಚಿಕ್ಕ ಪ್ರಾಯದಲ್ಲೇ ಅರಸನಾದಾಗ, ಕರ್ತನ ಬಳಿ, "ದೇಶವನ್ನು ಆಳುವ ಜ್ಞಾನ ಬೇಕೆಂದು " ಕೇಳಿದನು. ಆ ಜ್ಞಾನ ದೆಸೆಯಿಂದ ದೇಶದಲ್ಲಿ ಸಂತೋಷ, ಸಮಾಧಾನ ತುಂಬಿತ್ತು.

ಚಿಕ್ಕ ಚಿಕ್ಕ ಕಾರ್ಯಗಳನ್ನು ಮಾಡಬೇಕಾದರೂ, ನಿಮಗೆ ಜ್ಞಾನ ಬೇಕು. ಕೆಲವರು ಜ್ಞಾನಹೀನರಾಗಿ ಮಾತಾಡಿ ಬಿಡುವರು. ಇದರ ನಿಮಿತ್ತ ಮನಸ್ಸುಗಳು ನೊಂದು, ಅನೇಕ ವೇಳೆಗಳಲ್ಲಿ ಕುಟುಂಬಗಳು ಒಡೆದು ಹೋಗುವವು. ನಂತರ ನಾನು ಹೀಗೆ ಮಾತಾಡಬಾರದಾಗಿತ್ತು ಹೀಗೆ ಮಾಡಬಾರದಾಗಿತ್ತು ಎಂದು ನೊಂದುಕೊಳ್ಳುವರು. ಮೊದಲೇ ದೇವರ ಬಳಿ ಜ್ಞಾನವನ್ನು ಕೇಳಿದರೆ, ಆತನು ಸಾಕಷ್ಟು ಜ್ಞಾನವನ್ನು ಕೊಡಲು ಶಕ್ತನಾಗಿರುವನು. ಆತನು ಜ್ಞಾನದ ಬುಗ್ಗೆಯಲ್ಲವೇ! ಕ್ರಿಸ್ತನಲ್ಲಿದ್ದ ಜ್ಞಾನದ ಕುರಿತು "ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನಾ ಪರಾಕ್ರಮಗಳನ್ನು ಹುಟ್ಟಿಸುವ ತಿಳುವಳಿಕೆಯನ್ನೂ, ಯೆಹೋವನ ಭಯವನ್ನೂ ಉಂಟುಮಾಡುವ ಆತ್ಮ ಅಂತೂ ಯೆಹೋವನ ಆತ್ಮವೇ ನೆಲೆಗೊಂಡಿರುವದು" ಎಂದು ಸುಂದರವಾಗಿ ವಿವರಿಸಿ ಹೇಳಿರುವನು (ಯೆಶಾ 11:2). ಆ ಅನಂತ ಜ್ಞಾನದಲ್ಲಿರುವ ಒಂದು ಭಾಗವಾಗಿ ಬುದ್ಧಿಯನ್ನು ಜ್ಞಾನವನ್ನು ಬೋಧಿಸುವ ವಾಕ್ಯಗಳ ಮೂಲಕ ತನ್ನ ಮಕ್ಕಳಿಗೆ ತಿಳಿಯಪಡಿಸುತ್ತಾನೆ. ಈ ಎರಡು ವರಗಳು ಆತ್ಮನ ಕಣ್ಣುಗಳಿದ್ದಂತೆ. ಪವಿತ್ರಾತ್ಮನ ಮೂಲಕ ನೀವು ಕೂಡ ಈ ವರಗಳನ್ನು ಪಡೆದು ಕರ್ತನ ನಾಮವನ್ನು ಮಹಿಮೆಯಾಗಿ ಉಪಯೋಗಿಸಬಹುದು.

ದೇವಮಕ್ಕಳೇ, ಆತ್ಮೀಕ ಕಾರ್ಯಗಳನ್ನು ಅರಿತುಕೊಳ್ಳಲು ನಿಮಗೆ ದೈವೀಕ ಜ್ಞಾನ ಬಹಳ ಅವಶ್ಯವಾದದ್ದು. ಪ್ರಪಂಚದ ಜ್ಞಾನವನ್ನು ತಿಳಿದುಕೊಳ್ಳಲು ಅದಕ್ಕಾಗಿ ಕರ್ತನು ಪಂಚೇಂದ್ರಿಯಗಳನ್ನು ನೀಡಿರುವನು. ಆದರೆ ಆತ್ಮೀಕ ಕಾರ್ಯಗಳನ್ನು ಅರಿತುಕೊಳ್ಳಲು ಪರಲೋಕ ಜ್ಞಾನ ಅಗತ್ಯ. ಅದನ್ನು ಪವಿತ್ರಾತ್ಮನು ತಾನೇ ನಿಮಗೆ ಕೃಪೆಯಾಗಿ ನೀಡುವನು. ಇದರ ಮೂಲಕ ಆತ್ಮೀಕ ಕಾರ್ಯಗಳನ್ನು ಪರಲೋಕ ರಹಸ್ಯಗಳನ್ನು ಅರಿಯುವಿರಿ.

**ನೆನಪಿಗೆ : "ನಿತ್ಯ ಜೀವದ ನಿರೀಕ್ಷೆಯನ್ನು ಪಡೆದು ಅದಕ್ಕೆ ಬಾಧ್ಯರಾಗುವಂತೆ ದೇವರು ಆತನ ಮೂಲಕ ಪವಿತ್ರಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು" (ತೀತ 3:6,7).**

ಮೇ 21

## ಪೂರ್ಣ ತೃಪ್ತಿ!

ಬೆಳಗ್ಗೆ : 1ಪೂ.ವೃ 13,14,15
ಸಂಜೆ : ಯೋಹಾನ 7:1-28

**"ನಾನು ಬಳಲಿದವರನ್ನು ತಂಪುಗೊಳಿಸಿ ಕುಂದಿದವರೆಲ್ಲರನ್ನೂ ತೃಪ್ತಿಪಡಿಸುವೆನಷ್ಟೆ" (ಯೆರೆ.31:25).**

ಪ್ರಪಂಚದೆಲ್ಲೆಡೆ, ಬಳಲಿ, ಕುಂದಿಹೋದ ಲಕ್ಷಗಟ್ಟಲೆ ಜನರನ್ನು ಕಾಣಬಹುದು. ಕೆಲವರು ವ್ಯಾಧಿಯ ಸಮಸ್ಯೆಯಿಂದ, ಕೆಲವರು, ಕುಟುಂಬದಲ್ಲಿನ ಸಮಸ್ಯೆಗಳಿಂದ, ಸಾಲದ ಸಮಸ್ಯೆಗಳಿಂದ ಬಳಲಿ ಹೋಗಿರುವರು. ಅಂಥಹ ಪರಿಸ್ಥಿತಿಗಳಲ್ಲಿ ಇದೇ ನಮ್ಮ ಹಣೆಬರಹ ಎಂದು ಸೋತುಹೋಗದೆ, ಕರ್ತನ ಬಳಿಗೆ ನಂಬಿಕೆಯಿಂದ ಬರುವದಾದರೆ ಆತನು ನಿಶ್ಚಯವಾಗಿ, ಸಹಾಯ ಮಾಡುವನು, ನಾನು ಬಳಲಿದವರನ್ನು ತಂಪುಗೊಳಿಸಿ, ಕುಂದಿದವರೆಲ್ಲರನ್ನೂ ತೃಪ್ತಿಪಡಿಸುವೆನು ಎಂಬುದು ಕರ್ತನ ವಾಗ್ದಾನವಾಗಿದೆ.

ಕರ್ತನನ್ನೇ ದೃಷ್ಟಿಸಿದ ದಾವೀದನು ನನ್ನ ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೀ ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ (ಕೀರ್ತ.23:5) ಎಂದು. ಉತ್ಸಾಹದಿಂದ ಹೇಳಿದನು. ಹೌದು ಕರ್ತನು ಸಂಪೂರ್ಣತೆಯಿಂದ ತುಂಬುವಾತನು. "ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆ.1:23) ಎಂದು ಅಪೊ. ಪೌಲನು ಬರೆಯುತ್ತಾನೆ. ಕಾನಾ ಊರಿನ ಮದುವೆಯಲ್ಲಿ ದ್ರಾಕ್ಷಾರಸದ ಕೊರತೆ ಉಂಟಾದಾಗ, ಅ ಕೊರತೆಯನ್ನು ಯೇಸು ನೀಗಿಸಲು ಮಾಡಿದ್ದೇನು? ಖಾಲಿಯಾದ ಆರು ಕಲ್ಲಿನ ಬಾನೆಗಳಲ್ಲಿ ಕಂಠದ ಮಟ್ಟಿಗೆ ನೀರು ತುಂಬಲು ಹೇಳಿದನು. ಆ ನೀರು ದ್ರಾಕ್ಷಾರಸವಾಗಿ ಮಾರ್ಪಟ್ಟಿತು ಕೊರತೆ ನೀಗಿತು (ಯೋಹಾ.2:7). ಹಾಗೆಯೇ ಕರ್ತನು, ನಿಮ್ಮನ್ನೂ ಸಕಲ ವಿಧವಾದ ಆಶೀರ್ವಾದಗಳಿಂದಲೂ ಸಂಪೂರ್ಣ ತೆಯಿಂದಲೂ ತುಂಬುವನು. ಯೇಸು ಪ್ರಸಂಗಿಸುವಂತೆ, ಪೇತ್ರನು ತನ್ನ ದೋಣಿಯನ್ನು ನೀಡಿದನು. ಆ ಸಮಯದಲ್ಲಿ ಪೇತ್ರನು ರಾತ್ರಿಯೆಲ್ಲಾ ಮೀನು ಹಿಡಿಯಲು ಬಲೆ ಹಾಕಿದ್ದರೂ ಒಂದು ಮೀನಾದರೂ ಸಿಕ್ಕಿರಲಿಲ್ಲ. ಅವನು ಬಳಲಿಹೋಗಿ ಕುಂದಿ ಹೋಗಿದ್ದನು. ಆದರೆ ಯೇಸುವಿನ ಮಾತಿನಂತೆ ಸ್ವಲ್ಪ ಮುಂದೆ ಹೋಗಿ ಬಲೆ ಬೀಸಿದಾಗ ದೋಣಿ ಮುಳುಗಿಹೋಗುವಷ್ಟು ಮೀನುಗಳು ಬಲೆಯಲ್ಲಿ ಬಿದ್ದವು. ಕರ್ತನು ಪೂರ್ಣವಾಗಿ ಕೊಡುವಾತನು. ಹಾಗೆಯೇ ಐದು ರೊಟ್ಟಿ ಎರಡು ಮೀನುಗಳನ್ನು ಆತನು ಐದು ಸಾವಿರ ಜನರಿಗೆ ಹಂಚಿದನು.

ದೇವಮಕ್ಕಳೇ, ಇಂದು ನಿಮ್ಮ ಜೀವಿತದಲ್ಲಿನ ಕುಟುಂಬದಲ್ಲಿನ ಸಮಸ್ಯೆಗಳಲ್ಲಿ ಸಿಲುಕಿ ಬಳಲಿ ಹೋಗಿರುವಿರಾ? ಈಗಲೇ ಕರ್ತನ ಬಳಿಗೆ ಬನ್ನಿರಿ. ನಿಶ್ಚಯವಾಗಿ, ಆತನು ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿ, ನಿಮ್ಮನ್ನು ಸಕಲ ಆಶೀರ್ವಾದಗಳಿಂದ ತುಂಬಿಸಿ, ಸಂಪೂರ್ಣತೆಗೆ ನಡೆಸುವನು.

**ನೆನಪಿಗೆ "ಆತನು ತನ್ನ ಜನರನ್ನು ಪ್ರೀತಿಸುತ್ತಾನೆ; [ಯೆಹೋವನೇ] ನಿನ್ನ ಭಕ್ತರೆಲ್ಲರೂ ನಿನ್ನ ಆಶ್ರಯದಲ್ಲಿಯೇ ಇದ್ದಾರೆ" (ಧರ್ಮೋ.33:3).**

ಮೇ 22

# ಪೂರ್ಣವಾದ ಜಯ!

ಬೆಳಿಗ್ಗೆ : 1ಪೂ.ವೃ 16,17,18
ಸಂಜೆ : ಯೋಹಾನ 7:29-53

**"ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ ಕೃಪೆಗೆ ಅಧೀನರಾಗಿದ್ದೀರಷ್ಟೆ" (ರೋಮಾ 6:14).**

ಹಳೆಯ ಒಡಂಬಡಿಕೆಯಲ್ಲಿ ಧರ್ಮಶಾಸ್ತ್ರವು, ಇಸ್ರಾಯೇಲ್ಯರನ್ನು ದಾಸತ್ವಕ್ಕೆ ಒಳಪಡಿಸಿತ್ತು. ಅಲ್ಲಿ ಪಾಪದ ಮೇಲೆ ಜಯ ನೀಡುವ ಮಾರ್ಗವಿಲ್ಲ, ಆದ್ದರಿಂದ ಪ್ರತಿವರ್ಷವೂ ಅವರು ಪಾಪ ನಿವಾರಣೆಗಾಗಿ, ಪದೇ ಪದೇ ಕುರಿಮರಿಗಳನ್ನು ಯಜ್ಞವಾಗಿ ಅರ್ಪಿಸುತ್ತಲೇ ಬಂದರು. ಪೂರ್ಣವಾದ ಪರಿಶುದ್ಧತೆ ಅವರಲ್ಲಿ ಕಂಡು ಬರಲಿಲ್ಲ. ಕುರಿಮರಿಯ ರಕ್ತದಿಂದ ಪಾಪವೂ, ಅಕ್ರಮವೂ ಮುಚ್ಚಲ್ಪಟ್ಟಿತ್ತೇ ಹೊರತು, ಪಾಪವನ್ನು ಜಯಿಸುವ ಕೃಪೆ ಅಲ್ಲಿ ಕಾಣಲ್ಪಡಲಿಲ್ಲ.

ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನು ಒಂದೇ ಸಾರಿ ಯಜ್ಞವಾಗಿ ವಧಿಸಲ್ಪಟ್ಟನು. ಆ ಯಜ್ಞದಿಂದ ಪಾಪ ಕ್ಷಮಾಪಣೆ ಪಡೆದು ಪಾಪದಿಂದ ನೀವು ಬಿಡುಗಡೆ ಹೊಂದಿ, ಜಯಶಾಲಿಗಳಾಗುವಂತೆ, ಪವಿತ್ರಾತ್ಮನ ಬಲ ನಿಮಗೆ ಕೊಡಲ್ಪಟ್ಟಿರುವದು. ಆದ್ದರಿಂದ ನೀವು ಬಿದ್ದು ಬಿದ್ದು ಎದ್ದೇಳುವ ಅನುಭವವಿಲ್ಲದೆ, ಜಯಭರಿತವಾದ ಜೀವಿತವನ್ನು ನಡೆಸಲು ಸಾಧ್ಯವಾಗುವದು. "ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು" (ರೋಮಾ 8:2) ಎಂದು ಅಪೊ.ಪೌಲನು ಬರೆಯುತ್ತಾನೆ.

ಇಂದು ಅನೇಕರು ಜಯಭರಿತವಾದ ಜೀವಿತವನ್ನು ಕುರಿತು ಮಾತಾಡದೆ, ಹಳೆಯ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಇಟ್ಟಿರುವರು. ನಾವು ಮಾಡಬೇಕಾದದ್ದನ್ನು ಮಾಡದೆ ಮಾಡಬಾರದ್ದನ್ನು ಮಾಡುತ್ತಿರುವೆವು. ನಮಗೆ ಸುಖವೇ ಇಲ್ಲ ಎಂದು ಜೀವಿತ ಕಾಲವೆಲ್ಲಾ ಸೋಲನ್ನೇ ಅರಿಕೆ ಮಾಡುತ್ತಿರುವರು. ಹೊಸ ದ್ರಾಕ್ಷಾರಸವಾದ ಪವಿತ್ರಾತ್ಮನ ಬಲ ನಿಮ್ಮ ಹೃದಯದೊಳಗೆ ಪರಿಶುದ್ಧತೆಯನ್ನು ತರುವದು. ಧರ್ಮಶಾಸ್ತ್ರಕ್ಕೂ, ಪವಿತ್ರಾತ್ಮನ ನಿಯಮಕ್ಕೂ, ಎಷ್ಟೊಂದು ದೊಡ್ಡ ವ್ಯತ್ಯಾಸ, ಹೊಸ ಒಡಂಬಡಿಕೆಯ ಕೃಪೆಯ ನಿಯಮ ಪಾಪದಲ್ಲಿ ಬಿದ್ದು ಬಿದ್ದು ಏಳುವ ಅನುಭವವನ್ನಲ್ಲ, ಪಾಪವೇ ತಾಕದಂತೆ ಪರಿಶುದ್ಧವಾದ ಜೀವಿತವನ್ನು ವಾಗ್ದಾನಿಸಿರುವದು.

ದೇವಮಕ್ಕಳೇ, ನೀವು ಕೃಪೆಗೆ ಅಧೀನರಾಗಿರುವದರಿಂದ ಪಾಪವು ನಿಮ್ಮನ್ನು ಜಯಿಸದು (ರೋಮಾ 6:14). ದೇವರಿಂದ ಹುಟ್ಟಿದವನು ಪಾಪಮಾಡನು ದೇವರ ಜೀವವು ಅವನಲ್ಲಿ ನೆಲೆಗೊಂಡಿರುವದು. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು (1ಯೋಹಾ 3:9). ಪ್ರಿಯರೇ, ನೀವು ದೇವರ ಆಲಯವಾಗಿರುವದರಿಂದ ಆತನು ನಿಮ್ಮೊಳಗೆ ವಾಸವಾಗಿರುವುದರಿಂದ ನೀವು ಯಾವಾಗಲೂ ಜಯಶಾಲಿಗಳಾಗಿ ಜೀವಿಸಲು ಸಾಧ್ಯ. ಜಯಕೊಡುವ ದೇವರಿಗೆ ಸ್ತೋತ್ರ.

**ನೆನಪಿಗೆ : "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" (ಗಲಾ 2:20).**

| ಮೇ 23 | ಕ್ರಿಸ್ತನ ಪರಿಪೂರ್ಣತೆ! | ಬೆಳಗ್ಗೆ : 1ಪೂ.ವೃ 19,20,21<br>ಸಂಜೆ : ಯೋಹಾನ 8:1-30 |
|---|---|---|

**"ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ....." (ಎಫೆ 4:12).**

ಕ್ರಿಸ್ತನಲ್ಲಿ ನೀವು ಪೂರ್ಣತೆಯನ್ನು ಪಡೆಯುವಾಗ, ಪೂರ್ಣ ಪುರುಷರಾಗಿ ಮಾರ್ಪಡುವಿರಿ. ನಿಮಗೆ ಮಾದರಿ, ಅಳತೆ ಕೋಲು ಕರ್ತನಾದ ಯೇಸುಕ್ರಿಸ್ತನೇ ಆಗಿರುವನು. ಆತನಲ್ಲಿನ ಪರಿಪೂರ್ಣತೆ ಅಂದರೆ ಏನು? ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು (ಲೂಕ 2:52).

ಮೊದಲನೆಯದಾಗಿ, ಆತನು ಜ್ಞಾನದಲ್ಲಿ ವೃದ್ಧಿಯಾದನು ಯೆಹೋವನ ಭಯವೇ ತಿಳುವಳಿಕೆಗೆ ಮೂಲವು (ಜ್ಞಾನೋ 1:7). ಕರ್ತನ ಭಯವೇ ಜ್ಞಾನವು, ದುಷ್ಟತನವನ್ನು ಬಿಡುವದೇ ವಿವೇಕವು (ಯೋಬ 28:28). ಚಿಕ್ಕಕಾರ್ಯವನ್ನು ನೀವು ಮಾಡಬೇಕಾದರೂ ಜ್ಞಾನವಿವೇಕಗಳು ನಿಮಗೆ ಬೇಕು. ಕರ್ತನು ನಿಮಗೆ ಬೇಕಾದ ಜ್ಞಾನವನ್ನು ವಾಗ್ದಾನ ಮಾಡಿರುವನು.

ಎರಡನೆಯದಾಗಿ, ಕ್ರಿಸ್ತನು ದೇಹ ಬಲದಲ್ಲಿ ಆತ್ಮ ಬಲದಲ್ಲಿ ಬೆಳೆದನು. ಮನುಷ್ಯನ ಮೂಗಿನಲ್ಲಿ ದೇವರು ತನ್ನ ಶ್ವಾಸವನ್ನೂದಿ ಮನುಷ್ಯನನ್ನು ಜೀವಾತ್ಮವನ್ನಾಗಿಸಿದನು. ಮನುಷ್ಯನ ದೇಹ ಆತನ ಆಲಯವಾಗಿರುವದು. ಆದ್ದರಿಂದ ಆಲಯ ಶುದ್ಧವಾಗಿರಬೇಕು. ನೀವು ಎಣ್ಣೆಯ ಮರಗಳ ಸಸಿಗಳಂತೆ ವೃದ್ಧಿಯಾಗಬೇಕೆಂದು ಕರ್ತನು ಬಯಸುವನು. ನೀವು ಆತ್ಮನ ವರಗಳನ್ನು ಪಡೆದುಕೊಳ್ಳುವಾಗ, ಪ್ರಾರ್ಥನಾತ್ಮವನ್ನು ಪಡೆದುಕೊಳ್ಳುವಾಗ, ಸಾಕ್ಷಿ ಕೊಡುವಾಗ, ಅದನ್ನು ಹಂಚಿಕೊಳ್ಳುವಾಗ, ನಿಮ್ಮ ಆತ್ಮೀಕ ಜೀವಿತ ಬೆಳವಣಿಗೆಯನ್ನು ಕಂಡು, ಕರ್ತನು ಬಹಳವಾಗಿ ಸಂತೋಷ ಪಡುವನು.

ಮೂರನೆಯದಾಗಿ, ಕ್ರಿಸ್ತನು ಕೃಪೆಯಲ್ಲಿ ವೃದ್ಧಿಯಾದನು, ಹಾಗೆಯೇ ನೀವು ಕೃಪೆಯಲ್ಲಿ ಪೂರ್ಣತೆಯನ್ನು ಪಡೆಯಬೇಕು. ದೀನರಿಗೆ ಕೃಪೆ ತೋರಿಸುವ ದೇವರು, ನೀವು ದೇವರ ಮುಂದೆಯೂ, ಮನುಷ್ಯರ ಮುಂದೆಯೂ ದೀನಭಾವದಿಂದ ನಡೆದುಕೊಳ್ಳುವಾಗ, ನೀವು ಕೃಪೆಯಲ್ಲಿ ಪೂರ್ಣರಾಗುವಂತೆ, ನಡೆಸುವನು.

ನಾಲ್ಕನೆಯದಾಗಿ, ಕ್ರಿಸ್ತನು ಮನುಷ್ಯನ ದಯೆಯಲ್ಲಿ ವೃದ್ಧಿ ಹೊಂದಿದನು. ಅನೇಕರು ದೇವ ಮಕ್ಕಳಿಗೆ ಮನುಷ್ಯರ ಕೃಪೆ ಯಾಕೆ ಬೇಕು? ಎಂದು ಕೇಳುವರು. ಕ್ರಿಸ್ತನು ಗರ್ಭಧರಿಸಲು ಮರಿಯಳ ಕೃಪೆ, ಜೊತೆಯಾಗಿ ಸೇವೆ ಮಾಡಲು ಶಿಷ್ಯರ ದಯೆ ಆತನಿಗೆ ಬೇಕಿತ್ತು. ಆತನು ದೋಣಿಯಲ್ಲಿ ನಿಂತು ಪ್ರಸಂಗಿಸಲು, ಪೇತ್ರನ ದಯೆ ಬೇಕಿತ್ತು. ಆದ್ದರಿಂದ ಮನುಷ್ಯರ ದಯೆಯನ್ನು ಎಂದಿಗೂ ಅಸಡ್ಡೆ ಮಾಡಬೇಡಿರಿ.

ದೇವಮಕ್ಕಳೇ, ಕ್ರಿಸ್ತನಲ್ಲಿ ಬೆಳೆದು ಪೂರ್ಣರಾಗುವಂತೆ, ಜ್ಞಾನದಲ್ಲೂ, ಆತ್ಮ ದೇಹಗಳ ಬೆಳವಣಿಗೆಯಲ್ಲೂ, ಕೃಪೆಯಲ್ಲಿಯೂ, ಮನುಷ್ಯರ ದಯೆಯಲ್ಲಿಯೂ, ವೃದ್ಧಿಯಾಗಿರಿ. ಆತನಿಗೆ ವಿಧೇಯರಾಗಿದ್ದು ದೋಷವಿಲ್ಲದವರಾಗಿ ನಡೆದುಕೊಳ್ಳಿರಿ.

**ನೆನಪಿಗೆ : "ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು" (ಯಾಕೋ 1:5).**

## ಪೂರ್ಣಚಿತ್ತ!

ಬೆಳಗ್ಗೆ : 1ಪೂ.ವೃ 22,23,24
ಸಂಜೆ : ಯೋಹಾನ 8:31-59

**"ನೀವು ಪ್ರವೀಣರಾಗಿಯೂ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು ಕುರಿತು ಪೂರ್ಣ ನಿಶ್ಚಯವುಳ್ಳವರಾಗಿಯೂ ನಿಂತಿರಬೇಕು" (ಕೊಲೊ 4:12).**

ಪೂರ್ಣವಾದ ದೇವ ಚಿತ್ತವೆಂದು ಹೇಳುವಾಗ, ಅಪೂರ್ಣವಾದ ದೇವಚಿತ್ತವೂ ಇರುವದಾ? ಎಂದು ಯೋಚಿಸುವಂತೆ ಮಾಡುವದು. ದೇವರ ಚಿತ್ತವನ್ನು ಪೂರ್ಣವಾಗಿ ಮಾಡದೆ ಅಲ್ಪಸ್ವಲ್ಪವಾಗಿ ಮಾಡುವವರೂ ಇರುವರು, ಇದರಿಂದ ಅವರು ಮುಂದೆ ಕಳವಳಕ್ಕೆ ತೊಂದರೆಗೆ ಈಡಾಗಬೇಕಾಗುವದು.

ಅಬ್ರಹಾಮನಿಗೆ, ಸಾರಳ ಮೂಲಕ, ಸಂತತಿ ಉಂಟಾಗಬೇಕೆಂಬುದು, ದೇವರ ಪೂರ್ಣಚಿತ್ತವಾಗಿತ್ತು. ಆದರೆ ಸಾರಳು, ದೇವರ ಚಿತ್ತ ನೆರವೇರಲು ಕಾದಿರದೆ, ತನ್ನ ಸ್ವಂತ ಆಲೋಚನೆಯಂತೆ ಅಬ್ರಹಾಮನು, ತನ್ನ ದಾಸಿಯಾದ ಹಾಗರಳ ಮೂಲಕ ಸಂತತಿ ಪಡೆಯುವಂತೆ, ಅವನನ್ನು ಒಡಂಬಡಿಸಿದಳು (ಆದಿ 16:2). ಅವಳೇನೋ ದೇವಚಿತ್ತವನ್ನು ಅರಿಯದೆ ಹಾಗೆ ಹೇಳಿದಳೆಂದರೆ, ಅಬ್ರಹಾಮನೂ ಸಹ ಅದು ದೇವರ ಪೂರ್ಣಚಿತ್ತವಾ? ಎಂದು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಇದರಿಂದ ದೇವರಿಂದ ಆರಿಸಲ್ಪಟ್ಟ ಸಂತತಿಗೆ ವಿರೋಧವಾಗಿ ಮಾನುಷ್ಯಿಕ ಚಿತ್ತದ ಸಂತತಿ ಉತ್ಪತ್ತಿಯಾಯಿತು. ಇಷ್ಮಾಯೇಲನು ಜನಿಸಿದನು. ಇದರ ಪ್ರತಿಫಲವಾಗಿ ಇದುವರೆಗೂ ಅರಬ್ಬಿಯರಿಗೂ, ಇಸ್ರಾಯೇಲ್ಯರಿಗೂ ನಡುವೆ ಯುದ್ಧಗಳು ನಡೆಯುತ್ತಲೇ ಇದೆ. ದೇವರ ಚಿತ್ತಕ್ಕೆ ಕಿವಿಗೊಡದೆ ಹೋದರೆ ಮುಂದೆ ಅದು ಬಹಳವಾದ ಸಂಕಷ್ಟಗಳನ್ನು ತರುವದು.

ಸೊದೋಮ್ ಗೊಮೋರ ಪಟ್ಟಣವನ್ನು. ಕರ್ತನು ನಾಶಮಾಡಲು ಹೊರಟಾಗ, ತನ್ನ ಪೂರ್ಣಚಿತ್ತವನ್ನು ಲೋಟನಿಗೆ ತಿಳಿಸಿ ಹಿಂತಿರುಗಿ ನೋಡಬೇಡ, ಈ ಪ್ರದೇಶದೊಳಗೆ ಎಲ್ಲಿಯೂ ನಿಲ್ಲದೆ ಬೆಟ್ಟದ ಸೀಮೆಗೆ ಓಡಿಹೋಗು ಎಂದು ಹೇಳಿದರು (ಆದಿ.19:17). ಆದರೆ ಲೋಟನ ಹೆಂಡತಿ ದೇವಚಿತ್ತದಂತೆ ನಡೆಯದೆ, ಹಿಂದೆ ತಿರುಗಿ ನೋಡಿದ್ದರಿಂದ ಉಪ್ಪಿನ ಕಂಬವಾದಳು. ಹಾಗೆಯೇ ಪ್ರವಾದಿಯಾದ ಬಿಳಾಮನೂ ದೇವಚಿತ್ತವನ್ನು ಪೂರ್ಣವಾಗಿ ಮಾಡಲಿಲ್ಲ. ಇಸ್ರಾಯೇಲ್ಯರನ್ನು ಆಶೀರ್ವದಿಸುವದೇ ದೇವರ ಚಿತ್ತವೆಂದು ತಿಳಿದಿದ್ದರೂ, ಇಸ್ರಾಯೇಲ್ಯರನ್ನು ಪಾಪಕ್ಕೇ ಪ್ರೇರಿಸಲು ರಹಸ್ಯವಾದ ಮಾರ್ಗಗಳನ್ನು ಮೋವಾಬ್ಯರ ಅರಸನಾದ ಬಾಲಾಕನಿಗೆ ತಿಳಿಸಿದನು. ಇದರಿಂದ ಕರ್ತನ ಕೋಪ ಬಿಳಾಮನ ಮೇಲೆ ಬಂತು.

ದೇವಮಕ್ಕಳೇ, ಅನೇಕ ವೇಳೆ ಕರ್ತನ ಬಳಿ ಅದು ಬೇಕು, ಇದು ಬೇಕು ಎಂದು ಹಟಹಿಡಿಯುವಾಗ ಕರ್ತನು ಬೇರೆಮಾರ್ಗವಿಲ್ಲದೆ ಅನುಮತಿಸಬಹುದು. ಆದರೆ ಅದು ಪೂರ್ಣಸಂತೋಷವೂ ಸಮಾಧಾನವೂ ಕೂಡಿದ್ದಾಗಿರುವದಿಲ್ಲ ಪೂರ್ಣವಾದ ಆಶೀರ್ವಾದವನ್ನು ನೀಡುವುದಿಲ್ಲ. ಆದ್ದರಿಂದ ನೀವು ಬೇಡಿಕೊಂಡಿದ್ದು ಆತನು ಕೊಡುವವರೆಗೂ ತಾಳ್ಮೆಯಿಂದ ಕಾದಿರ್ರಿ ಕರ್ತನಿಂದ ಬಂದ ಆಶೀರ್ವಾದವು ಭಾಗ್ಯದಾಯಕವಾದದ್ದು ಅದು ವ್ಯಸನವನ್ನು ಸೇರಿಸದು.

**ನೆನಪಿಗೆ : "ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನೋ ಅವನ ಪ್ರಾರ್ಥನೆಯನ್ನು ಕೇಳುತ್ತಾನೆಂದು ಬಲ್ಲೆವು" (ಯೋಹಾ.9:31).**

## ಪೂರ್ಣಸತ್ಯ!

ಬೆಳಿಗ್ಗೆ : 1ಪೂ.ವೃ 25,26,27
ಸಂಜೆ : ಯೋಹಾನ 9:1–23

**"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾ.16:13)**

ನೀವು ಪೂರ್ಣತೆಯೆಡೆಗೆ, ಸಂತೋಷದಿಂದ ಮುಂದೆ ಮುಂದೆ ಸಾಗಬೇಕೆಂದರೆ, ಸಕಲ ವಿಷಯದಲ್ಲಿಯೂ ಸತ್ಯದಲ್ಲಿ ನಡೆಯಬೇಕು. ಸತ್ಯದ ಆತ್ಮನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. "ನಿರ್ಜೀವ ಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟು ಬಿಟ್ಟು, ದೇವರ ಮೇಲೆ ನಂಬಿಕೆ ಇಡುವದೂ, ಸ್ನಾನ ಹಸ್ತಾರ್ಪಣಗಳ ವಿಷಯವಾದ ಉಪದೇಶ, ಸತ್ತವರಿಗೆ ಪುನರುತ್ಥಾನವೂ, ನಿತ್ಯವಾದ ನ್ಯಾಯತೀರ್ಪೂ ಉಂಟೆಂಬದು ಇವುಗಳನ್ನು ಪದೇಪದೇ ಅಸ್ತಿವಾರವಾಗಿ ಹಾಕದೆ ಕ್ರಿಸ್ತನ ವಿಷಯವಾದ ಪ್ರಥಮ ಬೋಧನೆಯನ್ನು ಕುರಿತು ಇನ್ನೂ ಮಾತಾಡದೆ, ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗಬೇಕೆಂದು ಅಪೊ.ಪೌಲನು ಬರೆಯುತ್ತಾನೆ (ಇಬ್ರಿ 6:1–3).

ಅಸ್ತಿವಾರವಿಲ್ಲದೆ ಒಂದು ಕಟ್ಟಡವನ್ನು ಮೇಲೆ ಮೇಲಕ್ಕೆ ಕಟ್ಟಿ ಎಬ್ಬಿಸಲು ಸಾಧ್ಯವಿಲ್ಲ. ಅಸ್ತಿವಾರ ದೃಢವಾಗಿ ಇರುವದಾದರೆ, ಕಟ್ಟಡವು ಭದ್ರವಾಗಿರುವದು, ಪವಿತ್ರಾತ್ಮನು ಸಕಲ ವಿಷಯದಲ್ಲೂ, ನಿಮ್ಮನ್ನು ನಡೆಸಿ, ನೀವು ಕರ್ತನಿಗೆಂದು ಒಂದು ಕಟ್ಟಡವಾಗಿ ನಿಲ್ಲಬೇಕೆಂದು, ನಿಮ್ಮನ್ನು ಸಿದ್ಧಪಡಿಸುತ್ತಿರುವನು. ಇದು ನಿಮಗೆ ಸಿಕ್ಕಿರುವ ಒಂದು ದೊಡ್ಡ ಭಾಗ್ಯವೇ ಸರಿ. ದೇವರಾತ್ಮನಿಗೆ ಸತ್ಯದ ಆತ್ಮನೆಂದು ಹೆಸರು. ಆತನು ನಿಮ್ಮನ್ನು ಸಕಲ ಸತ್ಯದೊಳಗೆ ನಡೆಸುವನು. ಇಂದು ನೂರಾರು ಸಭೆಗಳುಂಟು, ಒಂದೊಂದರಲ್ಲೂ ಒಂದೊಂದು ರೀತಿಯ ಬೋಧನೆಗಳುಂಟು. ಕೆಲವರು ಒಂದು ಸತ್ಯವನ್ನು ದೊಡ್ಡದೆಂದು ಮಾಡಿ ಉಳಿದದ್ದನ್ನು ಮರೆಮಾಡುವರು. ಕೆಲವರು ದೇವರಾತ್ಮನಿಂದ ನಡೆಸಲ್ಪಡದೆ, ಹಳೆಯಕಂದಾಚಾರಗಳಿಂದಲೂ ಪಾರಂಪರ್ಯಗಳಿಂದಲೂ, ನಡೆಸಲ್ಪಡುವರು. ಕೆಲವರು ತಮ್ಮ ಅನುಕೂಲಕ್ಕೆ ತಕ್ಕಂತೆ ಬೋಧಿಸುವರು ಆದರೂ, ದೇವರು ಸತ್ಯದ ಆತ್ಮವನ್ನು ನಮಗೆ ಕೊಟ್ಟಿರುವನು. ಆತನು ನಮ್ಮನ್ನು ಸತ್ಯದೆಡೆಗೇ ನಡೆಸುವನು.

ದೇವಮಕ್ಕಳೇ, ಪವಿತ್ರಾತ್ಮನು, ನಿಮಗೆ ಮಾರ್ಗತೋರಿಸುವ ಪಾರಿವಾಳವಾಗಿ ಮುಂದೆ ಸಾಗುವನು, ಮಾರ್ಗಕಾಣದೆ, ದಿಕ್ಕೆಟ್ಟವರಾಗುವಾಗ, ನೀವು ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ. ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವದು. ಆತನೇ ನಿಮಗೆ ಆಲೋಚನೆ ನೀಡಿ ಸಕಲ ವಿಷಯಗಳಲ್ಲಿ ನಿಮ್ಮನ್ನು ಸತ್ಯಕ್ಕೆ ನಡೆಸುವನು. ಪ್ರಿಯರೇ, ಎಲ್ಲಾ ಪಾರಂಪರ್ಯಗಳಿಂದಲೂ ಮನುಷ್ಯರ ಬೋಧನೆಗಳಿಂದಲೂ, ನಡೆಸಲ್ಪಡದೆ, ಸತ್ಯದ ಆತ್ಮನಿಂದಲೇ, ನಡೆಸಲ್ಪಡಿರಿ. ಹಾಗೆ ನಡೆಸಲ್ಪಡುವಾಗ ನೀವು ದೊಡ್ಡ ಆಶೀರ್ವಾದಗಳನ್ನು ಪಡೆಯುವಿರಿ.

**ನೆನಪಿಗೆ : "ನೀವು ಪವಿತ್ರಾತ್ಮನಿಂದ ದೇಹದ.....ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ, ಅವರು ದೇವರ ಮಕ್ಕಳು" (ರೋಮಾ 8:13,14).**

| ಮೇ 26 | **ಪೂರ್ಣ ಆಯುಷ್ಯ!** | ಬೆಳಗ್ಗೆ : 1ಪೂ.ವೃ 28,29<br>ಸಂಜೆ : ಯೋಹಾನ 9:24-41 |
|---|---|---|

**"ನಿಮಗೆ ಸಂಪೂರ್ಣವಾದ ಆಯುಷ್ಯವನ್ನು ಕೊಡುವೆನು" (ವಿಮೋ 23:26).**

ಆಯುಷ್ಕಾಲವನ್ನು ಹೆಚ್ಚಿಸುವ ದೇವರು, ನಿಮಗೆ ಆರೋಗ್ಯವನ್ನೂ, ಬಲವನ್ನೂ ನೀಡಿ, ಪೂರ್ಣಯುಷ್ಯವನ್ನು ನೀಡುವನು. ದೀರ್ಘಾಯುಷ್ಯವನ್ನು ಅನುಗ್ರಹಿಸಿ ಅವನನ್ನು ತೃಪ್ತಿಪಡಿಸುವೆನು. ನನ್ನ ವಿಶೇಷವಾದ ರಕ್ಷಣೆಯನ್ನು ತೋರಿಸುವೆನು (ಕೀರ್ತ 91:16) ಎಂದು ಕರ್ತನು ವಾಗ್ದಾನ ಮಾಡಿದ್ದಾನೆ.

ಆದಾಮನು ಈ ಭೂಮಿಯಲ್ಲಿ ಜೀವದಿಂದ ಬದುಕಿದ ವರುಷಗಳು 930 (ಆದಿ 5:5). ಆದರೆ ಭೂಮಿಯಲ್ಲಿ ಮನುಷ್ಯನ ಪಾಪವು ಹೆಚ್ಚಿದಾಗ, ಕರ್ತನು ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವದಿಲ್ಲ. ಅವರು ಭ್ರಷ್ಟರಾದದರಿಂದ, ಮರ್ತ್ಯರೇ ಅವರ ಆಯುಷ್ಕಾಲವು ನೂರಇಪ್ಪತ್ತು ವರುಷವಾಗಿರಲಿ ಅಂದನು (ಆದಿ 6:3). ಭಕ್ತನಾದ ಮೋಶೆ, "ನಮ್ಮ ಆಯುಷ್ಕಾಲವು ಎಪ್ಪತ್ತು ವರುಷ ಬಲ ಹೆಚ್ಚಿದರೆ ಎಂಭತ್ತು ಕಷ್ಟಸಂಕಟಗಳೇ ಅದರ ಆಡಂಬರ" ಎಂದು ಹೇಳುತ್ತಾನೆ (ಕೀರ್ತ 90:10). ಭಕ್ತನಾದ ಯಾಕೋಬನು ಮನುಷ್ಯನನ್ನು ಸ್ವಲ್ಪಕಾಲ ಕಾಣಿಸಿಕೊಂಡು ನಂತರ ಕಾಣದೆ ಹೋಗುವ ಹಬೆಗೆ ಹೋಲಿಸಿರುವನು (ಯಾಕೋ 4:14). ಕೀರ್ತನೆಗಾರರು ಮನುಷ್ಯರನ್ನು ಹೊತ್ತಾರೆಯಲ್ಲಿ ಚಿಗುರಿ ನಂತರ ಸಾಯಂಕಾಲದಲ್ಲಿ ಉದುರಿ ಹೋಗುವ ಹುಲ್ಲಿನಂತಿರುವರು ಎಂದು ಹೇಳುತ್ತಾರೆ (ಕೀರ್ತ 90:5,6,). ಭಕ್ತನಾದ ಯೋಬನು "ಸ್ತ್ರೀಯರಲ್ಲಿ ಹುಟ್ಟಿದ ಮನುಷ್ಯನು ಅಲ್ಪಾಯುಷ್ಯನಾಗಿಯೂ ಕಳವಳದಿಂದ ತುಂಬಿದವನಾಗಿಯೂ ಇರುವನು. ಹೂವಿನ ಹಾಗೆ ಅರಳಿ ಬಾಡುವನು, ನೆರಳಿನಂತೆ ನಿಲ್ಲದೆ ಓಡಿ ಹೋಗುವನು (ಯೋಬ 14:1,2). ಇವೆಲ್ಲವುಗಳ ಮಧ್ಯದಲ್ಲಿ, ಕರ್ತನು ನಿಂತು "ನಾನು ನಿನ್ನ ಆಯುಷ್ಕಾಲವನ್ನು ವೃದ್ಧಿ ಪಡಿಸುವೆನು" ಎಂದು ವಾಗ್ದಾನ ಮಾಡುವನು. ನಮ್ಮ ಮೂಲಪಿತೃಗಳಾದ ಅಬ್ರಹಾಮನನ್ನು ಇಸಾಕನನ್ನು ಕುರಿತು ಸತ್ಯವೇದ "ಅವನು ಪೂರ್ಣಾಯುಷ್ಯದಿಂದ ದಿನತುಂಬಿದ ಮುದುಕನಾಗಿ ಪ್ರಾಣಬಿಟ್ಟು ತನ್ನ ಪಿತೃಗಳ ಬಳಿಗೆ ಸೇರಿದನು" ಎಂದು (ಆದಿ 25:8). "ಇಸಾಕನು ದಿನತುಂಬಿದ ಮುದುಕನಾಗಿದ್ದು ನೂರ ಎಂಭತ್ತನೆಯ ವರುಷದಲ್ಲಿ ಪ್ರಾಣಬಿಟ್ಟು ತನ್ನ ಪಿತೃಗಳ ಬಳಿಗೆ ಸೇರಿದನು" (ಆದಿ 35:28) ಎಂದೂ ಹೇಳುವದು.

ದೇವಮಕ್ಕಳೇ, ಅಯ್ಯೋ, ವ್ಯಾಧಿ ಉಂಟಾಯಿತೇ, ಅರ್ಧಾಯುಷ್ಯದಲ್ಲಿ, ಕರ್ತನು ನನ್ನನ್ನು ತೆಗೆದುಕೊಳ್ಳುವನೇನೋ, ನನ್ನ ಮಕ್ಕಳಿಗೆ ಮಾಡಬೇಕಾದ ಕರ್ತವ್ಯಗಳನ್ನು ಮಾಡಲಾರದೇ ಹೋಗುವನೇನೋ, ಎಂದು ಕಳವಳಗೊಂಡು ಔಷಧಿಗಳು, ಟಾನಿಕ್‌ಗಳು ನನ್ನೊಳಗೆ ಹೋಗಿ ನನ್ನನ್ನು ಗುಣಪಡಿಸುವುದು ಎಂದು ನಂಬುವದಕ್ಕಿಂತ "ಕ್ರಿಸ್ತನು ನನ್ನೊಳಗೆ ವಾಸಮಾಡಿ ನನ್ನನ್ನು ಗುಣಪಡಿಸುವನು ಎಂದು ನಂಬಿದಾಗ ಕರ್ತನು ನಿಶ್ಚಯವಾಗಿ ನಿಮ್ಮ ಆಯುಷ್ಕಾಲವನ್ನು ಹೆಚ್ಚಿಸಿ, ಪೂರ್ಣಗೊಳಿಸುವನು.

**ನೆನಪಿಗೆ : "ನನ್ನಿಂದ ನಿನ್ನ ದಿನಗಳು ಹೆಚ್ಚುವವು, ನಿನ್ನ ಆಯುಸ್ಸಿನ ವರುಷವು ವೃದ್ಧಿಯಾಗುವವು." (ಜ್ಞಾನೋ 9:11).**

**"ಯೆಹೋವನಿಗೆ ಭಯಪಡುವವರ ದಿನಗಳಿಗೆ ವೃದ್ಧಿ" (ಜ್ಞಾನೋ 10:27).**

| ಮೇ 27 | **ಪೂರ್ಣ ಕೃಪೆ!** | ಬೆಳಗ್ಗೆ : 2ಪೂ.ವೃ 1,2,3<br>ಸಂಜೆ : ಯೋಹಾನ 10:1-21 |
|---|---|---|

**"ಕರ್ತನಾದ ಯೇಸು ಜೀವಂತನಾಗಿ ಎದ್ದು ಬಂದನೆಂಬದಕ್ಕೆ ಅಪೊಸ್ತಲರು ಬಹು ಬಲವಾಗಿ ಸಾಕ್ಷಿ ಹೇಳುತ್ತಿದ್ದರು ಬಹಳ ದಯವು ಅವರೆಲ್ಲರ ಮೇಲೆ ಇತ್ತು" (ಅ.ಕೃ 4:33).**

ಸಾಕ್ಷಿಕೊಟ್ಟರು, ದೇವರ ವಾಕ್ಯವನ್ನು ಪ್ರಸಂಗಿಸಿದರು. ಯೇಸು ಜೀವಿಸುತ್ತಿರುವನೆಂದು ಮೊಳಗಿದರು. ಅವರು ಕೂಡಿ ಇದ್ದ ಸ್ಥಳ ನಡುಗಿತು. ಅವರೆಲ್ಲರ ಮೇಲೂ ಪೂರ್ಣವಾದ ಕೃಪೆ ಇಳಿಯಿತು.

"ಪೂರ್ಣವಾದ ಕೃಪೆ" ಎಂಬ ಮಾತನ್ನು ಧ್ಯಾನಿಸಿ ನೋಡಿರಿ. ನೋಹನಿಗೆ, ಅಬ್ರಹಾಮನಿಗೆ, ಯೋಸೇಫನಿಗೆ ದೇವರ ದೃಷ್ಟಿಯಲ್ಲಿ ಪೂರ್ಣ ಕೃಪೆ ದೊರಕಿತು. ಆದರೆ ಹಳೆ ಒಡಂಬಡಿಕೆಯ ಭಕ್ತರಲ್ಲಿ ಯಾರಿಗೂ ಪೂರ್ಣಕೃಪೆ ಸಿಗಲಿಲ್ಲ. ಹೊಸ ಒಡಂಬಡಿಕೆಯಲ್ಲಿ ಬರುವಾಗ, ಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟು, ಪವಿತ್ರಾತ್ಮನಿಂದ ತುಂಬಲ್ಪಟ್ಟಿದ್ದ ಶಿಷ್ಯರ ಮೇಲೆ ಪೂರ್ಣಕೃಪೆ ಉಂಟಾಯಿತು. ದೇವರ ಮಕ್ಕಳಾದ ನೀವು, ಕರ್ತನ ಪೂರ್ಣವಾದ ಕೃಪೆಯನ್ನು ರುಚಿಸಲು ಬಾಧ್ಯತೆಯಾಗಿ ಪಡೆಯುವ ಭಾಗ್ಯ ಸಿಕ್ಕಿರುವದೆಂದರೆ, ನೀವು ಎಷ್ಟೋ ಭಾಗ್ಯವಂತರಾಗಿರುವಿರಿ.

ಈ ಕೃಪೆ ಎನ್ನುವದು ಹಣಕೊಟ್ಟು ಖರೀದಿಸಲು ಸಾಧ್ಯವಿಲ್ಲ. ಕಾಣಿಕೆ ನೀಡಿ ಪಡೆಯಲು ಸಾಧ್ಯವಿಲ್ಲ. ಇತರ ಮತಗಳಲ್ಲಿ ದೇವರು ಒಬ್ಬ ಮನುಷ್ಯನ ಮೇಲೆ ಕೃಪೆ ತೋರಬೇಕಾದರೆ, ಅವನನ್ನು ಶೋಧಿಸಿ, ಯೋಗ್ಯನೆಂದು ತಿಳಿದಾಗ ಮಾತ್ರ, ತನ್ನ ಅನುಗ್ರಹವನ್ನು ನೀಡುವನಂತೆ. ಆದರೆ ಕ್ರೈಸ್ತಮಾರ್ಗದಲ್ಲಿ. ಒಂದು ವ್ಯತ್ಯಾಸ ಉಂಟು ಯಾವದೇ ಯೋಗ್ಯತೆ ಇಲ್ಲದ ಒಬ್ಬ ಪಾಪಿ, ಶಿಲುಬೆಯ ಬಳಿಗೆ ಬಂದು ತನ್ನ ಪಾಪಗಳಿಗಾಗಿ, ಪಶ್ಚಾತ್ತಾಪದಿಂದ ಅತ್ತರೆ, ಅವನಿಗೆ ಕರ್ತನು ಕನಿಕರ ತೋರಿಸುವನು. "ಪಾಪವು ಹೆಚ್ಚಿದ ಸ್ಥಳದಲ್ಲಿ ಕೃಪೆ ಅಧಿಕವಾಗಿ ಹೆಚ್ಚುವದು. ಹೀಗೆ ಪಾಪವು ಮರಣವನ್ನುಂಟು ಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯ ಜೀವವನ್ನುಂಟು ಮಾಡುತ್ತಾ ಅಧಿಕಾರವನ್ನು ನಡಿಸುವದು" (ರೋಮಾ 5:20,21). ಈ ಕೃಪೆಯನ್ನು ಪಡೆಯಲು ಯಾವದೇ ಪುಣ್ಯಕ್ಷೇತ್ರಗಳಿಗೆ ಹೋಗ ಬೇಕಾಗಿಲ್ಲ, ದೇಹವನ್ನು ದಂಡಿಸಿಕೊಳ್ಳಬೇಕಾಗಿಲ್ಲ. ಕಾಣಿಕೆಗಳನ್ನು ಸಲ್ಲಿಸಬೇಕಾಗಿಲ್ಲ. ದೇವರನ್ನು ಆರಾಧಿಸುವಾಗ, ಆತನಿಗೆ ಸಾಕ್ಷಿ ಕೊಡುವಾಗ, ಪ್ರಾರ್ಥಿಸುವಾಗ ದೇವರ ಕೃಪೆ ನಿಮ್ಮ ಮೇಲೆ ಪೂರ್ಣವಾಗಿ ಸುರಿಸಲ್ಪಡುವದು. ಪ್ರಿಯರೇ, ಇಂದೇ ಶಿಲುಬೆಯ ಬಳಿಗೆ ಬಂದು ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು ಕರ್ತನನ್ನು ಆರಾಧಿಸಿ, ಪ್ರಾರ್ಥಿಸಿ, ಪೂರ್ಣಕೃಪೆಯನ್ನು ಹೊಂದಿ ಕೊಳ್ಳಿರಿ.

ದೇವಮಕ್ಕಳೇ, ನೀವು ಕೃಪೆಯಲ್ಲಿ ಬೆಳೆಯ ಬೇಕೆಂದರೆ ನಿಮಗೆ ತಾಳ್ಮೆ ಬಹಳ ಅವಶ್ಯ. ಕರ್ತನು ಮನುಷ್ಯನಿಂದ ನಿರೀಕ್ಷಿಸುವದು ದೀನಭಾವವನ್ನು ತಾಳ್ಮೆಯನ್ನು ಇದಲ್ಲದೆ ಬೇರೆನನ್ನೂ ನಿರಿಕ್ಷಿಸುವದಿಲ್ಲ.

**ನೆನಪಿಗೆ : "ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ" (ಇಬ್ರಿ 12:28).**

| ಮೇ 28 | ಪೂರ್ಣ ಸಮಾಧಾನ! | ಬೆಳಗ್ಗೆ : 2ಪೂ.ವೃ 4,5,6<br>ಸಂಜೆ : ಯೋಹಾನ 10:22-42 |
|---|---|---|

**"ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ" (ಯೆಶಾ 26:3).**

ಪೂರ್ಣಸಮಾಧಾನವನ್ನು ಪ್ರತಿಬಿಂಬಿಸುವ, ಚಿತ್ತವನ್ನು ಬರೆಯುವಂತೆ ಒಂದು ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಭಾಗವಹಿಸಿದ ಒಬ್ಬ ಚಿತ್ರಗಾರನು, ಹಸಿರು ಗಿಡಮರಗಳಿಂದ ತುಂಬಿದ ಬೆಟ್ಟಗುಡ್ಡಗಳು. ಕೆಂಬಣ್ಣದ ಹಲವು ಬಗೆಯ ಹೂಗಳು ನೀಲಿಬಣ್ಣದ ಸೇತುವೆಯ ಚಿತ್ರಬಿಡಿಸಿದ್ದನು. ಆದರೆ ಮತ್ತೊಬ್ಬ ಚಿತ್ರಗಾರನು ಭೋರ್ಗರೆಯುವ ಸಮುದ್ರದ ಮಧ್ಯದಲ್ಲಿ ಇರುವ ಬಂಡೆಯನ್ನು, ಆ ಬಂಡೆಯ ಮೇಲೆ ಇಂಪಾಗಿ ಹಾಡುವ ಒಂದು ಪಕ್ಷಿಯ ಚಿತ್ರ ಬರೆದಿದ್ದನು. ಸುತ್ತಲೂ ಅಲೆಗಳಿಂದ ಭೋರ್ಗರೆಯುವ ಸಮುದ್ರ ಭಯಂಕರವಾದ ಮಿಂಚುಗಳು ಇದ್ದಾಗ್ಯೂ. ಆ ಪಕ್ಷಿಯು ಕುಳಿತು ಸಮಾಧಾನದಿಂದ ಹಾಡುತ್ತಿತ್ತು. ಆ ಚಿತ್ರವೇ ಮೊದಲ ಬಹು ಮಾನವನ್ನು ಪಡೆಯಿತು.

ಆ ಪಕ್ಷಿಯಂತೆಯೇ, ಕರ್ತನಲ್ಲಿ ನಂಬಿಕೆ ಇಟ್ಟವರು, ಕಷ್ಟಸಂಕಟ ಹೋರಾಟಗಳೆಂಬ ಅಲೆಗಳ ನಡುವೆ ಜೀವಿಸುತ್ತಿದ್ದರೂ ಪೂರ್ಣಸಮಾಧಾನದಿಂದ ಜೀವಿಸುವರು. "ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ" (1ಕೊರಿ 14:33). ಆತನು ಸಮುದ್ರವನ್ನು ಗದರಿಸುವಾತನು ಶತ್ರುಗಳನ್ನು ಮಿತ್ರರನ್ನಾಗಿ ಮಾಡುವವನು. ಪೂರ್ಣಸಮಾಧಾನವನ್ನು ನೀಡುವನು. ಆದಕಾರಣ ನಿಮ್ಮ ಸಮಸ್ಯೆಗಳನ್ನು ಚಿಂತಿಸಿ ಕಳವಳಗೊಳ್ಳದೆ, ಕರ್ತನ ಕೃಪೆಯನ್ನು ಆಶ್ರಯಿಸಿ, ಆತನ ಕೈಗಳಲ್ಲಿ ಎಲ್ಲವನ್ನೂ ಒಪ್ಪಿಸಿ ವಿಶ್ರಮಿಸುವದನ್ನು ನೀವು ಕಲಿತುಕೊಳ್ಳಬೇಕು. ಆಗ ಎಲ್ಲಾ ಬುದ್ಧಿಗೂ ಮೇಲಾದ ದೇವಸಮಾಧಾನ ನಿಮ್ಮ ಹೃದಯವನ್ನು ಆಳುವದು. ನಿಮಗೆ ಸಮಾಧಾನ ಉಂಟಾಗುವಂತೆ, ಸಮಾಧಾನದ ಪ್ರಭು ತನ್ನನ್ನೇ ಒಪ್ಪಿಸಿ ಕೊಟ್ಟಿರುವನು. ನಿಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಆತನು ಅನುಭವಿಸಿದನು (ಯೆಶಾ 53:5). ನಿಮಗೆ ಶಾಂತಿಯನ್ನು ನೀಡಲು ಮುಳ್ಳಿನ ಮುಡಿಯನ್ನು ಧರಿಸಿದನು. ತನಗಾಗಿ ಒಂದು ತೊಟ್ಟು ರಕ್ತವನ್ನೂ ಉಳಿಸಿಕೊಳ್ಳದೆ ಕಲ್ವಾರಿಯಲ್ಲಿ ತನ್ನ ರಕ್ತವನ್ನು ಸುರಿಸಿದನು.

ದೇವಮಕ್ಕಳೇ, ನಿಜವಾದ ಸಮಾಧಾನವನು ಪಡೆಯಲು ಇರುವ ಒಂದೇ ಮಾರ್ಗ ಯೇಸುಕ್ರಿಸ್ತನೇ ಆಗಿರುವನು. ಆತನು ನೀಡುವ ಸಮಾಧಾನ ನಿತ್ಯ ನಿರಂತರವಾದ ಸಮಾಧಾನವಾಗಿದೆ. ಸಮಾಧಾನ ಪ್ರಭುವಾದ ಆತನನ್ನು ಇಂದೇ ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಿರಿ. ಆತನು ನಿಮ್ಮ ಮನೆಯೊಳಗೆ ತಂಗಿರುವದಾದರೆ ಎಲ್ಲಾ ಬುದ್ಧಿಗೂ ಮೇಲಾದ ದೇವಸಮಾಧಾನ ನಿಮ್ಮ ಕುಟುಂವನ್ನು ಆವರಿಸುವದು. ಯಾವಾಗಲೂ ಸಮಾಧಾನವನ್ನು ಕಾಪಾಡಿಕೊಳ್ಳಿರಿ. ಆತನ ಸತ್ಯತೆಯನ್ನು ಪ್ರೀತಿಸಿ, ಅದರಂತೆ ನಡೆಯುವವರಿಗೆ ಪೂರ್ಣವಾದ ಸಮಾಧಾನ ಇರುವದೆಂದು (ಕೀರ್ತ 119:165) ರಲ್ಲಿ ಓದುತ್ತೇವೆ. ಸಮಾಧಾನ ಪ್ರಭುವಾದ ಕರ್ತನು ತಾನೇ, ದೈವೀಕ ಸಮಾಧಾನವನ್ನು ನಿಮ್ಮ ಆತ್ಮ, ಪ್ರಾಣ, ಶರೀರದಲ್ಲಿ ತುಂಬಲಿ!

**ನೆನಪಿಗೆ : "ನೀನು ನನ್ನ ಆಜ್ಞೆಗಳನ್ನು ಕೇಳಿದ್ದರೆ....ನಿನ್ನ ಸುಖವು ದೊಡ್ಡ ನದಿಯಂತೆಯೂ ನಿನ್ನ ಕ್ಷೇಮವು ಸಮುದ್ರದ ಅಲೆಗಳ ಹಾಗೂ ಇರುತ್ತಿದ್ದವು" (ಯೆಶಾ 48:18).**

| ಮೇ 29 | ಸಕಲವಿಧ ಆಶೀರ್ವಾದಗಳನ್ನು! | ಬೆಳಿಗ್ಗೆ : 2ಪೂ.ವೃ 7,8,9<br>ಸಂಜೆ : ಯೋಹಾನ 11:1-27 |
|---|---|---|

**"ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯಿಟ್ಟು...." (1ತಿಮೊ 6:17,18).**

ಕೆಲವರು ದೇವರನ್ನು ನೋಡುವಾಗ, ಕಷ್ಟಗಳಲ್ಲಿ ನಡೆಸುವ ದೇವರನ್ನಾಗಿಯೇ ನೋಡುವರು. ಆತನು ಉಪದ್ರವಗಳ, ಕಷ್ಟಗಳ, ನಷ್ಟಗಳ ಹಾದಿಯಲ್ಲಿಯೇ ನಡೆಸಿ ಪುಟಕ್ಕೆ ಹಾಕಿದ ಚಿನ್ನದಂತೆ ಶುದ್ಧೀಕರಿಸುವನೆಂದು ಭಾವಿಸುವರು. ಕೆಲವರು ಯಾವಾಗಲೂ ನಾನು ಯೋಬನಂತೆ ಶೋಧಿಸಲ್ಪಡುತ್ತಿರುವೆನು ಎಂದು ಹೇಳುತ್ತಲೇ ಇರುತ್ತಾರೆ. ಇದರಿಂದಾಗಿ ಕರ್ತನು ನೀಡುವ ಸಂಪೂರ್ಣವಾದ ಆಶೀರ್ವಾದಗಳನ್ನು ಅವರಿಂದ ಪಡೆದುಕೊಳ್ಳಲಾಗುವದಿಲ್ಲ!

ಲೋಕದಲ್ಲಿ ನಿಮಗೆ ಕಷ್ಟ ಉಂಟು, ಉಪದ್ರವಗಳಿರುವವು ನಿಜವೇ! ಆದರೆ ಕರ್ತನು ಹಲವು ಆಶೀರ್ವಾದಗಳನ್ನೂ ವಾಗ್ದಾನ ಮಾಡಿರುವನು. ಲೋಕದಲ್ಲಿರುವವರಿಗಿಂತಲೂ ತನ್ನ ಮಕ್ಕಳಿಗೆ ಉತ್ತಮವಾದ ಆಶೀರ್ವಾದಗಳನ್ನು ನೀಡಲು ಕರ್ತನು ಕಾದಿರುವನು. ಕರ್ತನು ನಿಮ್ಮನ್ನು ಆಶೀರ್ವದಿಸುವಾಗ, ನೀವು ಅದನ್ನು ಸಂತೋಷವಾಗಿ ಅಂಗೀಕರಿಸಿಕೊಂಡು, ಪ್ರಾಪಂಚಿಕ ಜೀವಿತದಲ್ಲೂ, ಆತ್ಮೀಕ ಜೀವಿತದಲ್ಲೂ ವೃದ್ಧಿಯಾಗಬೇಕು. ಅಪೊ.ಪೌಲನು ಹೀಗೆ ಹೇಳುತ್ತಾನೆ "ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೇನೆ. ಬಡವನಾಗಿರಲೂ ಬಲ್ಲೆನು, ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನು. ನಾನು ತೃಪ್ತನಾಗಿದ್ದರೂ ಹಸಿದವನಾಗಿದ್ದರೂ ಸಮೃದ್ಧಿಯುಳ್ಳವನಾದರೂ, ಕೊರತೆಯುಳ್ಳವನಾದರೂ ಯಾವ ತರದ ಸ್ಥಿತಿಯಲ್ಲಿರುವವನಾದರೂ ಅದರ ಗುಟ್ಟು ನನಗೆ ತಿಳಿದದೆ ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು (ಫಿಲಿ 4:11-13).

ದೇವರ ಬಯಕೆ ಏನು? ನೀವು ಕೊರತೆಯುಳ್ಳವರಾಗಿ, ನಷ್ಟಪಟ್ಟು, ಬಡತನದಲ್ಲಿ ಇರಬೇಕೆಂಬದು ಆತನ ಚಿತ್ತವಲ್ಲ. ಪ್ರಿಯನೇ, ನೀನು ಆತ್ಮ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ, ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕೆಂಬದು ಕರ್ತನ ಚಿತ್ತವಾಗಿದೆ (3ಯೋಹಾ 1:2). ಆದ್ದರಿಂದ, ನಿಮ್ಮ ಅಗತ್ಯತೆಗಳನ್ನು ದೇವರಿಗೆ ತಿಳಿಸಿರಿ. ಲೌಕೀಕವಾಗಿಯೂ, ಆತ್ಮೀಕವಾಗಿಯೂ ಕರ್ತನು ನಿಮ್ಮನ್ನು ಆಶೀರ್ವದಿಸುವನು.

ದೇವಮಕ್ಕಳೇ, ಆಶೀರ್ವದಿಸುವುದು ಕರ್ತನ ಒಂದು ಒಳ್ಳೆಯ ಸ್ವಭಾವ ಮನುಷ್ಯನನ್ನು ಸೃಷ್ಟಿಸಿದಾಗ ಆತನು ಮಾಡಿದ ಮೊದಲ ಕಾರ್ಯ ಅವರನ್ನು ಆಶೀರ್ವದಿಸಿದನು (ಆದಿ 1:28). ಆತನ ಕೆಲವು ಆಶೀರ್ವಾದಗಳು ನಿಬಂಧನೆ ರಹಿತವಾದದ್ದು "ನಮ್ಮ ದೇವರು ಕ್ರಿಸ್ತಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಗಳನ್ನು ನೀಗಿಸುವನು"

**ನೆನಪಿಗೆ : "ದೇವರು ಸಕಲವಿಧವಾದ ದಾನಗಳನ್ನು ನಿಮಗೆ ಧಾರಳವಾಗಿ ಅನುಗ್ರಹಿಸುವದಕ್ಕೆ ಶಕ್ತನಾದ್ದರಿಂದ.....ಹೇರಳವಾಗಿ ಮಾಡುವವರಾಗಿರಬೇಕು" (2ಕೊರಿ 9:8).**

| ಮೇ 30 | **ಸಂಪೂರ್ಣವಾಗಿ ಕೊಡುವಾತನು!** | ಬೆಳಗ್ಗೆ : 2ಪೂ.ವೃ 10,11,12<br>ಸಂಜೆ : ಯೋಹಾನ 11:28-57 |
|---|---|---|

**"ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರ ಮಾಡಲಿ....ನಿಮ್ಮ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ" (1ಥೆಸಲೋ 5:23).**

ನಮ್ಮ ದೇವರು ಎಲ್ಲಾ ಒಳ್ಳೆಯ ದಾನಗಳನ್ನೂ, ಆಶೀರ್ವಾದಗಳನ್ನೂ ಸಂಪೂರ್ಣವಾಗಿ ಕೊಡುವಾತನಾಗಿರುವನು. ನಿಮ್ಮ ಆತ್ಮ, ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣತೆಯನ್ನು ತಂದು ಎಡವದಂತೆ ಕಡೆಯವರೆಗೂ ನೆಲೆಗೊಳಿಸು ವಾತನಾಗಿರುವನು. ಕರ್ತನೊಬ್ಬನೇ, ತನ್ನ ಪರಿಶುದ್ಧತೆಯನ್ನು ನಿಮಗೆ ನೀಡುವಾತನು. ಈ ಭೂಮಿಯಲ್ಲಿ ನಿಮ್ಮನ್ನು ಪೂರ್ಣವಾಗಿ ಪರಿಶುದ್ಧರನ್ನಾಗಿಸುವದೇ, ದೇವರ ಉದ್ದೇಶ. ಯೇಸುಕ್ರಿಸ್ತನು ಬರುವಾಗ, ನಿಮ್ಮನ್ನು ದೋಷರಹಿತರನ್ನಾಗಿ ನಿಲ್ಲಿಸುವದೇ ಆತನ ಬಯಕೆ. ಅದಕ್ಕಾಗಿಯೇ ಕರ್ತನು ತನ್ನ ಪವಿತ್ರವಾದ ಆತ್ಮವನ್ನು ನಿಮಗೆ ನೀಡಿರುವನು.

ಪವಿತ್ರಾತ್ಮನು ಮಾಡುವ ಮೊದಲ ಕಾರ್ಯ ಪಾಪದ ಅರಿವು ಮೂಡಿಸುವದು. ಅಂದು ಪೇತ್ರನು ಪ್ರಸಂಗಿಸಿದಾಗ, ಪವಿತ್ರಾತ್ಮನ, ವಾಕ್ಯವನ್ನು ಕೇಳಿದವರೆಲ್ಲರ ಹೃದಯದಲ್ಲಿ ಕಾರ್ಯನಡೆಸಿದ್ದರಿಂದ, ಪಾಪದ ಕುರಿತಾದ ಅರಿವು ಅವರಿಗೆ ಉಂಟಾಯಿತು. ಸಹೋದರನೇ ನಾವು ರಕ್ಷಿಸಲ್ಪಡಲು ಏನು ಮಾಡಬೇಕು? ಎಂದು ಅವರು ಕೇಳಿದರು. "ಆತನು ಬಂದು ಪಾಪ ನೀತಿ, ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು" (ಯೋಹಾ 16:8).

ಎರಡನೆಯದಾಗಿ ಪವಿತ್ರಾತ್ಮನು ಪಾಪದ ಮೇಲೂ ದುರಭ್ಯಾಸಗಳ ಮೇಲೂ ಜಯ ನೀಡುವನು. "ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲಹೊಂದುವಿರಿ" (ಅ.ಕೃ 1:8).

ಮೂರನೆಯದಾಗಿ, ಪವಿತ್ರಾತ್ಮನು ನಿಮ್ಮ ಜೀವಿತದಲ್ಲಿ ಮಹಿಮೆಯಾದ ಬಲ ನೀಡುವನು. ಆ ಮೂಲಕ ಮಹಿಮೆಯಾದ ಕಾರ್ಯಗಳನ್ನು ಮಾಡುವಿರಿ. "ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮನಿಂದಲೂ ಬಲದಿಂದಲೂ ಅಭಿಷೇಕಿಸಿದನು ದೇವರು ಆತನ ಸಂಗಡ ಇದ್ದದ್ದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಪಡಿಸುತ್ತಾ ಸಂಚರಿಸಿದನು" (ಅ.ಕೃ 10:38).

ನಾಲ್ಕನೆಯದಾಗಿ, ಪವಿತ್ರಾತ್ಮನು ನಿಮ್ಮೊಳಗೆ ವಾಸವಾಗಿದ್ದು ದೈವೀಕ ಸ್ವಭಾವವನ್ನು ತಂದು ಪರಿಶುದ್ಧತೆಯಲ್ಲಿ ಸಂಪೂರ್ಣಗೊಳಿಸುವನು. ನೀವು ದೇವರ ಆಲಯವೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದು ನಿಮಗೆ ಗೊತ್ತಿಲ್ಲವೇ.

ದೇವಮಕ್ಕಳೇ, ನಿಮ್ಮ ಅನುಭೋಗಕ್ಕೋಸ್ಕರ ನಿಮಗೆ ಎಲ್ಲವನ್ನು ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಿರಿ. ನೀವು ಪವಿತ್ರಾತ್ಮನಿಗೆ ತಕ್ಕ ರೀತಿಯಲ್ಲಿ ನಡೆದುಕೊಳ್ಳಿರಿ.

**ನೆನಪಿಗೆ : "ನಾವೆಲ್ಲರೂ ಮುಸುಕುತೆರೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು.... ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ" (2ಕೊರಿ 3:18).**

| ಮೇ 31 | ಪರಿಪೂರ್ಣಗೊಳಿಸುವನು! | ಬೆಳಗ್ಗೆ : 2ಪೂ.ವೃ 13,14<br>ಸಂಜೆ : ಯೋಹಾನ 12:1-19 |
|---|---|---|

**"ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ. ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾ 10:10).**

ದೇವರು ಒಳ್ಳೆಯ ದೇವರು; ಸೈತಾನನು ಕೆಟ್ಟ ಸೈತಾನನು ಎಂದು ಹೇಳುತ್ತಾರೆ. ಓರಲ್ ರಾಬರ್ಟ್‌ರವರು ಅನೇಕರು ಸೈತಾನನ ಕುರಿತು ತಿಳಿದಿರುವರು. ಆದರೆ "ಕರ್ತನು ಒಳ್ಳೆಯವನು, ಮಹಿಮೆಯುಳ್ಳಾತನು, ಸಾಕಾದವನು" ಎಂಬುದನ್ನು ತಿಳಿದುಕೊಂಡಿಲ್ಲ. ಕರ್ತನು, ಸೈತಾನನನ್ನು 1.ಕಳ್ಳನು 2.ಕೊಲೆಗಾರನು 3.ನಾಶಪಡಿಸುವವನು ಎಂದು ಹೇಳುತ್ತಾನೆ. ಅದೇ ವೇಳೆಯಲ್ಲಿ ತನ್ನನ್ನು ಕುರಿತು "ನಾನು ಮನುಷ್ಯರಿಗೆ ಜೀವವು ಇರಬೇಕೆಂತಲೂ, ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು"

ಹೆಸರಾಂತ ಟಿ.ವಿ ಕಲಾವಿದನೊಬ್ಬನಿದ್ದನು. ಆದರೆ ಅವನೋ, ಪಾಪ ಭೋಗಗಳಲ್ಲಿ ಸಿಕ್ಕಿಕೊಂಡು ಮನಶ್ಯಾಂತಿ ಇಲ್ಲದವನಾಗಿ ಜೀವಿಸುತ್ತಿದ್ದನು. ಒಂದು ದಿನ ಅವನು ಅವಸರದಿಂದ ಹೊರಗೆ ಹೊರಟಾಗ, ಅನಿರೀಕ್ಷಿತವಾಗಿ ಎದೆನೋವಿಗೆ ತುತ್ತಾಗಿ ಹಾಗೆಯೇ ಕುಳಿತು ಬಿಟ್ಟನು. ಆಗ ಅವನಿಗೆ, ಒಂದು ದೈವೀಕ ದರ್ಶನ ಉಂಟಾಯಿತು. ಆ ದರ್ಶನದಲ್ಲಿ. ಅವನು ತಂದೆ ದೇವರ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡನು. ಒಂದು ಕಡೆ ಸೈತಾನನು ನಿಂತುಕೊಂಡು ಆ ನಟನ ಕಡೆಗೆ ಕೈ ತೋರಿಸುತ್ತಾ "ಇವನನ್ನು ನನ್ನೊಂದಿಗೆ ಕಳುಹಿಸು ಪಾಪದ ಕೆಸರಿನಲ್ಲಿ ಸಿಕ್ಕಿಕೊಂಡಿರುವ ಇವನ ಪ್ರಾಣವನ್ನು ನರಕಕ್ಕೆ ತೆಗೆದುಕೊಂಡು ಹೋಗುತ್ತೇನೆ" ಅಂದನು. ಇನ್ನೊಂದು ಪಕ್ಕದಲ್ಲಿ ಯೇಸುಕ್ರಿಸ್ತನು ನಿಂತುಕೊಂಡು, ಬಹಳವಾದ ಪ್ರೀತಿಯುಳ್ಳವನಾಗಿ ಅವನಿಗಾಗಿ ತಂದೆಯ ಬಳಿ ಮನವಿ ಮಾಡುತ್ತಾ "ನಾನೇ ಅವನನ್ನು ಸೃಷ್ಟಿಸಿದೆನು, ನಾನೇ ಅವನಿಗಾಗಿ ಶಿಲುಬೆಯಲ್ಲಿ ರಕ್ತ ಚೆಲ್ಲಿದೆನು, ಅವನಿಗೆ ಇನ್ನೂ ಕೃಪೆಯ ಅವಕಾಶ ಕೊಡಲ್ಪಡಲಿ" ಎಂದು ಬೇಡಿದನು. ಆ ನಟನು ಸೈತಾನನನ್ನೂ, ಯೇಸು ಕ್ರಿಸ್ತನನ್ನೂ ಪುನಃ ಪುನಃ ನೋಡಿದನು. ಆಗ ಶಿಲುಬೆಯ ದೃಶ್ಯ ಅವನ ಆಂತರ್ಯದಲ್ಲಿ ಪ್ರಕಾಶಿಸಿತು. ತನಗಾಗಿ ಪ್ರಾಣವನ್ನು ಕೊಟ್ಟ ಯೇಸುವಿಗಾಗಿ, ಅವನು ತನ್ನ ಇಡೀ ಜೀವಿತವನ್ನು ಅರ್ಪಿಸಿದನು.ಈ ಪ್ರಪಂಚದಲ್ಲಿ ಜೀವಿಸುವ ಎಲ್ಲಾ ಮನುಷ್ಯರಿಗೂ ಜೀವವಿರುವದಕ್ಕಾಗಿ ಯೇಸುಕ್ರಿಸ್ತನು ಪ್ರಾಣವನ್ನು ಕೊಟ್ಟಿರುವನು. ಆದರೆ ಶಿಲುಬೆಯ ಬಳಿಗೆ ಬಂದು ಕ್ರಿಸ್ತಯೇಸುವಿನ ರಕ್ತದಿಂದ ತೊಳೆಯಲ್ಪಟ್ಟು ಆತನನ್ನು ನಂಬುವ ಪ್ರತಿಯೊಬ್ಬರಿಗೂ ನಿತ್ಯಜೀವವನ್ನು ಅಂದರೆ ಎಂದಿಗೂ ಅಳಿದುಹೋಗದ ಜೀವವನ್ನು ಕೊಟ್ಟಿರುವನು.

ದೇವಮಕ್ಕಳೇ, ನಿಮಗೆ ಜೀವ ತಂದ ಯೇಸುಕ್ರಿಸ್ತನನ್ನು ದೃಷ್ಟಿಸಿ ನೋಡಿರಿ. "ಆತನಲ್ಲಿ ಜೀವವಿತ್ತು; ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು. ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ" (ಯೋಹಾ 1:4,5) ಎಂದು ದೇವರ ವಾಕ್ಯ ಹೇಳುತ್ತದೆ. ಆತನನ್ನೇ ದೃಢವಾಗಿ ಹಿಡಿದುಕೊಳ್ಳಿರಿ, ಸೈತಾನನ ತಂತ್ರಗಳಲ್ಲಿ ಸಿಕ್ಕಿ, ಕಲ್ವಾರಿ ಪ್ರೀತಿಯನ್ನು, ನಿತ್ಯಜೀವವನ್ನು ಕಳೆದುಕೊಳ್ಳದಿರಿ.

**ನೆನಪಿಗೆ : "ತಂದೆಯು ತಾನು ಹೇಗೆ ಸ್ವತಃ ಜೀವವುಳ್ಳವನಾಗಿದ್ದಾನೋ, ಹಾಗೆಯೇ ಮಗನೂ ಸ್ವತಃ ಜೀವವುಳ್ಳವನಾಗಿರುವಂತೆ ಮಾಡಿದನು" (ಯೋಹಾ 5:26).**

ನಾವು ಅನುದಿನದ ಆಹಾರದ ಕುಟುಂಬದವರೆಲ್ಲರಿಗಾಗಿ ಪ್ರಾರ್ಥಿಸುತ್ತೇವೆ. ನಿಮಗೆ ಏನಾದರೂ ವಿಶೇಷ ಪ್ರಾರ್ಥನೆಯ ಅಗತ್ಯತೆ ಇದ್ದರೆ, ನಮಗೆ ಬರೆಯಿರಿ.

## ನಿಮಗಾಗಿ ಪ್ರಾರ್ಥಿಸುತ್ತೇವೆ

## ನಿಮ್ಮ ಚಂದಾ ಹಣವನ್ನು ನವೀಕರಿಸಿ ರೂ. 100/-

'ಅನುದಿನದ ಆಹಾರ' ಮಾಸಿಕ, ಮೇ 2018ರ ಸತ್ಯವೇದದ ಅಧ್ಯಯನಗಳು ನಿಮ್ಮ ಕೈಯಲ್ಲಿ ಬಂದು ಸೇರಿದೆ. ನಿಮ್ಮ ಕುಟುಂಬದವರಿಗೂ, ಸ್ನೇಹಿತರಿಗೂ, ಬಂಧು ಬಳಗದವರಿಗೂ ಈ ಧ್ಯಾನ ಕೃತಿಯ ಬಗ್ಗೆ ತಿಳಿಸಿರಿ, ಪರಿಚಯಿಸಿರಿ.



ಕನಿಷ್ಠ ಒಬ್ಬರ ವಿಳಾಸವನ್ನಾದರೂ ನಮಗೆ ಕಳುಹಿಸಿರಿ.

**ತಪ್ಪದೇ ದೇವರ ರಾಜ್ಯಕ್ಕಾಗಿ ನೆರವಿನ ಹಸ್ತವನ್ನು ನೀಡಿರಿ**

ಈ ಉನ್ನತ ಸೇವೆಗಾಗಿ ನಿಮ್ಮ ಪ್ರಾರ್ಥನೆ ಹಾಗೂ ಉದಾರವಾದ ಕಾಣಿಕೆಗಳನ್ನು ಬಿತ್ತಿ ಕರ್ತನಿಂದ ನೂತನ ಆಶೀರ್ವಾದಗಳನ್ನು ಹೊಂದಿಕೊಳ್ಳಿರಿ.

**ಅನುದಿನದ ಆಹಾರ ಸೇವೆಗೆ ನೀವು ಚಂದಾ ಅಥವಾ ಕಾಣಿಕೆಯನ್ನು ಕಳುಹಿಸಲು ಬಯಸುವುದಾದರೆ, ಎಂ.ಓ (MO) ಅಥವಾ ಕೆಳಗೆ ನೀಡಿರುವ ಬ್ಯಾಂಕ್ (Bank) ಅಕೌಂಟಿಗೆ ಪಾವತಿ ಮಾಡಬಹುದು.**

**Account Name: ANUDHINADA AHARA**

**SBI Bank: 34706509264 IFSC Code: SBIN0005778**

ಅನುದಿನದ ಆಹಾರ ಸೇವೆಯ ಕುರಿತು ಹೆಚ್ಚಿನ ಮಾಹಿತಿ ಹಾಗೂ ಇನ್ನಿತರೆ ವಿಷಯಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ (website) ನೋಡಿ ತಿಳಿದುಕೊಳ್ಳಿರಿ

**www. anudhinadaahara.weebly.com**

ವಿವರಗಳಿಗಾಗಿ ಸಂಪರ್ಕಿಸಿರಿ

**Ph: 080 - 25712448 e-mail: goldenbibletext@gmail.com**

Registered News Paper. RNI No. KARKAN/2000/1321
Postal Registration No. KA/BGGPO/2530/2018-2020
Licenced to post Without Pre-Payment, WPP No. 72,
Posted on 23rd & 24th of Every Month
at Bangalore PSO, Mysore Road, Bangalore - 560026


## ಕ್ರೈಸ್ತೀಯ ಜೀವಿತದಲ್ಲಿ ಕರ್ತನನ್ನು ಸ್ತುತಿಸುವಂಥದ್ದು ಬಹು ಮುಖ್ಯ

ನೀವು ನಿರಂತರವಾಗಿ ಸ್ತುತಿಸಲು ಅನುಕೂಲವಾಗಲೆಂದೇ
ನಾಲ್ಕು ಪುಸ್ತಕಗಳನ್ನು ಸಿದ್ಧಪಡಿಸಿದ್ದೇವೆ.

1. ಕರ್ತನನ್ನು ಸ್ತುತಿಸಲು ಸ್ತೋತ್ರ ಯಜ್ಞಗಳು ಸಾವಿರ.
2. ವಾಗ್ದಾನಗಳನ್ನು ಧ್ಯಾನಿಸಲು ವಾಗ್ದಾನಗಳು ಸಾವಿರ
3. ವಿಶ್ವಾಸವನ್ನು ಹೆಚ್ಚಿಸಲು ವಿಶ್ವಾಸ ಅಂಶಗಳು ಸಾವಿರ
4. ಯೇಸುವಿನ ಮಧುರ ನುಡಿಗಳು ಸಾವಿರ



**Each Rs. 10/-**

**ಇತರ 260 ಸತ್ಯವೇದದ ಸಾರಂಶಗಳನ್ನೊಳಗೊಂಡ**
**ಆತ್ಮೀಕ ಪುಸ್ತಕಗಳು ಲಭ್ಯವಿದೆ**

ಇವುಗಳ ಮೂಲಕ ನೀವು ಬಲ ಹೊಂದಿರಿ, ಅನೇಕರಿಗೆ ಬಳುವಳಿಯಾಗಿ ಕೊಟ್ಟು
ಅವರ ಜೀವಿತದ ಆಶೀರ್ವಾದಕ್ಕೆ ನಿಧಿಯಾಗಿರಿ.

## ಅಗ್ನಿ ಅಭಿಷೇಕ ಕೂಟ ಮೇ - 24, 25, 26

ನೊಂದಣಿ ಶುಲ್ಕ ರೂ. 200/-

ಬೆಂಗಳೂರಿನಿಂದ 130 ಕಿ.ಮೀ. ಆಗುತ್ತದೆ.

**ತಿರುಪತ್ತೂರು ಪ್ರಾರ್ಥನಾ ಮಂದಿರ,**
ಕ್ರಿಸ್ತಕುಲ ಆಶ್ರಮ, ಜೋಲಾರ್ ಪೇಟೆ ಸಮೀಪ.
*ಪ್ರತಿ ದಿನ ಎರಡು ಹೊತ್ತು ಊಟದ ವ್ಯವಸ್ಥೆ ಮಾಡಲಾಗಿದೆ.*



ರೈಲು: ಬೆಂಗಳೂರು – ಚೆನ್ನೈ ರೈಲು. ಇಳಿಯಬೇಕಾದ ಸ್ಥಳ ಜೋಲಾರ್‌ಪೇಟೆ
ಬಸ್: ಬೆಂಗಳೂರು – ಹೊಸೂರು – ಕ್ರಿಷ್ಣಗಿರಿ – ತಿರುಪತ್ತೂರು

*ನೀವು ಅಗ್ನಿಯ ಜ್ವಾಲೆಗಳಾಗಿ ಪ್ರಕಾಶಿಸಲು, ಆತ್ಮನ ವರಗಳನ್ನು ಪಡೆಯಲು, ಕರ್ತನಿಗಾಗಿ ಶಕ್ತಿಯುತವಾಗಿ ಎದ್ದು ಪ್ರಕಾಶಿಸಲು ಬನ್ನಿರಿ, ಎಂದು ನಿಮ್ಮನ್ನು ಪ್ರೀತಿಯಿಂದ ಆಹ್ವಾನಿಸುತ್ತೇವೆ.*



**Anudhinada Ahara**
24th, 'F' Cross, Egipura, Bangalore - 560 047
Ph: 080 - 2571 2448, 9986 571 571, 9341 96 8008
E-mail: goldenbibletext@gmail.com


Published on 15th of Every Month
Owned, Edited & Published by : Selvin Christopher George
Published from : 24th 'F' Cross, Ejipura, Viveknagar, Bangalore - 560 047